ಜನಶಕ್ತಿ

ಕನ್ನಡ ವಾರಪತ್ರಿಕೆ



Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 29
ಜುಲೈ 15, 2012

ಪುಟ 16 ರೂ. 5/-



ಅಸಮರ್ಥ ಸರ್ಕಾರದ ವಿರುದ್ಧ ಸಿಡಿದೇಳಬೇಕು

ಹೊಟ್ಟೆ ತುಂಬಿದವರ ಉಪಚಾರ ಹಸಿದವರ ತಾತ್ಸಾರ



ಭಯೋತ್ಪಾದನೆ ಬಗ್ಗೆ ಬೇಡ ಎಳ್ಳಷ್ಟೂ ಸಹನೆ



ಗಮನ ಸೆಳೆಯುತ್ತಿರುವ ಗಜೇಂದ್ರಗಡ

ಅಪೌಷ್ಟಿಕತೆ-ಸಾವು ಅಧ್ಯಯನ ವರದಿಗೆ ಬೆಲೆ ಕೊಟ್ಟೀತೆ ಸರ್ಕಾರ...?



ಏನಿದು 'ದೇವಕಣ'?

ಹಿಮಾಚಲ ಪ್ರದೇಶ ಜನಾದೇಶವನ್ನು ಕ್ರೋಢೀಕರಿಸುವುದು ಈಗಿನ ಸವಾಲು

ಶಿಮ್ಲಾ ಮಹಾನಗರ ಪಾಲಿಕೆಯ ಮೇಯರ್-ಉಪಮೇಯರ್ ಚುನಾವಣೆಯಲ್ಲಿ ಸಿಪಿಐ(ಎಂ) ಐತಿಹಾಸಿಕ ಜಯ ದಾಖಲಿಸಿದ ಕುರಿತ ವರದಿಯನ್ನು ಪತ್ರಿಕೆಯಲ್ಲಿ ಓದಿದ್ದೀರಿ. ಅಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ನಂತಹ ಎರಡೂ ಪ್ರಬಲ ಪಕ್ಷಗಳನ್ನೂ ಜನರು ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ. ಅದೂ ಹಣ ಬಲ, ತೋಳು ಬಲಗಳ ನೆರವಿದ್ದರೂ, ಜಾತಿ ರಾಜಕಾರಣ ನಡೆಸಿದರೂ ಕೂಡ. ಈ ಗೆಲುವಿನಿಂದ ಕೇವಲ ಶಿಮ್ಲಾದಲ್ಲಿ ಮಾತ್ರವಲ್ಲ, ಇಡೀ ಹಿಮಾಚಲ ಪ್ರದೇಶ ರಾಜ್ಯದಲ್ಲಿ ಎಡ ಮತ್ತು ಪ್ರಗತಿಪರ ಶಕ್ತಿಗಳ ರಾಜಕಾರಣದ ಹೊಸ ಸಾಧ್ಯತೆಯನ್ನು ಈ ಫಲಿತಾಂಶ ಕಲ್ಪಿಸಿಕೊಟ್ಟಿದೆ. ಈ. ಯಶಸ್ಸು ಸಾಧ್ಯವಾದದ್ದು ಹೇಗೆ ? ಈ ಗೆಲುವಿನಿಂದ ದೇಶದ ಇತರ ಭಾಗಗಳ ಪ್ರಜಾಸ್ತಾತ್ಮಕ ಚಳುವಳಿ ಏನು ಕಲಿಯಬಹುದು ? ಓದಿ.

ಸಿಮ್ಸಿಸಿ

ಈ ಚುನಾವಣಾ ಫಲಿತಾಂಶದ ಇತರ ಅಂಶಗಳ ವಿಶ್ಲೇಷಣೆ ಮಾಡುವುದಕ್ಕೂ ಮುನ್ನ ಹಿಮಾಚಲದ ರಾಜಧಾನಿ ಶಿಮ್ಲಾ ಮಹಾನಗರ ಪಾಲಿಕೆಯನ್ನು ಕಳೆದ 26 ವರ್ಷಗಳಿಂದ ನಿರಂತರ ಆಳಿಧ ಕಾಂಗ್ರೆಸ್ ಪಕ್ಷದ ಕುರಿತು ಒಂದಷ್ಟು ಮಾತನ್ನು ಹೇಳಬೇಕಾಗಿದೆ.

ಕಾಂಗ್ರೆಸ್‌ನಲ್ಲಿ ಹಗ್ಗಜಗ್ಗಾಟ

ಮೇಯರ್ ಮತ್ತು ಉಪ ಮೇಯರ್ ಚುನಾವಣೆಯ ಅಧಿಸೂಚನೆ ಹೊರಬೀಳುತ್ತಲೇ ಕಾಂಗ್ರೆಸ್‌ನಲ್ಲಿ ಅಭ್ಯರ್ಥಿಗಾಗಿ ಭಾರೀ ಪೈಪೋಟಿ ಶುರುವಾಗಿತ್ತು. ಇದೊಂದು ರೀತಿಯಲ್ಲಿ ಈ ಪಕ್ಷದ ಸಾಮಾನ್ಯ ಖಾಯಿಲೆಯಾಗಿತ್ತು: ಸತತ ಚುನಾವಣೆಗಳಲ್ಲಿ ಗೆಲುವು ಪಡೆಯುತ್ತಲೇ ಬಂದಿರುವುದರಿಂದಲೋ ಏನೋ ಚುನಾವಣೆ ನಡೆಯುವುದಕ್ಕೆ ಮೊದಲೇ ಪಕ್ಷ ಗೆಲುವು ಸಾಧಿಸಿದೆ ಎಂದು ಮುಖಂಡರು ಘೋಷಿಸಿ ಕೊಂಡರು. ಆದರೆ, ಜನರು ಇನ್ನೊಂದು ತೀರ್ಪು ನೀಡಲಿದ್ದಾರೆ ಎಂಬ ಯಾವ ಮುನ್ಸೂಚನೆಯೂ ಅವರನ್ನು ಕಾಡಲಿಲ್ಲ. ಧುಮಾಲ್ ನೇತೃತ್ವದ ನಾಲ್ಕೂವರೆ ವರ್ಷಗಳ ಬಿಜೆಪಿ ಸರ್ಕಾರದ ಆಡಳಿತ ವಿರೋಧಿ ಅಲೆ ತನ್ನ ಪಾಲಿಗೆ ವರವಾಗಲಿದೆ ಎಂಬ ಭ್ರಮೆಯಲ್ಲಿ ಕಾಂಗ್ರೆಸ್ ನಾಯಕರು ತೇಲಿ ಹೋಗಿದ್ದರು. ಆದರೆ, 26 ವರ್ಷಗಳಿಂದ ಪಾಲಿಕೆ ಆಡಳಿತ ನಡೆಸಿದ್ದ ತಮ್ಮ ವಿರುದ್ಧವೇ ಜನ ರೋಸಿ ಹೋಗಿದ್ದಾರೆ ಎಂಬ ವಾಸ್ತವದ ಅರಿವು ಸ್ವತಃ ಅವರಿಗಿರಲಿಲ್ಲ.

ಹೊಲಸು ನಾಟಕ

ಮಧುಸೂದ್ ಹೆಸರನ್ನು ಮೇಯರ್ ಅಭ್ಯರ್ಥಿಯಾಗಿ ಉಲ್ಲೇಖಿಸುವ ಮುನ್ನ ದೊಡ್ಡ ನಾಟಕವೇ ನಡೆಯಿತು. ಈಕೆಯ ಪತಿ ಶಿಮ್ಲಾದಲ್ಲಿ ದೊಡ್ಡ ಬಿಲ್ಡಿಂಗ್ ಕಂಟ್ರ್ಯಾಕ್ಟರ್. 'ಕಾಂಗ್ರೆಸ್ ಭವನ' ಎಂಬ ಭವ್ಯ ಕಟ್ಟಡ ಕಟ್ಟಿದ್ದ ಖ್ಯಾತಿಯೂ ಇವರದ್ದಾಗಿತ್ತು. ಈತ ತನ್ನ ಪತ್ನಿಯನ್ನು ಮೇಯರ್ ಅಭ್ಯರ್ಥಿಯನ್ನಾಗಿ ಇಳಿಸಲು ಒಂದು ಕೋಟಿ ರೂಪಾಯಿ ವಂತಿಗೆಯನ್ನು ನೀಡಿದ್ದೇನೆ ಎಂದು ಬಹಿರಂಗವಾಗಿಯೇ ಹೇಳಿಕೊಂಡ. ಇನ್ನೊಂದು ಅಚ್ಚರಿ ಎಂದರೆ, ಬಿಜೆಪಿಯಿಂದಲೂ ಈಕೆಯನ್ನು ಅಭ್ಯರ್ಥಿಯನ್ನಾಗಿ ಮಾಡಲು ಈ ಕಂಟ್ರ್ಯಾಕ್ಟರ್ ಎಲ್ಲ ಸಿದ್ಧತೆಗಳನ್ನು ಮಾಡಿದ್ದ. ಬಿಜೆಪಿಯೂ ಅದಕ್ಕೆ ಸಿದ್ಧವಾಗಿತ್ತು. !!

ನಾಮಪತ್ರ ಸಲ್ಲಿಕೆಗೆ ಒಂದು ದಿನ ಮೊದಲು ಆರ್‌ಎಸ್‌ಎಸ್ ಕಚೇರಿಯಿಂದ ಹೊಸ ಗಾಳಿ ಸುದ್ದಿಯನ್ನು ಹರಿಯಬಿಡಲಾಯಿತು. ಕಳೆದ ಎರಡೂವರೆ ವರ್ಷಗಳಿಂದ ಕಾಂಗ್ರೆಸ್ ಮೇಯರ್ ಆಗಿದ್ದ ಮಧುಸೂದ್ ಈಗ ಬಿಜೆಪಿಯಿಂದ ಕಣಕ್ಕಿಳಿಯಲಿದ್ದಾರೆ ಎಂಬ ಹೊಸ ಸುದ್ದಿ ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿತು. ಈಕೆ ರಾತ್ರೋರಾತ್ರಿ ಪಕ್ಷಾಂತರ ಯಾಕೆ ಮಾಡಲಿದ್ದಾರೆ ಎಂಬುದು ಸ್ವತಃ ಮಧು ಅವರಿಗೆ ದೊಡ್ಡ ವಿಷಯವೇ ಆಗಿರಲಿಲ್ಲ.

ಇನ್ನೊಂದು ಗಮನಾರ್ಹ ಅಂಶ ಎಂದರೆ ಕಾಂಗ್ರೆಸ್ ಮೇಯರ್ ಚುನಾವಣೆಯಲ್ಲಿ ಮೂರನೇ ಸ್ಥಾನಕ್ಕೆ ಇಳಿಯಿತು. ಇದಕ್ಕೆ ಮುಖ್ಯ ಕಾರಣ ಎಂದರೆ ಕಾಂಗ್ರೆಸ್ ಜನರಿಂದ ದೂರವಾಗಿದ್ದು, ಆಮ್‌ಆದ್ಮಿ ಎಂಬ ಘೋಷಣೆಗೆ ವ್ಯತಿರಿಕ್ತವಾಗಿ ನಡೆದುಕೊಂಡಿದ್ದು. ಹಗರಣಗಳ ಕಳಂಕ, ಜನವಿರೋಧಿ ನವ ಉದಾರೀಕರಣ ನೀತಿಗಳಿಂದಾಗಿ ಬೆಲೆಗಳು ಏರಿಕೆಯಾದ್ದವು. ಇದರ ಜೊತೆಗೆ ಸ್ಥಳೀಯ ಕಾರಣಗಳನ್ನೂ ವಿಶ್ಲೇಷಿಸಬೇಕಾಗಿದೆ.

ಕೇಂದ್ರ ಮಂತ್ರಿ ಆನಂದ್ ಶರ್ಮಾ ಅವರ ಇಂಟರ್‌ನೆಟ್-ಅಂತರ್ ಜಾಲ ಆಧಾರಿತ ಚುನಾವಣಾ ತಂತ್ರಗಳು ಫಲ ನೀಡಲಿಲ್ಲ. ಏರ್‌ಕಂಡೀಷನ್ ರೂಂನಲ್ಲಿ ಶರ್ಮಾ ಮೀಟಿಂಗ್ ಮೇಲೆ ಮೀಟಿಂಗ್ ನಡೆಸಿದರು. ಆದರೆ, ಜನರೆಡೆಗೆ ತೆರಳಲೇ ಇಲ್ಲ.

ಇನ್ನೊಂದೆಡೆ ಎರಡು ಪ್ರಮುಖ ಪಕ್ಷಗಳ ನಡುವಿನ ಆಯ್ಕೆ ವಿಚಾರಕ್ಕೆ ಬಂದಾಗ ಜನರು ಕಾಂಗ್ರೆಸ್‌ಗಿಂತ ಒಂದಷ್ಟು ಬಿಜೆಪಿಗೇ ಮಣೆ ಹಾಕಿದರು. ರಾಜ್ಯದ ಆಡಳಿತದಲ್ಲಿ ಇರುವ ಪಕ್ಷವೇ ಮಹಾನಗರಪಾಲಿಕೆಯುಲ್ಲಿಯೂ ಅಧಿಕಾರಕ್ಕೆ ಬಂದರೆ ಅನುಕೂಲ ಎಂಬ ಭಾವನೆಯನ್ನು ಬಿತ್ತಿ ಬಿಜೆಪಿ ಕೊಂಚ ಲಾಭ ಮಾಡಿಕೊಂಡಿತು. ಮೂರನೇದಾಗಿ ಎರಡೂವರೆಗೆ ವರ್ಷ ಮೇಯರ್ ಆಗಿದ್ದ ಮಧು ಸೂದ್ ಆಡಳಿತವನ್ನು ಜನರು ಅನುಭವಿಸಿ ಜನ ಹಲವು ವಿಧದಿಂದ ರೋಸಿ ಹೋಗಿದ್ದರು. ದಶಕಗಳಿಂದ ಭೂಮಿ ಹಂಚಿಕೆಯಾಗದೇ ಬಡವರಿಗೆ ಆಶ್ರಯ ಮನೆಗಳು ದಕ್ಕಿರಲಿಲ್ಲ. ಆದರೆ ಅರ್ಜಿ ಸಲ್ಲಿಸಿದ ಒಂದೇ ಒಂದು ದಿನದಲ್ಲಿ ಶ್ರೀಮಂತರ ಕಾಲನಿಗಳಿಗೆ ಲೈಸನ್ಸ್‌ಗಳು ಲಭ್ಯವಾಗಿ ಬಿಟ್ಟವು.

ಕೊನೆಯದಾಗಿ ಮಧುಸೂದ್ ದೊಡ್ಡ ವ್ಯಾಪಾರಿ ಸಮುದಾಯಕ್ಕೆ ಸೇರಿದವರಾಗಿದ್ದರು. ಅದು ರಾಜಕೀಯವಾಗಿಯೂ ಪ್ರಭಾವಿ ಸಮುದಾಯವಾಗಿತ್ತು. ಜೊತೆಗೆ ಈಕೆ ಕೋಟ್ಯಾಧೀಶರ ಕುಟುಂಬವೊಂದರ ಸದಸ್ಯೆಯಾಗಿದ್ದರು. ಇದೇ ಕಾರಣಕ್ಕೆ ಸೂದ್‌ಗೆ ಬಿಜೆಪಿಯೂ ಗಾಳ ಹಾಕುತ್ತಿತ್ತು. ಆದರೆ, ಇನ್ನೊಂದೆಡೆ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಸಣ್ಣ ಶಕ್ತಿಯೇ ಆಗಿದ್ದರೂ ದೃಢವಾಗಿ ಹೋರಾಡಿದರೆ ಪರ್ಯಾಯವನ್ನು ಒದಗಿಸಿದರೆ ಕೋಮುವಾದಿ, ಜಾತಿ ಲೆಕ್ಕಾಚಾರಗಳನ್ನು ಬುಡಮೇಲು ಮಾಡಬಹುದು ಎಂಬ ವಿಷಯ ಫಲಿತಾಂಶದಿಂದ ಸ್ಪಷ್ಟಗೊಂಡಿತು.

ಬಿಜೆಪಿಯ ನಾನಾ ಕುತಂತ್ರಗಳು ಮತ್ತು ದುಸ್ಥಿತಿ

ಮೇಯರ್ ಚುನಾವಣೆ ಗೆಲ್ಲಲು ಬಿಜೆಪಿ ನಡೆಸಿದ ಮಸಲತ್ತು, ಕುತಂತ್ರಗಳದ್ದೇ ಒಂದು ದೊಡ್ಡ ಕತೆ. ಅಸಲಿಗೆ ಮೇಯರ್, ಉಪ ಮೇಯರ್ ಸ್ಥಾನಕ್ಕೆ ನೇರ ಚುನಾವಣಾ ಪದ್ಧತಿ ಜಾರಿಗೆ ತಂದದ್ದೇ ಹೇಗಾದರೂ ಕಾಂಗ್ರೆಸ್ ಕೈಯಿಂದ ಮಹಾನಗರ ಪಾಲಿಕೆಯನ್ನು ಕಸಿದುಕೊಳ್ಳಲು. ನವೆಂಬರ್ 2012ರಲ್ಲಿ ನಡೆಯಲಿರುವ ಹಿಮಾಚಲ ವಿಧಾನ ಸಭಾ ಚುನಾವಣೆಗೆ ಈ ಮೇಯರ್ ಚುನಾವಣೆಯನ್ನು ಸೆಮಿಫೈನಲ್ ಎಂದು ಹೇಳಿಕೊಂಡೇ ಬರಲಾಯಿತು.

ಪಟ್ಟಿಯಿಂದ ಮತದಾರರ ಉಚ್ಚಾಟನೆ

2007 ರಲ್ಲಿ 1.11 ಲಕ್ಷ ಇದ್ದ ಶಿಮ್ಲಾ ಮತದಾರರ ಸಂಖ್ಯೆಯನ್ನು ಚುನಾವಣಾ ಆಯೋಗದೊಳಗೆ ನುಸುಳಿದ ಬಿಜೆಪಿಯು 2012 ರಲ್ಲಿ 80 ಸಾವಿರಕ್ಕೆ ಕುಸಿಯುವಂತೆ ಮಾಡಿತು. ಮಹಾನಗರ ಪಾಲಿಕೆ ಮತದಾರರ ಪಟ್ಟಿಯಲ್ಲಿದ್ದವರ ಹೆಸರು ವಿಧಾನ ಸಭಾ ಮತದಾರರ ಪಟ್ಟಿ, ಅಥವಾ ಲೋಕಸಭಾ ಮತದಾರರ ಪಟ್ಟಿಯಲ್ಲಿ ಬೇರೆ ವಾರ್ಡ್‌ನಲ್ಲಿ ಇರುವಂತಿಲ್ಲ ಎಂಬ ನಿಯಮ ಬಳಸಿ ಗೊಂದಲ ಮೂಡಿಸಿ ಬಿಜೆಪಿ ಇದನ್ನು ಸಾಧಿಸಿತ್ತು. ಸಿಪಿಐ(ಎಂ) ಪಕ್ಷಕ್ಕೆ ಎಲ್ಲೆಲ್ಲಿ ಮತಗಳು ಹೆಚ್ಚಾಗಿ ಬರುವ ಸಂಭವ ಇತ್ತೋ ಅಲ್ಲೇ ಈ ಮತದಾರರರ ಉಚ್ಚಾಟನೆ ಜೋರಾಗಿ ನಡೆದಿತ್ತು. ಈ ಕುತಂತ್ರ ಯಾವ ಮಟ್ಟದಲ್ಲಿತ್ತು ಎಂದರೆ ಈಗ ಮೇಯರ್ ಆಗಿ ಆಯ್ಕೆಯಾಗಿರುವ ಸಂಜಯ್ ಚೌವ್ಹಾಣ್ ಮತ್ತು ಉಪಮೇಯರ್ ಆಗಿ ಆಯ್ಕೆಯಾಗಿರುವ ಟಿಕೆಂದರ್ ಪವಾರ್ ಇಬ್ಬರ ಹೆಸರುಗಳನ್ನೂ ಪಟ್ಟಿಯಿಂದ ಕಿತ್ತು ಹಾಕಲಾಗಿತ್ತು !!! ಚುನಾವಣಾ ಆಯೋಗಕ್ಕೆ ದೂರು ಒಯ್ದು ತೀವ್ರವಾಗಿ ಪ್ರತಿಭಟಿಸಿದ್ದರಿಂದ ಮಾತ್ರವೇ ನಂತರ ಈ ಹೆಸರುಗಳನ್ನು ಸೇರಿಸಲು ಸಾಧ್ಯವಾಯ್ತು. ಸಿಪಿಐ(ಎಂ) ಪಕ್ಷದಿಂದ ಗೆದ್ದ ಮತ್ತೊಬ್ಬ ಪಾಲಿಕೆ ಸದಸ್ಯೆ ಮೀರಾಶರ್ಮ ಅವರಿಗೂ ಇದೇ ಗತಿ ತೋರಿಸಲಾಗಿತ್ತು. ಕೊನೆಗೆ ನ್ಯಾಯಾಲಯಕ್ಕೆ ದೂರು ಒಯ್ದು ನ್ಯಾಯಾಲಯ ನಿರ್ದೇಶನ ನೀಡಿದ ಮೇಲಷ್ಟೆ ಮೀರಾ ಶರ್ಮರ ಹೆಸರನ್ನು ಪಟ್ಟಿಗೆ ಸೇರಿಸಲಾಯಿತು.

ಹಿಮಾಚಲ ವಿ.ವಿ., ಸರ್ಕಾರಿ ವೈದ್ಯಕೀಯ ಕಾಲೇಜು, ಮುಂತಾದ ಹಲವಾರು ಪ್ರಮುಖ ಶಿಕ್ಷಣ ಸಂಸ್ಥೆಗಳಿಗೆ ನಾನಾ ಭಾಗಗಳಿಂದ ಬಂದು ಸೇರಿ ಶಿಮ್ಲಾದ ಹಾಸ್ಟೆಲ್‌ಗಳಲ್ಲಿ ವಾಸಿಸುವ ವಿದ್ಯಾರ್ಥಿಗಳನ್ನು ಮತದಾರರರ ಪಟ್ಟಿಗೆ ಸೇರಿಸುವುದನ್ನೇ ತಡೆ ಹಿಡಿಯಲಾಗಿತ್ತು. ಏಕೆಂದರೆ ಅವರಲ್ಲಿ ಬಹಳಷ್ಟು ಜನ ಎಸ್‌ಎಫ್‌ಐ ಸಂಘಟನೆಯ ಸದಸ್ಯರು, ಕಾರ್ಯಕರ್ತರಾಗಿದ್ದು ಅವರ ಓಟು ಸಿಪಿಐ(ಎಂ) ಕಡೆಗೆ ವಾಲುವುದು ಖಚಿತವಿತ್ತು. ಹೋರಾಟದ ಮೂಲಕವೇ ಈ ವಿದ್ಯಾರ್ಥಿಗಳ ಹೆಸರುಗಳನ್ನು ಸೇರಿಸಲಾಯಿತು. ಚುನಾವಣೆಯ ದಿನ ಮತದಾರರ ಮೊಬೈಲ್‌ಗಳಿಗೆ ಒಂದು ಬೆದರಿಕೆ ಎಸ್‌ಎಂ ಎಸ್ ಬಂತು. ಅದನ್ನು ಎಡಿಎಂ.ಕಾನೂನು ಸುವ್ಯವಸ್ಥೆ ವಿಭಾಗದಿಂದ ಕಳಿಸಲಾದಂತೆ ಇತ್ತು. ಮಹಾನಗರ ಪಾಲಿಕೆ ಮತದಾರರ ಪಟ್ಟಿಯಲ್ಲಿರುವ ಮತದಾರರ ಹೆಸರು ಅಕಸ್ಮಾತ್ ವಿಧಾನ ಸಭಾ ಅಥವಾ ಪಾರ್ಲಿಮೆಂಟ್ ಮತದಾರರ ಪಟ್ಟಿಯಲ್ಲಿ ಬೇರೆ ವಾರ್ಡ್‌ನಲ್ಲಿದ್ದು' ಅಂತಹವರು ಈಗ ಮತದಾನ ಮಾಡಿದರೆ ಕಾನೂನು ಕ್ರಮ ವಹಿಸಲಾಗುವುದು ಎಚ್ಚರ ಎಂದು ಬೆದರಿಸುವ ಸೂಚನೆ ಅದರಲ್ಲಿತ್ತು. ಈ ಬಗೆಗೆ ವಿಚಾರಿಸಿದರೆ ಸರ್ಕಾರದ ಎಡಿಎಂ- ಕಾನೂನು ಸುವ್ಯವಸ್ಥೆ ವಿಭಾಗದಿಂದ ಅಂತಹ ಯಾವ ಸೂಚನೆ ಕಳಿಸಲಾಗಿಲ್ಲವೆಂದು ತಿಳಿಸಲಾಯಿತು. ಎಸ್‌ಎಂಎಸ್ ಹೇಗೆ ಬಂತು ಇಲ್ಲಿಯವರಗೂ ಪತ್ತೆಮಾಡಿಲ್ಲ, ಬಹುಶಃ ತಾವು ಪತ್ತೆ ಮಾಡುವ ಸಾಧ್ಯತೆ ಕೂಡ ಇಲ್ಲ.


ವಿಜಯೋತ್ಸವ ರ್‍ಯಾಲಿ

ಹಣ-ಹೆಂಡ ಆಮಿಷಗಳ ಹೊಳೆ

ಪುಟ 4ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ವಿಶ್ವ ಪರಂಪರೆಯ ಪಟ್ಟಿಗೆ ಪಶ್ಚಿಮ ಘಟ್ಟಗಳು: ಸಾಧಕ ಬಾಧಕಗಳ ಅಧ್ಯಯನ ಮುಂದುವರೆಯಲಿ

ರಷ್ಯಾದ ಸೆಂಟ್ ಪೀಟರ್ಸ್ ಬರ್ಗ್‌ನಲ್ಲಿ ನಡೆದ ವಿಶ್ವ ಪಾರಂಪರಿಕ ಸಮಿತಿ ಸಭೆಯಲ್ಲಿ ಭಾಗವಹಿಸಿದ್ದ 17 ದೇಶಗಳ ಪ್ರತಿನಿಧಿಗಳು ಅಪರೂಪದ ಜೀವವೈವಿಧ್ಯತೆಗಳ ತಾಣವಾಗಿರುವ ಪಶ್ಚಿಮ ಘಟ್ಟಗಳನ್ನು ವಿಶ್ವ ಪರಂಪರೆಯ ಪಟ್ಟಿಗೆ ಸೇರಿಸುವ ಮಹತ್ವದ ನಿರ್ಧಾರ ತೆಗೆದುಕೊಂಡಿದ್ದಾರೆ. ಪಶ್ಚಿಮ ಘಟ್ಟಗಳ ಪರ್ವತ ಶ್ರೇಣಿ ಗುಜರಾತನಲ್ಲಿ ಆರಂಭವಾಗಿ ಮಹಾರಾಷ್ಟ್ರ, ಗೋವ, ಕರ್ನಾಟಕ, ತಮಿಳನಾಡು ಮತ್ತು ಕೇರಳದಲ್ಲಿ ಹಾದು ಹೋಗಿ ಕನ್ಯಾಕುಮಾರಿಯಲ್ಲಿ ಕೊನೆಗೊಂಡಿದೆ. ಸುಮಾರು 1,600 ಕಿ.ಮೀ. ಉದ್ದಕ್ಕೆ ವ್ಯಾಪಿಸಿ ಸುಮಾರು 8,000 ಚದರ ಕಿ.ಮೀ. ಪ್ರದೇಶದಲ್ಲಿ ಹಬ್ಬಿಕೊಂಡಿರುವ ಪಶ್ಚಿಮ ಘಟ್ಟಗಳ ಕಾಡುಗಳು ಹಿಮಾಲಯ ಪರ್ವತ ಶ್ರೇಣಿಗಳ ಕಾಡುಗಳಿಗಿಂತ ಪುರಾತನವಾದವುಗಳಾಗಿವೆ. ಈ ಕಾಡುಗಳು ಮಳೆಯನ್ನು ತರುವ ಕಾಡುಗಳೆಂದೇ ಪ್ರಸಿದ್ಧವಾಗಿವೆ. ಪಶ್ಚಿಮ ಘಟ್ಟಗಳು ಹಲವು ಜೀವನದಿಗಳ ಉಗಮ ಸ್ಥಾನವೂ ಆಗಿದೆ. ಎಲ್ಲಕ್ಕೂ ಮುಖ್ಯವಾಗಿ ವಿನಾಶದ ಅಂಚಿನಲ್ಲಿರುವ ಸುಮಾರು 325 ಜೀವ ಪ್ರಭೇದಗಳು ಪಶ್ಚಿಮ ಘಟ್ಟ ವ್ಯಾಪ್ತಿಯಲ್ಲಿ ಕಾಣಸಿಗುತ್ತದೆ. ಶೇ 30 ರಷ್ಟು ಏಷ್ಯಾ ಆನೆಗಳು, ಶೇ17ರಷ್ಟು ಹುಲಿಗಳು ಪಶ್ಚಿಮ ಘಟ್ಟಗಳಲ್ಲಿ ನೆಲೆಸಿವೆ. 5 ಸಾವಿರ ಹೂ ಬಿಡುವ ಸಸ್ಯಗಳು, 139 ಸಸ್ತನಿಗಳು, 508 ಪಕ್ಷಿ ಪ್ರಭೇದಗಳು, 179 ಉಬಯಚರಿಗಳಿಗೆ ಈ ಘಟ್ಟಗಳು ನೆಲೆಯಾಗಿದೆ. ಇನ್ನೂ ಪತ್ತೆಯಾಗದ ಅನೇಕ ಜೀವ ಪ್ರಬೇಧಗಳು ಈ ಘಟ್ಟಸಾಲಿನ ಕಾಡುಗಳಲ್ಲಿ ವಾಸಿಸುತ್ತವೆ. ಇವೆಲ್ಲವನ್ನು ಮುಂದಿನ ಪೀಳಿಗೆಗಾಗಿ ಸಂರಕ್ಷಿಸಿ ಇಡುವುದು ನಮ್ಮ ಜವಾಬ್ದಾರಿಯಗಿದೆ. ಯುನೆಸ್ಕೊ ವಿಶ್ವ ಪರಂಪರೆ ತಾಣಗಳ ಪಟ್ಟಗೆ ಪಶ್ಚಿಮ ಘಟ್ಟಗಳ ಸೇರ್ಪಡೆಯಾಗಿರುವುದರಿಂದ ಇಂತಹ ನಿಸರ್ಗ ಸಿರಿಯ ರಕ್ಷಣೆಗೆ ಹೆಚ್ಚಿನ ನೆರವು ದೊರೆಯಲಿದೆ.

ಕರ್ನಾಟಕದ ಪುಷ್ಪಗಿರಿ, ಬ್ರಹ್ಮಗಿರಿ, ತಲಕಾವೇರಿ, ಕುದುರೆಮುಖ ಅರಣ್ಯ, ಸೋಮೇಶ್ವರ ಸಂರಕ್ಷಿತ ಅರಣ್ಯ, ಸೋಮೇಶ್ವರ ಅರಣ್ಯ, ಆಗುಂಬೆ ಸಂರಕ್ಷಿತ ಅರಣ್ಯ, ಬಲಹಳ್ಳಿ ಸಂರಕ್ಷಿತ ಅರಣ್ಯ ಸೇರಿದಂತೆ ಒಟ್ಟು ಪಶ್ಚಿಮ ಘಟ್ಟ ವ್ಯಾಪ್ತಿಯ 39 ಪ್ರದೇಶಗಳನ್ನು ವಿಶ್ವ ಪರಂಪರೆಯ ಪಟ್ಟಿಗೆ ಸೇರಿಸಲಾಗಿದೆ ಎಂದು ತಿಳಿದುಬಂದಿದೆ. ಇದನ್ನು ಪರಿಸರವಾದಿ ಸಂಘಟನೆಗಳು ಸಹಜವಾಗಿಯೇ ಸ್ವಾಗತಿಸಿವೆ. ಆದರೆ, ವಿಶ್ವ ಪರಂಪರೆಯ ಪಟ್ಟಿಗೆ ಪಶ್ಚಿಮ ಘಟ್ಟಗಳನ್ನು ಸೇರ್ಪಡೆ ಮಾಡುವುದರಿಂದ ಅಲ್ಲಿ ಯಾವುದೇ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ ಮತ್ತು ಅದರಿಂದ ಅರಣ್ಯವಾಸಿ ಗಿರಿಜನರ ಅಭಿವೃದ್ಧಿಗೆ ಅಡ್ಡಿಯಾಗುತ್ತದೆ ಎಂದು ರಾಜ್ಯ ಬಿಜೆಪಿ ಸರ್ಕಾರ ಆಕ್ಷೇಪ ವ್ಯಕ್ತಪಡಿಸುತ್ತಿದೆ. ರಾಜ್ಯ ಸರ್ಕಾರದ ನಡೆಯನ್ನು ಗಮನಿಸಿದರೆ ಅರಣ್ಯವಾಸಿ ಗಿರಿಜನರ ಬಗ್ಗೆ ಕಾಳಜಿಗಿಂತಲೂ ಗಣಿ, ಟಿಂಬರ್, ಎಸ್ಟೇಟ್ ಲಾಬಿಗಳ ಪರವಾದ ಕಾಳಜಿಯೇ ಮುಖ್ಯವಾಗಿರುವಂತೆ ಕಾಣುತ್ತದೆ.

ಆದರೆ ಪಶ್ಚಿಮ ಘಟ್ಟಗಳ ಜೀವ ವೈವಿಧ್ಯತೆಯನ್ನು ಸಂರಕ್ಷಿಸುವ ಪ್ರಶ್ನೆಗೆ ಇನ್ನೊಂದು ಆಯಾಮ ಇದ್ದೇ ಇದೆ. ಆ ಅಭೇದ್ಯ ಅರಣ್ಯಗಳಲ್ಲಿ ಆದಿವಾಸಿ ಗಿರಿಜನರು ಸಹ ವಾಸವಾಗಿದ್ದಾರೆ. ಕಾಡಿನಲ್ಲೇ ಹುಟ್ಟಿ ಬೆಳೆದ ಅವರಿಗೆ ಕಾಡಿನಲ್ಲೇ ವಾಸಿಸುವ ಹಕ್ಕಿದೆ. ಅವರ ಭೂಮಿ, ಅವರ ವ್ಯವಸಾಯ, ಅರಣ್ಯ ಉತ್ಪನ್ನಗಳ ಮೇಲೆ ಅವರ ಹಕ್ಕುಗಳಿಗೂ ರಕ್ಷಣೆ ಬೇಕು. ಪರಿಸರಕ್ಕೆ ಧಕ್ಕೆಯಾಗದ ರೀತಿಯಲ್ಲಿ ಅವರಿಗೆ ಕಾಡಿನಲ್ಲೇ ಕನಿಷ್ಠ ನಾಗರಿಕ ಸೌಲಭ್ಯಗಳನ್ನು ಒದಗಿಸಬೇಕು. ಗಿಡ ಮರ, ಪಶು ಪಕ್ಷಿಗಳ ರಕ್ಷಣೆಯ ಹೆಸರಿನಲ್ಲಿ ಅಲ್ಲಿ ವಾಸವಿರುವ ಮನುಷ್ಯ ಜೀವಿಗಳನ್ನು ಕಡೆಗಣಿಸಬಾರದು. ಪಶ್ಚಿಮ ಘಟ್ಟಗಳನ್ನು ವಿಶ್ವ ಪರಂಪರೆಯ ಪಟ್ಟಿಗೆ ಸೇರಿಸುವುದರಿಂದ ಅಲ್ಲಿನ ಮೂಲ ನಿವಾಸಿಗಳ ಮೇಲೆ ಆಗುವ ಪರಿಣಾಮದ ಕುರಿತು ಅಧ್ಯಯನ ಮುಂದುವರೆಸಬೇಕು.


ಕೊಡಗಿನ ಪುಷ್ಪಗಿರಿ, ಬ್ರಹ್ಮಗಿರಿ, ಮತ್ತು ತಲಕಾವೇರಿ ವ್ಯಾಪ್ತಿಯ 652 ಚ.ಕಿ.ಮೀ: ಪ್ರದೇಶವನ್ನು ವಿಶ್ವ ಪರಂಪರೆಯ ಪಟ್ಟಿಗೆ ಸೇರಿಸಲಾಗಿದೆ ಎಂದು ಹೇಳಲಾಗುತ್ತದೆ. ಕೊಡಗಿನಲ್ಲಿ ಈ ಕುರಿತು ಈಗಾಗಲೇ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಕೊಡಗಿನ ಪ್ರದೇಶಗಳನ್ನು ವಿಶ್ವ ಪರಂಪರೆಗೆ ಸೇರಿಸುವುದರಿಂದ ಕಾಫಿ ಅಂತಹ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿರುವ ಬೆಳೆಗಾರರಿಗೆ ತೊಂದರೆಯಾಗಲಿದೆ. ಅದರಲ್ಲಿಯು ಸಣ್ಣ ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಒಳಗಾಗುವರು. ಆದರಿಂದ ಪಶ್ಚಿಮ ಘಟ್ಟಗಳನ್ನು ವಿಶ್ವ ಪರಂಪರೆಗೆ ಸೇರಿಸುವುದರ ಸಾಧಕ ಬಾಧಕಗಳ ಬಗ್ಗೆ ವಸ್ತು ನಿಷ್ಪಪಾವ ಅಧ್ಯಯನವನ್ನು ಮುಂದುವರೆಸುವುದು ಅತ್ಯಗತ್ಯವಾಗಿದೆ. ಸಂಬಂಧಪಟ್ಟ ಸಮುದಾಯಗಳಲ್ಲಿ ಈ ಕುರಿತು ಇರುವ ಭೀತಿ, ಅನುಮಾನಗಳಿಗೆ ಉತ್ತರ ದೊರೆಯಬೇಕು.

ಅಪೌಷ್ಟಿಕತೆ– ಸಾವು: ನ್ಯಾಯಾಲಯದ ವರದಿಗೆ ಬೆಲೆ ಕೊಟ್ಟೀತೆ ಸರಕಾರ?

ರಾಜಕೀಯ ಅರಾಜಕತೆ. ಹಿಂಸಾಚಾರ,ಭ್ರಷ್ಟತೆ ಮತ್ತು ಅನಭಿವೃದ್ಧಿಗೆ ಬಿಹಾರವನ್ನು ಸಂಕೇತಿಸಲಾಗುತ್ತಿತ್ತು. ದಾರಿದ್ರ್ಯತೆ, ಕಿತ್ತು ತಿನ್ನುವ ಬಡತನ, ಅಪೌಷ್ಟಿಕತೆಗೆ ಸೊಮಾಲಿಯವನ್ನೂ ತೋರಿಸಲಾಗುತ್ತಿತ್ತು. ಪ್ರಾದೇಶಿಕ ಅಸಮಾನತೆಗೆ ತೆಲಂಗಾಣವನ್ನೋ, ವಿದರ್ಭದತ್ತ ಬೆಟ್ಟು ಮಾಡಲಾಗುತ್ತಿತ್ತು. ಹೀಗೆ ಹಲವು ಸಂಗತಿಗಳು ಉದಾಹರಣೆಯಾಗಿ ನಿಲ್ಲುತ್ತಿದ್ದವು. ಆದರೆ ಇವು ನಮ್ಮಲ್ಲೇ, ನಮ್ಮ ರಾಜ್ಯದೊಳಗೇ ಇವೆ ಎಂಬ ಸತ್ಯ ಗೋಚರವಾಗುತ್ತಿರುವುದು ಸರಿದ ಕಾಲದ ಒಂದು ನಿದರ್ಶನ.

ನಾಗರೀಕ ಸರಕಾರವೇ?

ವಿದೇಶಿ ಬಂಡವಾಳದ ಹರಿವು, ಅಭಿವೃದ್ಧಿಯ ಹೊಳೆಯುಬ್ಬರ ಕೊಡುವ ಕರ್ನಾಟಕದ ಚಿತ್ರಣಕ್ಕೂ, ನೊಂದ ನೆಲ, ನೆಲದ ಮಕ್ಕಳು ಹೇಳುವ ಸತ್ಯ ಕಥೆಗಳೇ ಬೇರೆ. ಪ್ರಾದೇಶಿಕ ಅಸಮಾನತೆಯೆಂಬುದು ಇರುವುದು ರಾಜ್ಯದಲ್ಲಿ ಕೇವಲ ಉತ್ತರ ಕರ್ನಾಟಕ, ಹೈದ್ರಾಬಾದ್ ಕರ್ನಾಟಕವಷ್ಟೇ ಅಲ್ಲ ಅದು ಮುಂದುವರಿದಿದೆಯೆನ್ನಲಾಗುತ್ತಿರುವ ದಕ್ಷಿಣ ಕರ್ನಾಟಕದ ಚಾಮರಾಜನಗರ, ಚಿಕ್ಕಬಳ್ಳಾಪುರದ ಬಾಗೇಪಲ್ಲಿ, ತುಮಕೂರಿನ ಮಧುಗಿರಿಯಂತಹವೂ ಇವೆ ಎಂಬುದನ್ನು ಡಾ. ನಂಜುಂಡಪ್ಪನವರ ವರದಿ ತೆರೆದಿಟ್ಟಿತು. ಬಿಜೆಪಿ ದುರಾಡಳಿತವು ಬಿಹಾರವನ್ನು ಹಿಂದಿಕ್ಕಿತು. ದೇವದುರ್ಗದಲ್ಲಿನ ಎಲುಬಿನ ಹಂದರವಾದ ಮಕ್ಕಳು, ಚಿವುಟಿದರೂ ತೊಟ್ಟು ರಕ್ತ ಚಿಮ್ಮದ ಮಹಿಳೆಯರಲ್ಲಿನ ಅಪೌಷ್ಟಿಕತೆ, ಸಾವುಗಳು ಹಲವು ಸೊಮಾಲಿಯಾಗಳ ಸವಾಲನ್ನು ಎಸೆಯಿತು. ಇವೆಲ್ಲಾ ನಮ್ಮನ್ನಾಳುವವರ ಕಣ್ಣು ತೆರೆಸಿತೇ?.




ನಿಜ, ರಾಯಚೂರು, ಯಾದಗಿ, ಗುಲ್ಬರ್ಗಾ, ಭೀದರ್, ಬೆಳಗಾಂ, ಕೋಲಾರ, ಚಿಕ್ಕ ಬಳ್ಳಾಪುರ ಒಳಗೊಂಡು ಹಲವು ಜಿಲ್ಲೆಗಳಲ್ಲಿನ ಅಪೌಷ್ಟಿಕತೆಯು ಭೀಕರತೆ, ಸರಳಾಟ ಮಾಧ್ಯಮಗಳಲ್ಲಿ ಬಂದ ನಂತರ ಸರಕಾರ ಒಂದಿಷ್ಟು ಅಧಿಕಾರಿಗಳನ್ನು ಓಡಾಡಿಸುವ ಕೆಲಸವನ್ನೇನೋ ಮಾಡಿತು, ನಂತರ ಮರೆಯಿತು. ಆದರೆ ಜನಸಂಘಟನೆಗಳು ಈ ಪ್ರಶ್ನೆಯನ್ನು ಕೈ ಬಿಡಲಿಲ್ಲ, ಬಿಟ್ಟಿಲ್ಲ. ಅದು ನ್ಯಾಯಾಲಯದ ಕಣ್ಣು ತೆರೆಸಿ ವಾಸ್ತವದ ಹುಡುಕಾಟಕ್ಕೆ, ತನ್ನ ಪರಿಧಿಯೊಳಗಿನ ಕ್ರಿಯಾಶೀಲತೆಗೆ ಚಾಲನೆ ನೀಡಿತು. ಪರಿಣಾಮ ಕರ್ನಾಟಕ ಉಚ್ಚ ನ್ಯಾಯಾಲಯವು ಗೌ.ನ್ಯಾಯಮೂರ್ತಿ. ಎನ್.ಕೆ. ಪಾಟೀಲರ ನೇತೃತ್ವದ ಒಂಬತ್ತು ಸದಸ್ಯರ ಸಮಿತಿ ಇದೀಗ ಮಧ್ಯಂತರ ವರದಿಯನ್ನು ಪ್ರಕಟಿಸಿದೆ. ಅದು ಸರಕಾರದ ಪ್ರತಿನಿಧಿಗಳನ್ನು ಕಟಕಟೆಯಲ್ಲಿ ನಿಲ್ಲಿಸಿದೆ. ಪ್ರಶ್ನಿಸಿದೆ, ಹಲವು ಪರಿಹಾರದ ಸೂಚನೆಗಳನ್ನೂ ನೀಡಿದೆ. ಇದೇ ಕೆಲಸವನ್ನು 'ನಾಗರೀಕ ಸರಕಾರ' ಮಾಡಬಹುದಿತ್ತಲ್ಲ?!.

ಧಾರುಣ ಸ್ಥಿತಿ

ನ್ಯಾ. ಪಾಟೀಲ್‌ರವರು ಅಧ್ಯಯನ ವೇಳೆ ಕಂಡುಂಡ ಧಾರುಣ ಸತ್ಯಗಳು ಕನಿಷ್ಟ ಮಾನವೀಯತೆಯಿರುವ ಯಾರನ್ನೂ ಕಲಕದಿರಲಾರದು. ಭಾರತ ಅಭಿವೃದ್ಧಿಶೀಲ ದೇಶವೆಂಬುದೇನೋ ಸರಿ. ಇಲ್ಲೇ ಪ್ರಪಂಚದ ಅತೀ ಶ್ರೀಮಂತರ ಪಟ್ಟಿಯಲ್ಲಿರುವ ಕೆಲವರು ಇದ್ದಾರೆ ನಿಜ, ಆದರೆ ಹಸಿವು, ಅಪೌಷ್ಟಿಕತೆ ಎಳೆ ಜೀವಗಳ ಮರಣದಲ್ಲಿ ವಿಶ್ವದಲ್ಲೇ ಭಾರತ ಎರಡನೇ ಸ್ಥಾನದಲ್ಲಿದೆ, ಪಕ್ಕದ ಸಣ್ಣದೇಶ ಬಾಂಗ್ಲಾದೇಶದೊಂದಿಗೆ ಮೊದಲ ಸ್ಥಾನಕ್ಕೆ ಸ್ಪರ್ಧಿಸುತ್ತಿದೆ! ಇಲ್ಲಿ 1000 ಮಕ್ಕಳಲ್ಲಿ ಕನಿಷ್ಟ

ಪುಟ 4 ಕ್ಕೆ

ಕಾರ್ಟೂನ್ ಕಾರ್ನರ್



ಜನಾದೇಶವನ್ನು ಕ್ರೋಢೀಕರಿಸುವುದು

ಪುಟ 2ರಿಂದ

ಹಣ ಮತ್ತು ಹೆಂಡದ ಹೊಳೆ ಹರಿಸುವುದರಲ್ಲಿ ಬಿಜೆಪಿ ಕಾಂಗ್ರೆಸ್ ನಡುವೆ ಭೀಕರ ಪೈಪೋಟಿ ನಡೆಯಿತು. ಪೈಪೋಟಿಯಲ್ಲಿ ಒಂದು ಓಟಿನ ಬೆಲೆ 1,000 ರೂಪಾಯಿಗೆ ಏರಿತು. ಬಿಜೆಪಿಯಂತೂ 108 ಆಂಬುಲೆನ್ಸ್ ವಾಹನದಲ್ಲಿ, ಮಂತ್ರಿಗಳ ಕೆಂಪು ಗುರುತುಳ್ಳ ಕಾರಿನಲ್ಲಿ ಮದ್ಯವನ್ನು ಪೂರೈಸಿ ತನ್ನ ಅಮೋಘ ಸಾಮರ್ಥ್ಯ ಮೆರೆಯಿತು. ಈ ಚುಣಾವಣೆ ಹತ್ತಿರ ಬಂದಂತೆ ರಾಜ್ಯ ಕ್ಯಾಬಿನೆಟ್ ಸಭೆ ದಿನಕ್ಕೆರಡು ಬಾರಿ ನಂತರ ಗಂಟೆ ಗಂಟೆಗೂ ಸೇರಿ ಮತದಾರರಿಗೆ ಆಮೀಷವೊಡ್ಡುವ ನಾನಾ ತೀರ್ಮಾನಗಳನ್ನು ಕೈಗೊಳ್ಳುತ್ತಿತ್ತು.

ನಾಗರಿಕ ಸಮಸ್ಯೆಗಳ ವಿರುದ್ದದ ಹೋರಾಟವೇ ಯಶಸ್ಸಿನ ಸೂತ್ರ

ಚುನಾವಣಾ ವಿಷಯಕ್ಕೆ ಸಂಬಂಧಿಸಿದಂತೆ ಹಿಮಾಚಲ ಪ್ರದೇಶದಲ್ಲಿ ಸಿಪಿಐ(ಎಂ)ಗೆ ದೊಡ್ಡ ಅನುಭವವೇನೂ ಇರಲಿಲ್ಲ. ಆದರೆ, ಪಕ್ಷದ ಅಧಿವೇಶನಗಳ ತಿಳುವಳಿಕೆಗಳ ಆದಾರದಲ್ಲಿ ಈ ಭಾಗದಲ್ಲಿ ಪಕ್ಷವನ್ನು ಸದೃಢಗೊಳಿಸಲು ಗಮನ ನೀಡಲಾಯಿತು. ಬೇಡಿಕೆ ಈಡೇರುವ ವರೆಗೂ ನಿರಂತರ ಚಳವಳಿ ನಡೆಯಿತು. ತಕ್ಷಣ ಕೈಗೂಡಬೇಕಾದ ಅಗತ್ಯ ಬೇಡಿಕೆಗಳ ಆಧಾರದಲ್ಲಿ ಚಳವಳಿ ನಡೆದು ಯಶಸ್ಸು ಸಾಧಿಸಲಾಯಿತು. ಬಳಿಕ ಜನರನ್ನು ಸಂಘಟನಾತ್ಮಕ ಪ್ರಕ್ರಿಯೆಗೆ ಒಳಪಡಿಸಿ ದೊಡ್ಡ ಮಟ್ಟದ ಚಳವಳಿಯನ್ನು ನಡೆಸಲಾಯಿತು. ಎಸ್‌ಎಫ್‌ಐ, ಜೆಎಂಎಸ್, ಡಿವೈಎಫ್‌ಐ ನೇತೃತ್ವದ ಚಳವಳಿಗಳೂ ಜೊತೆ ಸೇರಿದವು. ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಹರಿದುಬಂದವು. ಈ ಹಂತದಲ್ಲಿ ಜನ ದಿನೇ ದಿನೇ ಸಾಮೂಹಿಕ ಸಂಘಟನೆಗಳ ನೀತಿ–ಧೋರಣೆಗಳನ್ನು ಅರಿತು ಆ ನಂತರ ಸಿಪಿಐ(ಎಂ) ಪಕ್ಷಕ್ಕೂ ಇನ್ನಷ್ಟು ಹತ್ತಿರವಾದರು. ಬಳಿಕ ಕಾರ್ಯಕರ್ತರಾಗಿ ಹೋರಾಟದ ಮುಂಚೂಣಿಗೆ ಬಂದರು. ಇದರ ಪರಿಣಾಮ ಪಕ್ಷದ ಸದಸ್ಯತ್ವದಲ್ಲೂ ಗಣನೀಯ ಏರಿಕೆಯಾಯಿತು. ಇಂತಹ ಪ್ರಕ್ರಿಯೆ ಸಾಧ್ಯವಾಗದಿದ್ದರೆ ಯಾವುದೇ ಸಂದರ್ಭದಲ್ಲೂ ಜನ ಮತ್ತೆ ಬಂಡವಾಳಶಾಹಿ ಪಕ್ಷಗಳ ತೆಕ್ಕೆಗೆ ಜಾರುವ ಸಾಧ್ಯತೆಗಳು ಹೆಚ್ಚು.

'ಶಿಮ್ಲಾ ನಾಗರಿಕ ಸಭಾ' ನೇತೃತ್ವದ ಮೂರು ಹೋರಾಟಗಳು

ನಗರದ ಜನರನ್ನು ಸೇರಿಸಿಕೊಂಡ 'ಶಿಮ್ಲಾ ನಾಗರಿಕ ಸಭಾ' ಎಂಬ ಸಂಘಟನೆಯನ್ನು ಹುಟ್ಟುಹಾಕಲಾಯಿತು. ಈ ಸಂಘಟನೆಯೇ ನಗರ ಪ್ರದೇಶದಲ್ಲಿ ಜನರ ಸಮಸ್ಯೆಗಳಿಗೆ ಧ್ವನಿಯಾಯಿತು. ಪ್ರಬಲ ಸಂಘಟನೆಯ ಹಿಂದೆ ಸಿಪಿಐ(ಎಂ) ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ಬೆಂಬಲ, ಪ್ರೋತ್ಸಾಹವೂ ಇತ್ತು.

ಈ ಸಂಘಟನೆಯ ನೇತೃತ್ವದಲ್ಲಿ ನಡೆದ ಮೂರು ಹೋರಾಟಗಳು ದೊಡ್ಡ ಬದಲಾವಣೆಯನ್ನೇ ತಂದಿತು. ಹಿರಿಯ ಪೊಲೀಸ್ ಅಧಿಕಾರಿಯಿಂದ ರಸ್ತೆ ಬದಿಯ ಕಾಲುದಾರಿಯೊಂದರ ಒತ್ತುವರಿ –ದುರುಪಯೋಗ, ಭೂ ಮಾಫಿಯಾ ದ ವಿರುದ್ಧ ಹಾಗೂ ಸಿಟಿ ಪಿಡಬ್ಲ್ಯೂಡಿ ನಿರ್ವಹಣೆ ವಿರುದ್ಧ ನಡೆದ ಹೋರಾಟ ಯಶಸ್ಸು ಸಾಧಿಸಿತು. ಜನರ ಎದೆಯಾಂತರಾಳಕ್ಕೆ ಸಿಪಿಐ(ಎಂ) ಪಕ್ಷ ನೆಲೆಗೊಂಡಿತು. ಗೂಂಡಾ, ಪೊಲೀಸ್ ಅಧಿಕಾರಿ ಅಥವಾ ಭೂಮಾಫಿಯಾ... ಯಾವುದೇ ಆದರೂ ಜನಶಕ್ತಿಯ ಮುಂದೆ ಎಲ್ಲರೂ ಬೆಣ್ಣೆಯಂತೆ ಕರಗಬೇಕಾಗುತ್ತದೆಂಬುದು ಜನತೆಗೆ ಮನದಟ್ಟಾಯಿತು.

ಕಳೆದೆರಡು ವರ್ಷಗಳಿಂದ ನಾಗರಿಕ ಸಮಿತಿ ನೇತೃತ್ವದಲ್ಲಿ ಮೊಹಲ್ಲಾ ಮಟ್ಟದ ಅಸಂಖ್ಯಾತ ಹೋರಾಟಗಳು ನಡೆದವು. ನರವಮ್ ಯೋಜನೆಯಡಿ ಆರಂಭಿಸಲಾದ ಬಸ್ ಸೇವೆಯ ಕನಿಷ್ಟ ದರವನ್ನು 10 ರೂಪಾಯಿನಿಂದ ಐದು ರೂ.ಗೆ ಇಳಿಸುವ ಹೋರಾಟದ ಮಟ್ಟಕ್ಕೂ ಜನಶಕ್ತಿ ಬೆಳೆಯಿತು. ಎಲ್ಲ ಹೋರಾಟಗಳು ಹೊಸ ಹೊಸ ಅನುಭವವನ್ನು ನೀಡುತ್ತಾ ಬೆಳೆದುಬಂದಿವು. ಅಪಾರ ಜಲ ಸಂಪತ್ತು ಹೊಂದಿರುವ ಹಿಮಾಚಲ ಪ್ರದೇಶದಲ್ಲಿ ಹಲವಾರು ಜಲ ವಿದ್ಯತ್ ಯೋಜನೆಗಳು, ಕಾಮಗಾರಿ ನಡೆಯುತ್ತಿವೆ. ಇಲ್ಲಿ ದೊಡ್ಡ ಪ್ರಮಾಣದಲ್ಲಿ ಕಾರ್ಮಿಕರನ್ನು ನಿರ್ದಯ ಶೋಷಣೆಗೆ ಗುರಿಮಾಡಿ ದುಡಿಸಲಾಗುತ್ತಿದೆ. . ಸಿಐಟಿಯು ಸಂಘಟನೆಯು ಈ ಸುಲಿಗೆ ಯವಿರುದ್ಧ ಹತ್ತೆ ಹಲವು ಹೋರಾಟಗಳನ್ನು ಸಂಘಟಿಸಿತು, ಸಿಪಿಐ(ಎಂ) ಪಕ್ಷ ಈ ಹೋರಾಟಗಳಲ್ಲಿ ಬೇರೆ ಪಕ್ಷಗಳಿಂಗಿಂತ ಭಿನ್ನವಾಗಿ ಕಾರ್ಮಿಕರ ಪರ ನಿಂತಿತು. ಶಿಮ್ಲಾ ಮಹಾನಗರಪಾಲಿಕೆ ಚುನಾವಣೇಯ ಗೆಲುವಿನಲ್ಲಿ ಈ ದುಡಿಯುವ ಜನರ ಚಳುವಳಿಯ ಕೊಡುಗೆ ದೊಡ್ಡದಾಗಿದೆ.

ಸಿಪಿಐ(ಎಂ)ನ ಸಾಧನೆ ಮುಂದಿನ ಸವಾಲು

ಈ ವಿಜಯ ಪಕ್ಷಕ್ಕೆ ಮತ್ತೊಂದು ದೊಡ್ಡ ಸವಾಲು ಒಡ್ಡಿದೆ. ಈ ಯಶಸ್ಸನ್ನು ಮುಂದಿಟ್ಟು ಕೊಂಡು ವರ್ಷಾಂತ್ಯಕ್ಕೆ ನಡೆಯಲಿರುವ ವಿಧಾನಸಭಾ ಚುನಾವಣೆಯನ್ನು ಎದುರಿಸುವ ಆತ್ಮವಿಶ್ವಾಸವನ್ನು ಪಕ್ಷ ಗಳಿಸಿಕೊಂಡಿದೆ. ಪಕ್ಷ ಈಗಾಗಲೇ 21 ಕ್ಷೇತ್ರಗಳನ್ನು ಸ್ಪರ್ಧೆಗೆ ಗುರುತಿಸಿಕೊಂಡಿದೆ. ಈ ಕ್ಷೇತ್ರಗಳಲ್ಲಿ ವಾರ್ಡ್ ಸಮಿತಿ ರಚನೆ ಸೇರಿದಂತೆ ಪ್ರಾಥಮಿಕ ಕೆಲಸಗಳು ಭರದಿಂದ ಸಾಗಿವೆ. ■

ಅಪೌಷ್ಟಿಕತೆ – ಸಾವು..........

ಪುಟ 3 ರಿಂದ

50 ಸಾವನ್ನಪ್ಪುತ್ತವೆ. 5 ವರ್ಷದೊಳಗಿನ 16.8 ಲಕ್ಷ ಮಕ್ಕಳು 2010ರಲ್ಲಿ ಸಾವನ್ನಪ್ಪಿದ ಬಗ್ಗೆ ಕೇಂದ್ರ ಸರಕಾರ ಅಂಕಿ ಅಂಶ ನೀಡಿದೆ. ಹುಟ್ಟಬೇಕಿರುವ 2 ಕೋಟಿ 60 ಮಕ್ಕಳಲ್ಲಿ 10 ಲಕ್ಷದ 30 ಸಾವಿರ ಮಕ್ಕಳು ಹುಟ್ಟುವ ಮೊದಲೇ ಒಡಲೊಳಗೇ ಕೊನೆಯುಸಿರೆಳೆಯುತ್ತವೆ. 70 ಸಾವಿರ ಗರ್ಭಿಣಿಯರು ಸಾಯುತ್ತಾರೆ. ಅವರಲ್ಲಿ ಗ್ರಾಮೀಣ ಪ್ರದೇಶದ ಶೇ. 80ರಷ್ಟು ಮಹಿಳೆಯರು ರಕ್ತಹೀನತೆಯಿಂದ ನರಳುತ್ತಾರೆ. ಶೇ.47 ರಷ್ಟು ಮಕ್ಕಳು ಪೌಷ್ಟಿಕಾಂಶಗಳಿಂದ ವಂಚಿತರು.

ಇನ್ನು ಕರ್ನಾಟಕದಲ್ಲಿ ಒಂದು ವರುಷದೊಳಗಿನ 1,000 ದಲ್ಲಿ 43 ಮಕ್ಕಳ ಸಾವುಗಳು ಘಟಿಸುತ್ತವೆ. ಅದರಲ್ಲೂ ನಗರಕ್ಕಿಂತ ಗ್ರಾಮೀಣವೇ ಹೆಚ್ಚು. 5 ವರುಷದೊಳಗಿನ ಮಕ್ಕಳಲ್ಲಿ ಶೇ.42.5 ರಷ್ಟು ಕಡಿಮೆ ತೂಕವಿರುವವರು. (ಶೇ.37.6 ಅತೀ ಕಡಿಮೆ ತೂಕ) ಶೇ.48 ಮಕ್ಕಳು ಬೆಳೆಯಲಾಗದ ಕುಬ್ಜರು. ಶೇ.19.8 ಮಕ್ಕಳು ಸೊಣಕಲು ದೇಹಿಗಳು. ಶೇ.70 ರಷ್ಟು ಮಕ್ಕಳು ರಕ್ತಹೀನತೆಯಿಂದ ಬಳಲುತ್ತಾರೆ. ಮಹಿಳಾ ಕಲ್ಯಾಣ ಮತ್ತು ಮಕ್ಕಳ ಅಬಿವೃದ್ದಿ ಇಲಾಖೆಯು ರಾಜ್ಯದಲ್ಲಿ 68,000 ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿರುವುದಾಗಿ ತಿಳಿಸಿದೆ.

ಹಾಗೆಯೇ ಅಪೌಷ್ಟಿಕತೆಯ ಸಾವುಗಳು ಸಂಭವಿಸಿದ ರಾಯಚೂರು ಜಿಲ್ಲೆಯಲ್ಲಿ ಸಂಗತಿಗಳು ದಿಗ್ಭ್ರಮೆ ಹುಟ್ಟಿಸುತ್ತವೆ. ಮುಖ್ಯಮಂತ್ರಿಗಳೇ ನೀಡಿದ ಮಾಹಿತಿಯಂತೆ ಏಪ್ರಿಲ್ 2009 ರಿಂದ ಆಗಸ್ಟ್ 2011 ರವರೆಗೆ ಹುಟ್ಟಿದ 63,617 ರಲ್ಲಿ 2689 ಮಕ್ಕಳು ಸಾವನ್ನಪ್ಪಿದ್ದಾರೆ.

ಮಧ್ಯಂತರ ಸೂಚನೆಗಳು

ಹೀಗೆ ಬಾಧಿತ ಜಿಲ್ಲೆಗಳಿಗೆ ಭೇಟಿ ನೀಡಿದ ನ್ಯಾ. ಪಾಟೀಲ್‌ರ ಸಮಿತಿ ಗುರುತಿಸಿರುವಂತೆ ಅನಾರೋಗ್ಯ ಪೀಡಿತ ಮಕ್ಕಳ ಹುಟ್ಟಿಗೆ, ಸಾವುಗಳಿಗೆ ಪ್ರಧಾನ ಕಾರಣ ಪೋಷಕಾಂಶಗಳಿಲ್ಲದ ಅಪೌಷ್ಟಿಕತೆ ಆಹಾರ. ಮತ್ತು ಆರ್ಥಿಕ, ಸಾಮಾಜಿಕ ಸಮಸ್ಯೆಗಳು. ಅಪ್ರಾಪ್ತ ವಯಸ್ಸಿನಲ್ಲಿ ಮದುವೆಗಳಂತಹ ಸಾಮಾಜಿಕ ಪಿಡುಗುಗಳು. ಒಂದು ಹಂತದ ದುಃಸ್ಥಿತಿ ಬಾರದಂತೆ ತಡೆಯ ಬಹುದಾದ ಸಾಧ್ಯತೆಗಳು ಫಲಿಸದೇ ಹೋಗುವಲ್ಲಿ ಸರಕಾರದ ಯೋಜನೆಗಳು ಸಮರ್ಪಕವಾಗಿ ಜಾರಿಯಾಗದೇ ಇರುವುದು. ಮುಖ್ಯವಾಗಿ ಇಲಾಖೆಗಳಲ್ಲಿನ ಸಮನ್ವಯದ ಕೊರತೆಯು ಕಾರಣವೆಂದು ಸರಕಾರದ ವೈಫಲ್ಯಗಳನ್ನು ಕಟುವಾಗಿ ವಿಮರ್ಶಿಸಿದೆ. ಅಂಗನವಾಡಿ ಕೇಂದ್ರಗಳ ಬಹು ಮಹತ್ವದ ಪಾತ್ರವನ್ನು ಪರಿಗಣಿಸುತ್ತಾ ಅವುಗಳನ್ನು ಪರಿಣಾಮಕಾರಿಯಾಗಿ ಬಳಸದೇ ಇರುವುದನ್ನು ಗುರುತಿಸಿದೆ. ಅವುಗಳನ್ನು ಉನ್ನತೀಕರಿಸಲು ಸೂಚಿಸಿದೆ. ಈಗ ನೀಡಲಾಗುತ್ತಿರುವ ಆಹಾರದ ಅವೈಜ್ಞಾನಿಕತೆಯನ್ನು ಅಲ್ಲದೇ ವಾಣಿಜ್ಯೀಕರಣದಿಂದಾಗಿ ಹಿಂದಿನ ಪಾರಂಪರಿಕ ಬೇಸಾಯ, ಮಿಶ್ರ ಬೆಳೆ ಪದ್ದತಿಯ ಸಹಜ ಅನುಕೂಲಗಳನ್ನು ಹೇಳಿದ್ದು, ಇದಕ್ಕೆ ಬದಲಾಗಿ ಏಕ ಪ್ರಕಾರದ ಬೆಳೆಯ ಪರಿಣಾಮಗಳನ್ನು ಉಲ್ಲೇಖಿಸಿದೆ. ಇಂದಿನ ಧಾರುಣ ಸ್ಥಿತಿಯನ್ನು ತೊಲಗಿಸಬೇಕಾದಲ್ಲಿ ಕೂಡಲೇ ಸಾರ್ವತ್ರಿಕ ಪಡಿತರ ವ್ಯವಸ್ಥೆಯ ಮೂಲಕ ಅಗತ್ಯವಾಗಿರುವ ಆಹಾರ ವಸ್ತುಗಳ ಪೂರೈಕೆಯನ್ನು ಸಮರ್ಪಕವಾಗಿ ಮಾಡಲು, ಹಾಲು, ಮೊಟ್ಟೆಯೇ ಪರಿಹಾರವಲ್ಲವೆಂದಿರುವ ಸಮಿತಿಯ ಮಧ್ಯಂತರ ವರದಿಯು ಏಕ ಪ್ರಕಾರದ ಆಹಾರಕ್ಕಿಂತ ಆಯಾ ಪ್ರದೇಶಗಳ ಆಹಾರ ಪದ್ಧತಿ ಅನುಸರಿಸಿ ಮಕ್ಕಳಿಗೆ ಅಗತ್ಯ ಆಹಾರವನ್ನು ಮತ್ತು ಆಹಾರ ಧಾನ್ಯಗಳನ್ನು ಅಂಗನವಾಡಿ ಕೇಂದ್ರಗಳ ಮೂಲಕ ನೀಡಲು ತಿಳಿಸಿದೆ.

ಅಪೌಷ್ಟಿಕತೆಯ ಸಾವು ನೋವುಗಳನ್ನು ತಡೆಯುವಲ್ಲಿ ಸರಕಾರದ ವೈಫಲ್ಯಗಳನ್ನು ಗುರುತಿಸಿ ಶಾಶ್ವತ ಪರಿಹಾರ ರೂಪಿಸಲು ತಿಳಿಸಿದೆ. ಆಹಾರ ಪದಾರ್ಥಗಳ ಪೂರೈಕೆಯನ್ನು ಖಾಸಗಿ ಸಂಸ್ಥೆಗಳಿಗೆ ವಹಿಸಬಾರದೆಂದಿದೆ. ಇನ್ನೂ ಹಲವು ಅಂಶಗಳಿದ್ದು ಪೂರ್ಣ ವರದಿಯು ಇನ್ನಷ್ಟು ಬೆಳಕು ಚೆಲ್ಲಬಹುದಾದ ಸಾಧ್ಯತೆಯ ಸೂಚನೆ ನೀಡಿದೆ.

ಸರಕಾರದ ಪ್ರತಿಕ್ರಿಯೆ ಏನು?

ಇಲ್ಲಿ ಬರುವ ಗಂಭೀರ ಪ್ರಶ್ನೆ ಸರಕಾರದ ಪ್ರತಿಕ್ರಿಯೆ ಏನು?. ನ್ಯಾಯಾಲಯದ ಪೀಠದ ಮುಂದೆ ಸರಕಾರದ ಅಭಿಯೋಜಕರು ಕೆಲವು ಸಲಹೆಗಳನ್ನು ಒಪ್ಪಿದ್ದಾರೆ. ಆದರೆ ಅವೇನದ್ದರೂ ಮಕ್ಕಳಿಗೆ ಗುರುತಿನ ಚೀಟಿ ನೀಡುವಂತಹವು. ಆದರೆ ಮುಖ್ಯವಾಗಿ ಈ ಸಮಸ್ಯೆ ಪರಿಹಾರವಾಗಬೇಕಾದಲ್ಲಿ ಸಮರ್ಪಕ ಎಲ್ಲಾ ಅಗತ್ಯ ಆಹಾರ ಧಾನ್ಯಗಳನ್ನು ಅತೀ ಅಗ್ಗ ದರದಲ್ಲಿ ಪ್ರಧಾನವಾಗಿ ಸಾರ್ವತ್ರಿಕ ಪಡಿತರ ವ್ಯವಸ್ಥೆ ಮೂಲಕ ಒದಗಿಸಬೇಕು. ಅಲ್ಲಿನ ಜನರ ಆರ್ಥಿಕ, ಸಾಮಾಜಿಕ ಸನ್ನಿವೇಶಗಳನ್ನು ಬದಲಾಯಿಸಬೇಕು. ಆದರೆ ?

ಆದರೆ ಸರಕಾರಕ್ಕೆ ಇವನ್ನೆಲ್ಲಾ ಆಲೋಚಿಸಲು ಬಿಡುವೇ ಇಲ್ಲಾ. ಅದು ಬೇಕಾಗಿಯೂ ಇಲ್ಲ. ಒಂದೆಡೆ ಸರಕಾರ ಇಡೀ ಸಾರ್ವತ್ರಿಕ ಪಡಿತರ ಪದ್ಧತಿಯನ್ನೇ ನಾಶ ಮಾಡಲು ಪಣ ತೊಟ್ಟು ನಿಂತಿದೆ. ಜನತೆಯ ಪ್ರಶ್ನೆಗಳನ್ನು ಪೂರ್ಣ ನಿರ್ಲಕ್ಷಿಸಿದೆ. ಸದಾ ಅಧಿಕಾರದ ದಾಹ, ಸಂಪತ್ತಿನ ಲೂಟಿಯಲ್ಲೇ ಮುಳುಗಿರುವ ಭ್ರಷ್ಟ ಸರಕಾರ ನ್ಯಾಯಾಲಯದ ಈ ಮುತುವರ್ಜಿ, ಸೂಚನೆಗಳನ್ನು ಸ್ವೀಕರಿಸೀತೆ?.

ಎಲ್ಲಿದೆ ಇಚ್ಛಾಶಕ್ತಿ?

ಇಂದು ಸರಕಾರದ ಮುಂದೆ ಹತ್ತಾರು ಸವಿವರವಾದ, ವಿಮರ್ಶಾತ್ಮಕವೂ ಪರಿಹಾರಾತ್ಮಕವೂ ಆದ ಹತ್ತಾರು ವರದಿಗಳೆ ರಾಶಿಯೇ ಇದೆ. ಆದರೆ ಗುಡಿ ಗುಂಡಾರ, ಹೈಕಮಾಂಡ್–ಲೋಕಮಾಂಡ್ ಸುತ್ತ ಸುತ್ತುವ ಬದಲು ವಿಧಾನ ಸೌಧದಲ್ಲಿ ಕುಳಿತು ಅವುಗಳನ್ನು ಮುಖ್ಯಮಂತ್ರಿಯಾದಿಯಾಗಿ ಕಣ್ಣೆತ್ತಿ ನೋಡಬೇಕು, ಕಿವಿಯಗಲಿಸಿ ಹುದುಗಿರುವ ಸಂಕಟಗಳನ್ನು ಕೇಳಬೇಕು. ಕ್ರಮ ವಹಿಸಬೇಕು. ಇದಕ್ಕೆ ಬೇಕಾಗಿರುವುದು ಜನರ ಬಗೆಗಿನ ಪ್ರೀತಿ, ಕಾಳಜಿ, ಮುಖ್ಯವಾಗಿ ರಾಜಕೀಯ ಇಚ್ಛಾ ಶಕ್ತಿ, ಈ ಸರಕಾರಕ್ಕೆ ಇಲ್ಲದಿರುವುದೇ ಇದು. ಈ ಸಂಕಲ್ಪದ ಕೊರತೆಯಲ್ಲಿ, ನಿರ್ಲಕ್ಷ್ಯದಲ್ಲಿ..... ಜನರ ಕೂಗು ಕೇಳಿತೇ?!

ಜನಶಕ್ತಿ
ಕನ್ನಡ ವಾರಪತ್ರಿಕೆ

ಗಮನ ಸೆಳೆಯುತ್ತಿರುವ ಗಜೇಂದ್ರಗಡ

ಗದಗ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿ ಗಜೇಂದ್ರಗಡ ಒಂದು ಐತಿಹಾಸಿಕ ಹಿನ್ನೆಲೆ ಇರುವ ಪಟ್ಟಣ. ಸುಮಾರು 50 ಸಾವಿರ ಜನಸಂಖ್ಯೆಯುಳ್ಳ ಈ ಪಟ್ಟಣವು 23 ವಾರ್ಡಗಳಾಗಿ ವಿಂಗಡಿಸಲ್ಪಟ್ಟ ಒಂದು ಪುರಸಭೆಯಾಗಿರುತ್ತದೆ. ಇಲ್ಲಿ ಎಲ್ಲಾ ಜಾತಿಗಳ ಜನರಿದ್ದಾರೆ. ಲಿಂಗಾಯತರು, ಬಣಜಿಗರು, ಕುರುಬರು, ಮರಾಠರು, ಲಂಬಾಣಿಯರು, ವಡ್ಡರು, ಕೊರವರು, ಭಜಂತ್ರಿ, ಮಾದರು, ಚೆಲವಾದಿಯರು, ಮುಸಲ್ಮಾನರು, ಹೀಗೆ ಹಲವಾರು ಜಾತಿ ಜನಾಂಗಗಳಿಗೆ ಸೇರಿದವರು ಇಲ್ಲಿ ವಾಸವಾಗಿದ್ದಾರೆ. ಭೂ ಹಿಡುವಳಿದಾರರ ಸಂಖ್ಯೆ ಕಡಿಮೆ. ದಿನ ನಿತ್ಯದ ದುಡಿಮೆಯಿಂದ ಜೀವನ ಸಾಗಿಸುವವರ ಸಂಖ್ಯೆಯೇ ಹೆಚ್ಚು. ಒಂದು ಕಾಲದಲ್ಲಿ ಇಲ್ಲಿ ಕೈಮಗ್ಗ ನೇಕಾರಿಕೆ ಒಂದು ಪ್ರಮುಖ ಉದ್ಯೋಗವಾಗಿತ್ತು. ಇಂದು ವಿದ್ಯುತ್ ಮಗ್ಗಗಳಲ್ಲಿ ದುಡಿಯುತ್ತಿರುವ ಕೂಲಿ ನೇಕಾರರ ಸಂಖ್ಯೆ ಹೆಚ್ಚಾಗಿದೆ.

ಗದಗ ಜಿಲ್ಲೆಯಾದ್ಯಂತ ಇರುವಂತೆ ಇಲ್ಲಿಯೂ ಪಾಳೆಗಾರಿ ಪ್ರಭಾವದ ಛಾಯೆ ಇನ್ನೂ ದಟ್ಟವಾಗಿಯೇ ಇದೆ, ಪಟ್ಟಭದ್ರರ ಕಾರಸ್ಥಾನವನ್ನು ಯಾರು ಪ್ರಶ್ನಿಸುವಂತಿಲ್ಲ, ದಲಿತರು, ಹಿಂದುಳಿದ ಜಾತಿಗಳಿಗೆ ಸೇರಿದವರು ಉಸಿರು ಎತ್ತುವಂತಿಲ್ಲ. ದಲಿತರಲ್ಲೇ ಒಂದು ಗುಂಪನ್ನು ತಮ್ಮ ಬೆಂಬಲಕ್ಕೆ ಇಟ್ಟುಕೊಂಡು ಅವರ ಮೂಲಕ ದಲಿತರ ಮೇಲೆ ದೌರ್ಜನ್ಯಗಳನ್ನು ಎಸಗುತ್ತಾ ದಲಿತರು ಧ್ವನಿಎತ್ತದಂತೆ ಮಾಡುತ್ತಾ ಬರಲಾಗಿದೆ. ಹಿಂದಿನಿಂದಲೂ ಇದೊಂದು ಆರ್.ಎಸ್.ಎಸ್. ಕೇಂದ್ರವಾಗಿದ್ದು ಆಗಾಗ ಪಥಸಂಚಲನಗಳನ್ನು ಏರ್ಪಡಿಸುತ್ತಾ ಅಲ್ಪಸಂಖ್ಯಾತ ಮುಸಲ್ಮಾನರು ಸದ್ದಾ ಭೀತಿಯಲ್ಲಿ ಬದುಕುವಂತೆ ಮಾಡಲಾಗುತ್ತಿದೆ. ಉಡುಪಿಯ ಪೇಜಾವರರು ಇಲ್ಲಿಗೆ ಆಗಾಗ ಬಂದು 'ಹಿಂದುತ್ವ'ದ ಪ್ರಚಾರ ಮಾಡುತ್ತಾರೆ. ಪಂಚಾಚಾರ್ಯರರು ಮತ್ತು ಇತರ ಕೆಲವು ಶ್ರೀಮಂತ ವೀರಶೈವ ಮಠಾಧೀಶರು ಇಲ್ಲಿ ತಮ್ಮ 'ಜಾತ್ರೆ'ಗಳನ್ನು ಏರ್ಪಡಿಸುತ್ತಿರುತ್ತಾರೆ.

ರಾಜಕೀಯವಾಗಿ ಗಜೇಂದ್ರಗಡದ ಜನ ಕಾಂಗ್ರೆಸ್‌ನ್ನು ಬೆಂಬಲಿಸುತ್ತಾ ಬಂದವರು. ಗಜೇಂದ್ರಗಡ ನಗರವು ರೋಣ ವಿಧಾನ ಸಭಾ ಕ್ಷೇತ್ರದ ಭಾಗವಾಗಿದ್ದು ಇಲ್ಲಿ ಒಮ್ಮೆ (1954) ಪ್ರಜಾ ಸಮಾಜವಾದಿ ಪಕ್ಷ (ಪಿ.ಎಸ್.ಪಿ.), 1983ರಲ್ಲಿ ಜನತಾ ಪಕ್ಷ, 1994ರಲ್ಲಿ ಜನತಾದಳ ಜಯಗಳಿಸಿದ್ದವು. ಉಳಿದ ಅವಧಿಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳನ್ನೇ ಗೆಲ್ಲಿಸಲಾಗಿತ್ತು. ಆದರೆ 2004 ರ ಚುನಾವಣೆಯಲ್ಲಿ ಗಜೇಂದ್ರಗಡದವರೇ ಆಗಿರುವ ಬಿಜೆಪಿಯ ಕಳಕಪ್ಪ ಬಂಡಿ ಆಯ್ಕೆಯಾದರು, 2008 ರಲ್ಲಿ ಪುನಃ ಅವರೇ ಶಾಸಕರಾಗಿ ಆಯ್ಕೆಯಾದರು.

ಇಂತಹ ಪ್ರತಿಗಾಮಿ ಪರಿಸರದಲ್ಲಿ ಪ್ರಗತಿಪರತೆಯ ಆಶಾ ಕಿರಣವಾಗಿ ಮೂಡಿದ್ದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ).


> ಐತಿಹಾಸಿಕ ಹಿನ್ನೆಲೆ ಇರುವ ಗದಗ ಜಿಲ್ಲೆಯ ಪಟ್ಟಣ ಗಜೇಂದ್ರಗಡ. ರಾಜ್ಯದ ಯಾವುದೇ ಹಳ್ಳಿ ಪಟ್ಟಣದಂತೆ ಇಲ್ಲೂ ಜಾತಿಯತೆ, ಪಟ್ಟಭದ್ರ ಹಿತಾಸಕ್ತಿಗಳ ಕಾರುಬಾರು ಎಲ್ಲವೂ ಇದೆ. ಇಂತಹ ಹೊತ್ತಲ್ಲಿ ಅಲ್ಲಿ ಕ್ರಮೇಣ ಪ್ರಗತಿಪರ ವಿದ್ಯಾರ್ಥಿ– ಯುವಜನರ ಚಳುವಳಿಯ ಮೂಲಕ ಪ್ರಜಾಸತ್ತಾತ್ಮಕ ಚಳುವಳಿ ಬೆಳೆಯುತ್ತ ಜನರ ಪ್ರೀತಿ ಗಳಿಸುತ್ತಾ ಹೊರಟಿದೆ.

ನಿತ್ಯಾನಂದ ಸ್ವಾಮಿ

ಕಳೆದ ಸುಮಾರು 20 ವರ್ಷಗಳಿಂದ ಹಲವಾರು ಶೈಕ್ಷಣಿಕ ಪ್ರಶ್ನೆಗಳನ್ನು ಎತ್ತಿಕೊಂಡು, ಅನೇಕ ಸಮರಶೀಲ ಹೋರಾಟಗಳನ್ನು ನಡೆಸಿ ವಿದ್ಯಾರ್ಥಿಗಳ ಹಾಗೂ ಸಾಮಾನ್ಯ ಜನರ ಮೆಚ್ಚುಗೆಗೆ ಪಾತ್ರವಾಗಿರುವ ಎಸ್.ಎಫ್.ಐ. ಇಂದು ಇತರ ಸಾಮೂಹಿಕ ಸಂಘಟನೆಗಳಿಗೆ ಮತ್ತು ಚಳುವಳಿಗಳಿಗೆ ಕಾರ್ಯಕರ್ತರನ್ನು ಒದಗಿಸಿದೆ. ಎಸ್.ಎಫ್.ಐ. ಮೂಲಕ ಇಂದು ಪ್ರಗತಿಪರವಾದ ಸಮಾಜದ ಕನಸು ಕಾಣುವಂತಾದ ಅನೇಕ ಯುವ ಕಾರ್ಯಕರ್ತರು ಪ್ರತಿಭಾವಂತ ವಿದ್ಯಾರ್ಥಿಗಳಾಗಿ ಹೊಮ್ಮಿದರು ಮಾತ್ರವಲ್ಲ ತಮ್ಮ ಖಾಸಗಿ ಬದುಕಿನಲ್ಲಿಯೂ ಗಣನೀಯ ಯಶಸ್ಸನ್ನು ಪಡೆಯುವಂತಾಗಿದ್ದಾರೆ. ಗಜೇಂದ್ರಗಡದಲ್ಲಿ ಇಂದು ನಡೆಯುತ್ತಿರುವ ವೈವಿಧ್ಯಮಯವಾದ ಚಟುವಟಿಕೆ– ಚಳುವಳಿಗಳು ಸಹಜವಾಗಿಯೇ ಎಲ್ಲರ ಗಮನವನ್ನು ಸೆಳೆಯುತ್ತಿದೆ.

ಸರಳ ಅಂತರಜಾತಿಯ ವಿವಾಹ

ಕಳೆದ ಏಪ್ರಿಲ್ ತಿಂಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ಜನ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ಏರ್ಪಡಿಸಿದ್ದ ಒಂದು ಅಂತರಜಾತಿಯ ವಿವಾಹಕ್ಕೆ ಸಾಕ್ಷಿಯಾದರು. ವಿದ್ಯಾರ್ಥಿ ದೆಸೆಯಲ್ಲಿ ಎಸ್‌ಎಫ್‌ಐ ಮೂಲಕ ಪ್ರಗತಿಪರ ವಿಚಾರಗಳನ್ನು ಮೈಗೂಡಿಸಿಕೊಂಡಿದ್ದ ಎಂ.ಬಿ.ಸೊಂಪುರ್ ಇನ್ನೊಂದು ಜಾತಿಗೆ ಸೇರಿದ ಶಾರದಾ ಹೊನಕೇರಿ ಅವರ ಕೈಹಿಡಿದು ಜಾತಿಗಳೇ ಇಲ್ಲದ ಸಮಾಜ ಸ್ಥಾಪನೆಗೆ ತಮ್ಮ ಬದ್ಧತೆಯನ್ನು ಮೆರೆದರು. ಶಾರದಾ ಹೊನಕೇರಿ ಅವರು ಸಹ ಈ ವಿಚಾರಧಾರೆಗೆ ಸಂಪೂರ್ಣ ಸಹಮತವುಳ್ಳವರು. ಅಂದು ವಿವಾಹ ಸಮಾರಂಭದಲ್ಲಿ ವಧು ವರರಿಬ್ಬರೂ ಕೈಗೊಂಡ ಪ್ರತಿಜ್ಞೆ, ಏರ್ಪಡಿಸಲಾದ ಭಾಷಣಗಳು ಹಾಗೂ



ಹಾಡುಗಳಿಂದ ಎರಡೂ ಕಡೆಗಳಿಂದ ಆಗಮಿಸಿದ್ದವರು ತುಂಬಾ ಪ್ರಭಾವಿತರಾಗಿ ನವಜೋಡಿಯನ್ನು ಸಂತೋಷದಿಂದ ಹರಸಿ ಹಿಂತಿರುಗಿದರು.

ಇಲ್ಲಿ ಆಗಾಗ ನಡೆಯುತ್ತಿರುವ ಇಂತಹ ಆದರ್ಶ ಮದುವೆಗಳಿಂದಾಗಿ ಗಜೇಂದ್ರಗಡ ಮೇಲಿಂದ ಮೇಲೆ ಸುದ್ಧಿಯಲ್ಲಿರುತ್ತದೆ. ಸುಮಾರು 15 ವರ್ಷಗಳ ಹಿಂದೆ ನಡೆದ ರವಿ ಹೊನವಾಡ ಮತ್ತು ಅನಸೂಯಾ ಅವರ ಮದುವೆ ಪುರೋಹಿತರ ಮಂತ್ರಗಳಿಲ್ಲದೆ ನಡೆದದ್ದು ಗಜೇಂದ್ರಗಡದ ಮನೆ ಮನೆಗಳಲ್ಲಿಯೂ ಚರ್ಚೆಯ ವಿಷಯವಾಗಿತ್ತು. ಇತ್ತೀಚಿನ ವರ್ಷಗಳಲ್ಲಿ ಅಂತಹ ಸರಳ ಮದುವೆಗಳು ಸರಣೀಯವಾಗಿ ಜರುಗುತ್ತಲಿದ್ದು ಸಮ ಸಮಾಜದ ಮೂಲ ಘಟಕಗಳಾಗಲಿರುವ ಹತ್ತಾರು ಹೊಸ ಕುಟುಂಬಗಳು



ನಿರ್ಮಾಣವಾಗಿವೆ, 2009ರಲ್ಲಿ ಪ್ರತಿಭಾ ಜೊತೆ ಪ್ರಕಾಶ್ ಕರ್ಕಿಕಟ್ಟಿ, ಮತ್ತು ಮಾಲಿನಿ ಜೊತೆ ಶರಣಬಸವ ಮರದ ಅವರ ಮದುವೆಗಳು, 2010 ರಲ್ಲಿ ಶೋಭಾ ಜೊತೆ ಬಸವರಾಜ ಶೀಲವಂತರ, ಮಂಜುಳಾ ಜೊತೆ ಕೆ.ಎಸ್.ಜಂತ್ಲಿ, ವಿಜಯಲಕ್ಷ್ಮೀಜೊತೆ ಬಿ.ಎಸ್. ಜಂತ್ಲಿ, ಕವಿತಾ ಜೊತೆ ಎಂ.ಎಸ್.ಹಡಪದ ಮತ್ತು ಸರೋಜಾ ಜೊತೆ ಪ್ರಕಾಶ್ ಹಡಪದ ಅವರುಗಳ ಸರಳ ಮದುವೆಗಳು ಯಶಸ್ವಿಯಾಗಿ ನಡೆದಿವೆ.

ಭೂಮಿ ಮತ್ತು ಮನೆ ನಿವೇಶನಗಳಿಗಾಗಿ ಹೋರಾಟ

ಗಜೇಂದ್ರಗಡದಲ್ಲಿ ವಿದ್ಯಾರ್ಥಿ ಸಂಘಟನೆಯೊಂದಿಗೆ ಆರಂಭವಾದ ಚಳುವಳಿಯು ಇಂದು ಬೇರೆ ಬೇರೆ ಸಾಮೂಹಿಕ ಸಂಘಟನೆಗಳು ಬೆಳೆದು ಬರಲು ಕಾರಣವಾಗಿದೆ. ಕಟ್ಟಡ ಕಾರ್ಮಿಕರ ನಡುವೆ ಸಿಐಟಿಯು ಸಂಘ ಕೆಲಸ ಆರಂಭಿಸಿದೆ. ಹಮಾಲಿ ಕಾರ್ಮಿಕರ ಮಧ್ಯದಲ್ಲಿ ಪ್ರಭಾವವಿದೆ. ಎಸ್‌ಎಫ್‌ಐ ಜೊತೆಯಲ್ಲಿ ಡಿವೈಎಫ್‌ಐ ಮೊದಲಿನಿಂದಲೂ ಕ್ರಿಯಾಶೀಲ ವಾಗಿದೆ. ಸ್ತ್ರೀ ಶಕ್ತಿ ಸ್ವಸಹಾಯ ಗುಂಪೊಂದನ್ನು ಲಂಬಾಣಿ ಮಹಿಳೆಯರ ನಡುವೆ ಸ್ಥಾಪನೆಮಾಡಿ ಅವರ ನಡುವೆ ಜನವಾದಿ ಮಹಿಳಾ ಸಂಘಟನೆಯನ್ನು ಹುಟ್ಟು ಹಾಕಲಾಗಿದೆ. ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ರೈತರನ್ನು ಕರ್ನಾಟಕ ಪ್ರಾಂತ ರೈತ ಸಂಘದ ಅಡಿಯಲ್ಲಿ ಮತ್ತು ವಾಸಕ್ಕೆ ಸ್ವಂತ ಮನೆ ಇಲ್ಲದ ಬಡವರನ್ನು ಕೃಷಿಕೂಲಿ ಕಾರರ ಸಂಘದ ಅಡಿಯಲ್ಲಿ ಸಂಘಟಿಸಲಾಗಿದೆ.

ವಿದ್ಯಾರ್ಥಿ ಮುಖಂಡನಾಗಿ ಬೆಳೆದು ಬಂದ ಎಂ.ಎಸ್.ಹಡಪದ ವಕೀಲ ವೃತ್ತಿಯಲ್ಲಿ ತೊಡಗಿದ್ದರೂ ಅದರ ಜೊತೆಯಲ್ಲಿ ಸ್ಥಳೀಯ ಪ್ರಗತಿಪರ ಚಳುವಳಿಗೆ ಸಮಯ ನೀಡುತ್ತಿರುವುದು ಹೆಮ್ಮೆಯ ವಿಷಯವೇ ಆಗಿದೆ. ರೋಣ ತಾಲ್ಲೂಕಿನಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದು ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಿ ತಿರಸ್ಕೃತಗೊಂಡವರ ಯಾದಿಯನ್ನು ತಾಲ್ಲೂಕು ತಹಶೀಲ್ದಾರರಿಂದ ಪಡೆಯಲಾಯಿತು. ಸಂಬಂಧಪಟ್ಟ ಗ್ರಾಮಗಳಿಗೆ ಭೇಟಿಕೊಟ್ಟು ಬಗರ್ ಹುಕುಂ ಸಾಗುವಳಿದಾರರ ಸಭೆಯೊಂದನ್ನು ಕರೆಯಲಾಯಿತು. ಸಭೆಯಲ್ಲಿ ರಾಜ್ಯ ಮುಖಂಡರನ್ನು ಪಾಲ್ಗೊಳಿಸಲಾಯಿತು. ಸಭೆಯಲ್ಲಿ ಹೋರಾಟ ಸಮಿತಿಯೊಂದನ್ನು ರಚಿಸಲಾಯಿತು. ಯುವ ಹೋರಾಟಗಾರ ಬಾಲು ರಾಠೋಡ್ ಅವರನ್ನು ಸಮಿತಿಯ ಸಂಚಾಲಕರಾಗಿ ಆಯ್ಕೆಮಾಡಲಾಯಿತು. ನಿಗದಿತ ದಿನದಂದು ತಾಲ್ಲೂಕು ತಹಶೀಲ್ದಾರರ ಕಚೇರಿ ಎದುರು ಸಾಮೂಹಿಕ ಧರಣಿ ನಡೆಸಿ ಅನಧಿಕೃತ ಭೂ ಸಾಗುವಳಿಯನ್ನು ಸಕ್ರಮಗೊಳಿಸಲು ಅರ್ಜಿಗಳನ್ನು

ಪುಟ 10 ಕ್ಕೆ

ಮಂಗಳೂರಿನಲ್ಲಿ ದಕ್ಷಿಣ ರೈಲ್ವೆ ನೌಕರರ ವಿಭಾಗೀಯ ಸಮ್ಮೇಳನ

ರೈಲ್ವೆ ಬಿಕ್ಕಟ್ಟಿಗೆ ನವ ಉದಾರೀಕರಣ ನೀತಿಗಳು ಕಾರಣ: ಬಸುದೇವ ಆಚಾರ್ಯ

ಒಬ್ಬರ ಮೇಲೆ ಮತ್ತೊಬ್ಬರಾಗಿ ಬಂದ ರೈಲ್ವೆ ಮಂತ್ರಿಗಳು ಮಾಡಿದ ಅನಗತ್ಯ ವೆಚ್ಚಗಳು ಮತ್ತು ರಾಜಕೀಕರಣ, ನವ ಉದಾರ ನೀತಿಗಳು ಹಾಗೂ ಖಾಸಗೀಕರಣ ಇವತ್ತು ಭಾರತೀಯ ರೈಲ್ವೆಯನ್ನು ಒಂದು ಬಿಕ್ಕಟ್ಟಿನ ಪರಿಸ್ಥಿತಿಗೆ ತಳ್ಳಿ ಹಾಕಿದೆ ಎಂಬುದಾಗಿ ಸಂಸದ ಹಾಗೂ ರೈಲ್ವೆ ಸಮಿತಿಯ ಮಾಜಿ ಅಧ್ಯಕ್ಷ ಬಸುದೇವ ಆಚಾರ್ಯ ಕಟುವಾಗಿ ಟೀಕಿಸಿದ್ದಾರೆ.

ಅವರು ದಕ್ಷಿಣ ರೈಲ್ವೆ ಉದ್ಯೋಗಿಗಳ ಸಂಘ (ಡಿಆರ್‌ಇಯು)ದ ಪಾಲಕ್ಕಾಡು ವಿಭಾಗೀಯ



ಸಮ್ಮೇಳನವನ್ನು ಮಂಗಳೂರಿನ ಪುರಭವನದಲ್ಲಿ ಜೂನ್ 28 ರಂದು ಉದ್ಘಾಟಿಸಿ ಮಾತನಾಡುತ್ತಿದ್ದರು.

ರೈಲ್ವೆಗಾಗಿ ಇರುವ ಮೊಬಲಗು ಖಾಲಿಯಾಗಿದೆ. ಇದಕ್ಕೆ ಈ ಹಿಂದಿನ ರೈಲ್ವೆ ಮಂತ್ರಿ ಮಮತಾ ಬ್ಯಾನರ್ಜಿ ಕಾರಣರಾಗಿದ್ದಾರೆ. ಯಾವ ಉದ್ದೇಶಗಳನ್ನೂ ಸಾಧಿಸದ ವಿವಿಧ ಸಮಿತಿಗಳಿಗಾಗಿ ರೂ.4,000 ಕೋಟಿ ಖರ್ಚು ಮಾಡಲಾಗಿದೆ. ಪರಂಪರೆ, ಸಂಸ್ಕೃತಿ, ಸಾರ್ವಜನಿಕ ಸೌಕರ್ಯಕ್ಕೆ ಸಂಬಂಧಪಟ್ಟ ಸಮಿತಿಗಳಲ್ಲಿ ಆಕೆಯು ಆದರ ತೋರಿದವರು ತುಂಬಿಕೊಂಡಿದ್ದಾರೆ. ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಗಳಲ್ಲಿ ತನ್ನ ಅವಕಾಶಗಳನ್ನು ಹೆಚ್ಚಿಸುವುದಕ್ಕಾಗಿ, ಅಗತ್ಯವಿಲ್ಲದಿದ್ದರೂ ಪಶ್ಚಿಮ ಬಂಗಾಳಕ್ಕೆ ಯೋಜನೆಗಳ ಸರಪಣಿಯನ್ನೇ ಆಕೆ ಘೋಷಿಸಿದ್ದಾರೆ. ಈ ಯೋಜನೆಗಳಿಗಾಗಿನ ಜಾಹೀರಾತು ವೆಚ್ಚವನ್ನು ರೈಲ್ವೆ ನಿಧಿಯಿಂದಲೇ ಭರಿಸಲಾಗಿದೆ. ಮಮತಾ ಬ್ಯಾನರ್ಜಿ ಹಾಗೂ ಅವರ ಹಿಂದಿನ ರೈಲ್ವೆ ಮಂತ್ರಿಗಳಿಗೆ ತಮ್ಮ ಸಂಸದ್ ಕ್ಷೇತ್ರ ಹಾಗೂ ಪ್ರಚಾರಕ್ಕಾಗಿ ಖರ್ಚು ಮಾಡಲು ಬೇಕಾದಷ್ಟು ಹಣವಿತ್ತು. ಆದರೆ ಕಮ್ಮಿ ವೇತನ ಹೊಂದಿದ್ದ ಇಲಾಖೆಯ ಸಿಬ್ಬಂದಿಗಳಿಗೆ ನೀಡಲು ಹಣವಿರಲಿಲ್ಲ – ಎಂದು ಆಚಾರ್ಯ ಟೀಕಿಸಿದರು.

ರೈಲ್ವೆಯ ಪೂರಕ ಸೇವೆಗಳನ್ನು ಖಾಸಗೀಕರಣಗೊಳಿಸಲು ಆರಂಭಿಸಿದ್ದೇ ರೈಲ್ವೆಯ ಬಿಕ್ಕಟ್ಟಿಗೆ ನಾಂದಿಯಾಯಿತು. ಈ ಖಾಸಗೀಕರಣವು 1990 ರಲ್ಲಿ ಆರಂಭಿಸಲಾದ ಉದಾರವಾದೀ ನೀತಿಗಳ ನೇರ ಪರಿಣಾಮವಾಗಿದೆ. ರೈಲ್ವೆಯ ಉತ್ಪಾದನಾ ಘಟಕಗಳನ್ನು ಬಲಪಡಿಸುವುದರ ಬದಲು, ರೈಲ್ವೆ ಮಂತ್ರಾಲಯವು ಖಾಸಗಿ–ಸಾರ್ವಜನಿಕ ಸಹಭಾಗಿತ್ವ (ಪಿಪಿಪಿ) ಹೆಸರಲ್ಲಿ ಎಲ್ಲವನ್ನು ಕೈಚೆಲ್ಲಿ ಕೂತಿದೆ ಮತ್ತು ಕೇವಲ ಪ್ರಯಾಣಿಕರ ಹಾಗೂ ಸರಕು ಸಾಗಾಣೆಯನ್ನು ಮಾತ್ರ ವಿತರಿಸುವ ಪಾತ್ರ ವಹಿಸುತ್ತಿದೆ.



ವರದಿ : ವಾ.ಉ.

ಖಾಸಗೀಕರಣ ಮತ್ತು ಉದ್ಯೋಗದ ಹೊರಗುತ್ತಿಗೆ ನೀಡುವುದರ ಕಾರಣದಿಂದಾಗಿ ಅನೇಕ ಹುದ್ದೆಗಳು ರೈಲ್ವೆಯಲ್ಲಿ ಖಾಲಿ ಇವೆ. ನೇಮಕಾತಿ ಮಾಡಲು ಹಣ ಇಲ್ಲವೆಂದು ಇಲಾಖೆಯು ಹೇಳುತ್ತಿದ್ದು, ಇದರಿಂದಾಗಿ ಇಲಾಖೆಯ ದಕ್ಷತೆಯ ಮೇಲೂ ಪರಿಣಾಮ ಉಂಟಾಗಿದೆ. ಮತ್ತು ಇದರಿಂದಾಗಿ ಟ್ರೈನ್‌ಗಳಲ್ಲಿ ಪ್ರಯಾಣಿಸುತ್ತಿರುವ ಪ್ರಯಾಣಿಕರ ರಕ್ಷಣೆಯೂ ಆಪತ್ತಿಗೀಡಾಗಿದೆ ಎಂದು ಅವರು ವಿವರಿಸಿ ದರು. ಕೇಂದ್ರ ಸರ್ಕಾರವು ರೈಲ್ವೆಗೆ ಹೆಚ್ಚಿನ ಆಯವ್ಯಯದ ಪೋಷಣೆ ಒದಗಿಸಬೇಕು. ಮತ್ತು ಕಾರ್ಮಿಕ ವಿರೋಧಿಯಾದ ಉದಾರೀಕರಣ ನೀತಿಯನ್ನು ಕೈಬಿಡಬೇಕು. ಈ ನಿಟ್ಟಿನಲ್ಲಿ ಕಾರ್ಮಿಕರ ಹಕ್ಕುಗಳಿಗಾಗಿ ಡಿಆರ್‌ಇಯೂ ನಂತಹ ಸಂಘಟನೆಗಳು ನಡೆಸುತ್ತಿರುವ ಹೋರಾಟಗಳು ಬಹಳ ಮುಖ್ಯವಾದುದು – ಎಂದು ಬಸುದೇವ ಆಚಾರ್ಯ ಹೇಳಿದರು.

ದಕ್ಷಿಣ ರೈಲ್ವೆ ನೌಕರರ ಸಂಘದ ಸಮ್ಮೇಳನ:

ಭಾರತೀಯ ರೈಲ್ವೆಯಲ್ಲಿ ಖಾಲಿಯಿರುವ 2.80 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಬೇಕು; ಮುಂಗಡ ಕಾಯ್ದಿರಿಸುವಿಕೆಗೆ ಹೊಸ ಕೌಂಟರ್ ತೆರೆಯಬೇಕು; ಖಾಸಗೀಕರಣ ಹಾಗೂ ಗುತ್ತಿಗೆ ನೇಮಕವನ್ನು ಸ್ಥಗಿತಗೊಳಿಸಬೇಕು; ರೈಲ್ವೆಗಳಲ್ಲಿ ಸ್ವಚ್ಛತೆ, ಸಾಗಾಟ, ನೀರಿನ ವ್ಯವಸ್ಥೆ, ಟಿಕೆಟ್ ಕಾದಿರಿಸುವಿಕೆ ಮುಂತಾದ ಸೇವೆಗಳ ಖಾಸಗೀಕರಣದಿಂದ ಸಾರ್ವಜನಿಕರಿಗೆ ಆಗುವ ತೊಂದರೆಗಳನ್ನು ತಪ್ಪಿಸಬೇಕು; ಸಿಬ್ಬಂದಿಗಳಿಗೆ 12 ಗಂಟೆಗಳ ಶಿಫ್ಟನ್ನು 8 ಗಂಟೆಗಳ ಶಿಫ್ಟಾಗಿ ಬದಲಾಯಿಸಬೇಕು; ಮಂಗಳೂರು ಸೆಂಟ್ರಲ್ ಹಾಗೂ ಮಂಗಳೂರು ಜಂಕ್ಷನ್ ನಿಲ್ದಾಣಗಳನ್ನು ಆಧುನೀಕರಿಸಬೇಕು ಮೊದಲಾದ ಬೇಡಿಕೆಗಳನ್ನು ಸಮ್ಮೇಳನವು ಸರಕಾರದ ಮುಂದಿಟ್ಟಿರುತ್ತದೆ.

ದಕ್ಷಿಣ ರೈಲ್ವೆ ನೌಕರರ ಸಂಘದ ಪಾಲಕ್ಕಾಡು ವಿಭಾಗೀಯ ಅಧ್ಯಕ್ಷರಾದ ಮೆಹಬೂಬ್ ಆಲಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಕೆ.ಅಶೋಕನ್ ಪ್ರಸ್ತಾವನೆಯೊಂದಿಗೆ ಸ್ವಾಗತಿಸಿದರು. ಸಂಘದ ಕಾರ್ಯಾಧ್ಯಕ್ಷ ಆರ್.ಇಳಂಗೋವನ್, ಮ್ಯಥ್ಯೂ ಸಿರಿಯಾಕ್ ಮತ್ತಿತರ ಮುಖಂಡರಲ್ಲದೆ, ಸಿಐಟಿಯು ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷರಾದ ಜೆ.ಬಾಲಕೃಷ್ಣ ಶೆಟ್ಟಿ, ಕಾರ್ಯದರ್ಶಿ ವಸಂತ ಆಚಾರಿ, ಸುನಿಲ್ ಕುಮಾರ್ ಬಜಾಲ್ ಮತ್ತಿತರರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

ಡಿಆರ್‌ಇಯೂ ಸದಸ್ಯರು ಮಂಗಳೂರಿನ ಪುರಭವನದಿಂದ ಸೆಂಟ್ರಲ್ ರೈಲ್ವೆ ನಿಲ್ದಾಣದವರೆಗೆ ಬೇಡಿಕೆಗಳ ಘೋಷಣೆ ಕೂಗುತ್ತಾ ಮೆರವಣಿಗೆ ನಡೆಸಿದರು.

ರಾಜಕೀಯ ಅಸ್ಥಿರತೆ ಕೊನೆಗೊಳಿಸಲು ಮಂಗಳೂರಿನಲ್ಲಿ ಸಿಪಿಐ(ಎಂ) ಪ್ರತಿಭಟನೆ

ರಾಜ್ಯದ ಜನತೆ ಬರ, ಬೆಲೆ ಏರಿಕೆ ಇತ್ಯಾದಿ ಸಂಕಟಗಳಲ್ಲಿ ಮುಳುಗಿ ಏಳುತ್ತಿರುವಾಗ ಅವುಗಳನ್ನೆಲ್ಲಾ ಮರೆತು ಆಳುತ್ತಿರುವ ಬಿಜೆಪಿ ಪಕ್ಷದ ಮುಖಂಡರು ಅಧಿಕಾರಕ್ಕಾಗಿ ಕಿಚ್ಚಾಡುತ್ತಿದ್ದು, ಕಳೆದ ಕೆಲವು ತಿಂಗಳುಗಳಿಂದ ರಾಜಕೀಯ ಅಸ್ಥಿರತೆ ಉಂಟಾಗಿದೆ. ರಾಜ್ಯದಲ್ಲಿ ಆಡಳಿತ, ಕಾನೂನು ಪಾಲನೆ ಯಾವುದೂ ಸುವ್ಯವಸ್ಥಿತವಾಗಿ ನಡೆಯುತ್ತಿಲ್ಲ. ಒಂದು ಬಗೆಯ ಅರಾಜಕ ಪರಿಸ್ಥಿತಿ ಸಂವಿಧಾನಿಕ ಬಿಕ್ಕಟ್ಟನ್ನು ಉಂಟು ಮಾಡಲಿದೆ. ರಾಜ್ಯದ ಒಂದು ಭಾಗದಲ್ಲಿ ಬರ ಹಾಗೂ ಮಳೆಯ ಕೊರತೆಯಿಂದ ಬಳಲುತ್ತಿರುವ ಜನರ ಪರಿಸ್ಥಿತಿಯೆಡೆಗೆ ಸರಕಾರ ಕಣ್ಣು ಹಾಯಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರ ರಾಜೀನಾಮೆ ನೀಡಿ ವಿಧಾನ ಸಭೆಯನ್ನು ವಿಸರ್ಜಿಸಿ ಚುನಾವಣೆಗೆ ಅನುವು ಮಾಡಿಕೊಡಬೇಕು. ಇಲ್ಲವಾದಲ್ಲಿ ರಾಜ್ಯಪಾಲರು ಮಧ್ಯಪ್ರವೇಶಿಸಿ ಸೂಕ್ತ ಸಂವಿಧಾನಿಕ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಜುಲಾಯಿ 2 ರಂದು ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆಯನ್ನು ನಡೆಸಲಾಯಿತು.

ಪ್ರತಿಭಟನೆಯನ್ನುದ್ದೇಶಿಸಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಮಾತನಾಡಿದರು. ಧೋಪನೆ ಸುರಿದ ಮಳೆಯಲ್ಲಿಯೂ ಪಕ್ಷದ ಹಿತೈಷಿಗಳು ಸಾಕಷ್ಟು ಮಂದಿ ಭಾಗವಹಿಸಿದ್ದರು. ಜಿಲ್ಲಾ ಸಮಿತಿ ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಯು.ಬಿ.ಲೋಕಯ್ಯ, ಕೃಷ್ಣಪ್ಪ ಸಾಲ್ಯಾನ್ ಮತ್ತಿತರರೂ ಭಾಗವಹಿಸಿ ದ್ದರು. ರಾಜ್ಯಾದ್ಯಂತ ಸಿಪಿಐ(ಎಂ) ಪಕ್ಷ ನಡೆಸುತ್ತಿರುವ ಪ್ರತಿಭಟನೆಯ ಭಾಗವಾಗಿ ಮಂಗಳೂರಿನಲ್ಲಿ ಈ ಪ್ರತಿಭಟನಾ ಪ್ರದರ್ಶನ ಕೈಗೊಳ್ಳಲಾಗಿತ್ತು.

ಹಕ್ಕುಪತ್ರ ನಿವೇಶನಕ್ಕೆ ಒತ್ತಾಯಿಸಿ ಬೆಳ್ತಂಗಡಿಯಲ್ಲಿ ಪ್ರತಿಭಟನೆ

ಸರ್ಕಾರೀ ಜಮೀನಿನಲ್ಲಿ ಮನೆ ನಿರ್ಮಿಸಿ ಕುಳಿತವರಿಗೆ ಹಕ್ಕುಪತ್ರ ನೀಡಬೇಕು, ನಿವೇಶನ ರಹಿತರಿಗೆ ನಿವೇಶನ ಒದಗಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಸಿಪಿಐ(ಎಂ) ನೇತೃತ್ವದಲ್ಲಿ ಜುಲಾಯಿ 2 ರಂದು ಬೆಳ್ತಂಗಡಿ ತಾಲೂಕು ಪಂಚಾಯತ್ ಕಚೇರಿ ಎದುರು ಸಾರ್ವಜನಿಕರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯನ್ನು ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಹಿರಿಯ ಮುಖಂಡರಲ್ಲೊಬ್ಬರೂ ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷರೂ ಆದ ಕೆ.ಆರ್.ಶ್ರೀಯಾನ್ ಉದ್ಘಾಟಿಸಿ ಮಾತನಾಡಿದರು. ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಸಿಪಿಐ(ಎಂ)ಪಕ್ಷದ ಬೆಳ್ತಂಗಡಿ ತಾಲೂಕು ಮುಖಂಡರಾದ ಬಿ.ಎಂ.ಭಟ್, ಶಿವಕುಮಾರ್ ಎಸ್.ಎಂ, ಶೇಖರ ಲಾಯಿಲ ಕೂಡಾ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು.

ಇದಕ್ಕೂ ಮೊದಲು ಬೆಳ್ತಂಗಡಿ ಮೂರು ಮಾರ್ಗದಿಂದ ಬಸ್ ನಿಲ್ದಾಣದಿಂದಲಾಗಿ ತಾಲೂಕು ಪಂಚಾಯತ್ ಕಚೇರಿಯವರೆಗೆ ಮೆರವಣಿಗೆ ನಡೆಸಲಾಯಿತು. ಐನೂರಕ್ಕೂ ಮಿಕ್ಕಿ ಸಾರ್ವಜನಿಕರು ಪ್ರತಿಭಟನೆಯಲ್ಲಿ ಭಾಗವಹಿಸಿ ದರು. ಪ್ರತಿಭಟನಾ ಪ್ರದರ್ಶನ ಬಳಿಕ ತಾ.ಪಂ. ಕಾರ್ಯ ನಿರ್ವಹಣಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಸಿಪಿಐ(ಎಂ) ಪಕ್ಷದ ಜಯರಾಮ ಮಯ್ಯ, ನೀಲೇಶ್ ಪೆರಿಂಜೆ ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಭಯೋತ್ಪಾದನೆಯ ಬಗ್ಗೆ ಎಳ್ಳಷ್ಟೂ ಸಹನೆ ಬೇಡ

'ಪೀಪಲ್ಸ್ ಡೆಮಾಕ್ರೆಸಿ' ವಾರ ಪತ್ರಿಕೆಯ ಜುಲೈ 04, 2012 ರ ಸಂಚಿಕೆಯ ಸಂಪಾದಕೀಯ

ಮಾಧ್ಯಮಗಳ ವರದಿಗಳ ಪ್ರಕಾರ, ಅಭಿನವ ಭಾರತ ಎಂಬ ಬಲಪಂಥೀಯ ಹಿಂದುತ್ವ ಗುಂಪು ನಡೆಸಿರುವ ಭಯೋತ್ಪಾದಕ ದಾಳಿಗಳ ತನಿಖೆಗಳು ಹೆಚ್ಚೆಚ್ಚು ಕುತೂಹಲಕಾರಿಯಾಗುತ್ತಿವೆ. ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್ಐಎ) ಸಪ್ಟಂಬರ್ 2008ರ ಮಲೇಗಾಂವ್ ಬಾಂಬ್ ಸ್ಫೋಟದ ಪ್ರಮುಖ ಆರೋಪಿಯಾಗಿರುವ ಮಾಜಿ ಅಮಾನತುಗೊಂಡ ಮಿಲಿಟರಿ ಬೇಹುಗಾರಿಕೆ ಅಧಿಕಾರಿ ಲೆಫ್ಟಿನೆಂಟ್ ಕರ್ನಲ್ ಶ್ರೀಕಾಂತ ಪುರೋಹಿತರನ್ನು ತಮ್ಮ ಕಸ್ಟಡಿಗೆ ಒಪ್ಪಿಸಬೇಕೆಂದು ಕೇಳಿದೆ. ಆದರೆ, ಪುರೋಹಿತ್ ತನ್ನನ್ನು ವಶಕ್ಕೆ ತಗೊಳ್ಳಲು ಎನ್ಐಎಗೆ ಹಕ್ಕಿಲ್ಲ ಎಂದು ಸವಾಲು ಹಾಕಿದ್ದಾರೆ. ಸದ್ಯಕ್ಕೆ ಸುಪ್ರಿಂ ಕೋರ್ಟಿನಲ್ಲಿ ಇದರ ವಿಚಾರಣೆ ನಡೆಯುತ್ತಿದೆ.

ಪುರೋಹಿತ್‌ರ ಈ ಸವಾಲಿಗೆ ಆಧಾರ, ತನ್ನ ಅಧಿಕೃತ ಕರ್ತವ್ಯದ ಭಾಗವಾಗಿ ಮುಸ್ಲಿಂ ಬಾಹುಳ್ಯದ ಪ್ರದೇಶಗಳಲ್ಲಿ ಮಸೀದಿಗಳ ಮೇಲೆ ಬಾಂಬ್ ಹಾಕುವುದರಲ್ಲಿ ತೊಡಗಿದ್ದ ಬಲಪಂಥೀಯ ಉಗ್ರಗಾಮಿ ಗುಂಪುಗಳ ಒಳಹೊಕ್ಕು ಕೆಲಸ ಮಾಡಬೇಕಾಗಿದೆ ಎಂಬ ಅವರ ದಾವೆ. ತನ್ನ ವರ್ತನೆಯ ಬಗ್ಗೆ ಸೇನಾ ನ್ಯಾಯಾಲಯದ ವಿಚಾರಣೆಯ ಸಂದರ್ಭದಲ್ಲಿ ಮಲೇಂಗಾಂವ್ ಕೇಸಿನಲ್ಲಿ ಉಗ್ರಗಾಮಿಗಳ ಶಾಮೀಲಿನ ಬಗ್ಗೆ ಸಂಕೇತ ನೀಡುವ ಒಂದು ಗುಪ್ತ ವರದಿಯನ್ನು ಸಲ್ಲಿಸಿರುವುದಾಗಿ ಆತ ಹೇಳಿಕೊಂಡಿದ್ದಾರೆ. ಆದರೆ ಗೃಹ ಮಂತ್ರಾಲಯ ಅವರ ಈ ದಾವೆಯನ್ನು ನಿರಾಕರಿಸಿದೆ ಎಂದು ಮಾಧ್ಯಮ ವರದಿಗಳು ಹೇಳುತ್ತಿವೆ. "ಪುರೋಹಿತ್ ಅಕ್ಟೋಬರ್ 15, 2008ರಂದು ವರದಿಯನ್ನು ಸಿದ್ಧಪಡಿಸುವ ವೇಳೆಗೆ ಮಹಾರಾಷ್ಟ್ರದ ಭಯೋತ್ಪಾದನಾ-ವಿರೋಧಿ ತಂಡ(ಎಟಿಎಸ್)ಕ್ಕೆ ಸಾಧ್ವಿ ಪ್ರಜ್ಞಾ ಶಾಮೀಲಾಗಿರುವ ಬಗ್ಗೆ ತಿಳಿದಿತ್ತು. ಆಕೆಯನ್ನು ಅಕ್ಟೋಬರ್ 9ರಂದು ಪ್ರಶ್ನಿಸಲು ಸೂರತ್‌ಗೆ ಕರೆಯಲಾಗಿತ್ತು. ಇವೆಲ್ಲ ದಾಖಲೆಯಲ್ಲಿರುವ ಒಂದು ಸಂಗತಿ" ಎಂದು ಗೃಹ ಮಂತ್ರಾಲಯ ಹೇಳಿದೆ.

ಮುಚ್ಚಿ ಹಾಕುವ ತಂತ್ರ

ಪುರೋಹಿತ್ ತನ್ನ ಸಮರ್ಥನೆಗೆ ತೋರಿಸಿರುವ ಆತನ ಈ ವರದಿ ಮಲೇಗಾಂವ್ ಸ್ಫೋಟಗಳಲ್ಲಿ ಸಾಧ್ವಿ ಪ್ರಜ್ಞಾ ಮತ್ತು ಇತರರನ್ನು ಶಂಕಿತರೆಂದು ಹೆಸರಿಸಿದ ಮೇಲೆ ತಾನು ಸಾಗಿದ್ದ ದಾರಿಯನ್ನು ಮುಚ್ಚಿ ಹಾಕಲು ಮಾಡಿದ ತಂತ್ರ, ಏಕೆಂದರೆ ಮಹಾರಾಷ್ಟ್ರದ ಎಟಿಎಸ್ ಪ್ರಜ್ಞಾಳನ್ನು ಗುರುತಿಸಿದ ನಂತರ ತನಗೂ ಆ ಸ್ಫೋಟಗಳೊಂದಿಗೆ ಕುಣಿಕೆ ಹಾಕಬಹುದು ಎಂಬ ಭಯ ಆತನಿಗಿತ್ತು ಎಂಬ ಅನುಮಾನ ತನಿಖೆ ನಡೆಸುವವರಿಗೆ ಇದೆ ಎಂದೂ ಮಾಧ್ಯಮ ವರದಿಗಳು ಸೂಚಿಸುತ್ತಿವೆ.

> **ಸೇನಾ ವಿಚಾರಣೆ ಮತ್ತು ಮಲೇಗಾಂವ್ ಸ್ಫೋಟಗಳ ಬಗ್ಗೆ ಎನ್ಐಎ ತನಿಖೆ ಎರಡು ಭಿನ್ನ ಸಂಗತಿಗಳು. ಅಮಾನತುಗೊಂಡಿರುವ ಅಧಿಕಾರಿಯ ಬಗ್ಗೆ ಸೇನೆಗೆ ಕಂಡುಬಂದ ಸಂಗತಿಗಳು ಎನ್ಐಎ ತನಿಖೆ ಮಾಡುತ್ತಿರುವ ಭಯೋತ್ಪಾದನೆಯ ಆರೋಪಗಳ ಮೇಲೇನೂ ಪರಿಣಾಮ ಬೀರುವುದಿಲ್ಲ. ಈಗ ಈ ವಿಷಯ ಸುಪ್ರಿಂ ಕೋರ್ಟಿನ ಮುಂದಿದ್ದು, ಅದನ್ನು ದೇಶದ ಕಾನೂನಿಗೆ ಅನುಗುಣವಾಗಿ ನಿರ್ಧರಿಸಲಾಗುತ್ತದೆ. ಆದರೆ, ಭಾರತ ಭಯೋತ್ಪಾದನೆಯ ಎಲ್ಲ ಸ್ವರೂಪಗಳು ಮತ್ತು ಅಭಿವ್ಯಕ್ತಿಗಳ ಬಗ್ಗೆ ಎಳ್ಳಷ್ಟೂ ಸಹನೆ ತೋರಬಾರದು ಎಂಬುದನ್ನು ಮತ್ತೊಮ್ಮೆ ಒತ್ತಿ ಹೇಳುವುದು ಅಗತ್ಯವಾಗಿದೆ. ಅಲ್ಲದೆ, ಭಯೋತ್ಪಾದಕ ದಾಳಿಗಳನ್ನು ಎಸಗಿದ ಎಲ್ಲರನ್ನು ಹಿಡಿದು ಶಿಕ್ಷಿಸಲೇ ಬೇಕು.**

ಸೇನೆಯ ವಿಚಾರಣೆ ಪುರೋಹಿತ್ ವಿರುದ್ಧ ಭಯೋತ್ಪಾದನೆಯ ಆಪಾದನೆಗಳು ಮತ್ತು ಮಲೇಂಗಾಂವ್ ಸ್ಫೋಟಗಳನ್ನು ನಡೆಸುವ ಆತನ ಪಿತೂರಿಯ ಬಗೆಗಿರಲಿಲ್ಲ. 'ವಿಚಾರಣೆಯ ವ್ಯಾಪ್ತಿ ಸ್ಪಷ್ಟವಾಗಿತ್ತು. ಆತ ಸೇವಾನಿಯಮಗಳನ್ನು ಉಲ್ಲಂಘಿಸಿದ್ದಾನೆಯೇ ಎಂದು ಕಂಡು



ಹಿಡಿಯುವುದು ಸೇನೆಯ ಆದೇಶವಾಗಿತ್ತು. ಇಂತಹ ಹಲವು ಉದಾಹರಣೆಗಳು ಕಂಡು ಬಂದವು" ಎಂದು ಒಬ್ಬ ಹಿರಿಯ ಸೇನಾಧಿಕಾರಿ ಹೇಳಿರುವದಾಗಿ ಮಾಧ್ಯಮ ವರದಿಗಳು ತಿಳಿಸುತ್ತವೆ.

ಸೇನಾ ವಿಚಾರಣೆ ಮತ್ತು ಮಲೇಗಾಂವ್ ಸ್ಫೋಟಗಳ ಬಗ್ಗೆ ಎನ್ಐಎ ತನಿಖೆ ಎರಡು ಭಿನ್ನ ಸಂಗತಿಗಳು. ಪುರೋಹಿತ್ ಅವರನ್ನು ಬಲಪಂಥೀಯ ಗುಂಪು 'ಅಭಿನವ ಭಾರತ'ದೊಳಕ್ಕೆ ಅತಿಕ್ರಮಿಸಲು ಎಂದೂ ಅಧಿಕಾರ ನೀಡಿಲ್ಲ ಎಂದು ಸೇನಾ ಮೂಲಗಳು ಹೇಳಿರುವುದಾಗಿ ಮಾಧ್ಯಮ ವರದಿಗಳು ಹೇಳುತ್ತವೆ. ಈ ಗುಂಪಿನೊಂದಿಗೆ ಆತನ ಸಂಪರ್ಕ, ವಾಸ್ತವವಾಗಿ, ಸೇವಾನಿಯಮಗಳ ಉಲ್ಲಂಘನೆ. ಆದ್ದರಿಂದ ಅಮಾನತುಗೊಂಡಿರುವ ಅಧಿಕಾರಿಯ ಬಗ್ಗೆ ಸೇನೆಗೆ ಕಂಡುಬಂದ ಸಂಗತಿಗಳು ಎನ್ಐಎ ತನಿಖೆ ಮಾಡುತ್ತಿರುವ ಭಯೋತ್ಪಾದನೆಯ ಆರೋಪಗಳ ಮೇಲೇನೂ ಪರಿಣಾಮ ಬೀರುವುದಿಲ್ಲ.

ಈಗ ಈ ವಿಷಯ ಸುಪ್ರಿಂ ಕೋರ್ಟಿನ ಮುಂದಿದ್ದು, ಅದನ್ನು ದೇಶದ ಕಾನೂನಿಗೆ ಅನುಗುಣವಾಗಿ ನಿರ್ಧರಿಸಲಾಗುತ್ತದೆ. ಆದರೆ, ಭಾರತ ಭಯೋತ್ಪಾದನೆಯ ಎಲ್ಲ ಸ್ವರೂಪಗಳು ಮತ್ತು ಅಭಿವ್ಯಕ್ತಿಗಳ ಬಗ್ಗೆ ಎಳ್ಳಷ್ಟೂ ಸಹನೆ ತೋರಬಾರದು ಎಂಬುದನ್ನು ಮತ್ತೊಮ್ಮೆ ಒತ್ತಿ ಹೇಳುವುದು ಅಗತ್ಯವಾಗಿದೆ. ಅಲ್ಲದೆ, ಭಯೋತ್ಪಾದಕ ದಾಳಿಗಳನ್ನು ಎಸಗಿದ ಎಲ್ಲರನ್ನು ಹಿಡಿದು ಶಿಕ್ಷಿಸಲೇ ಬೇಕು.

ಐಕ್ಯತೆಗೆ ಗಂಭೀರ ಬೆದರಿಕೆ

ಇಲ್ಲಿ ನಮ್ಮ ದೇಶದ ಆರೋಗ್ಯಕ್ಕೆ ಸಂಬಂಧಪಟ್ಟ ಒಂದು ವಿಶಾಲ ಪ್ರಶ್ನೆಯೂ ಇದೆ. ಹಿಂದುತ್ವ ಭಯೋತ್ಪಾದಕ ಗುಂಪುಗಳು ಹರಡಿರುವ ಭಯೋತ್ಪಾದನೆಯ ಜಾಲ ವ್ಯಾಪಕಗೊಳ್ಳುತ್ತಲೇ ಇದೆ, ಆ ಮೂಲಕ ಜಾತ್ಯಾತೀತ-ಪ್ರಜಾಸತ್ತಾತ್ಮಕ ಆಧುನಿಕ ಭಾರತದ ಐಕ್ಯತೆ ಮತ್ತು ಸಮಗ್ರತೆಗೆ ಒಂದು ಅತ್ಯಂತ ಗಂಭೀರ ಬೆದರಿಕೆಯನ್ನು ಒಡ್ಡುತ್ತಿದೆ.

ಈಗ ನಡೆಯುತ್ತಿರುವ ತನಿಖೆಗಳು ಜುಲೈ 2010ರಲ್ಲಿ ಕೇಂದ್ರ ಗೃಹಮಂತ್ರಿಗಳು ಸಂಸತ್ತಿನಲ್ಲಿ ಮಾಡಿದ ಪ್ರಕಟಣೆಯ ಪರಿಣಾಮ. ಫೆಬ್ರುವರಿ 18, 2007ರ ಮಧ್ಯರಾತ್ರಿಯ ವೇಳೆಗೆ ದಿಲ್ಲಿ-ಲಾಹೋರ್ ಸಮಝೌತ ಎಕ್ಸ್‌ಪ್ರೆಸ್‌ನ ಎರಡು ಕೋಚ್‌ಗಳಲ್ಲಿ ಬಾಂಬ್ ಸ್ಫೋಟಗಳು ನಡೆದು 68 ಜನರು ಪ್ರಾಣ ಕಳಕೊಂಡರು.

ಸಮಝೌತ ಎಕ್ಸ್‌ಪ್ರೆಸ್ ಮೇಲೆ ಭಯೋತ್ಪಾದಕ ದಾಳಿಗಳ ವಿಚಾರಣೆಯನ್ನು ಎನ್ಐಎ ನಡೆಸುತ್ತದೆ ಮತ್ತು ಮಲೇಗಾಂವ್(ಸಪ್ಟೆಂಬರ್ 8, 2006), ಹೈದರಾಬಾದಿನ ಮಕ್ಕಾ ಮಸೀದಿ(ಮೇ 18, 2007) ಮತ್ತು ಅಜ್ಮೇರ್‌ನ ದರ್ಗಾದಲ್ಲಿನ(ಅಕ್ಟೋಬರ್ 11,2007) ಭಯೋತ್ಪಾದಕ ದಾಳಿಗಳಿಗೂ ಈ ಆರೋಪಿಗಳಿಗೂ ಇರುವ ಕೊಂಡಿಗಳೂ ಸೇರಿದಂತೆ ದಾಳಿಯ ಹಿಂದಿನ ಸಮಸ್ತ ಪಿತೂರಿಯನ್ನು ಪರೀಕ್ಷಿಸುವುದಾಗಿ ಆಗ ಹೇಳಲಾಗಿತ್ತು.

ಇಂತಹ ತನಿಖೆಗಳು ಈ ಸಂಗತಿಗಳನ್ನೆಲ್ಲ ಹೊರಗೆಡಹುವ ಮೊದಲೇ ಸಿಪಿಐ(ಎಂ) ದೇಶದ ಹಲವೆಡೆಗಳಲ್ಲಿ ನಡೆದ ಬಾಂಬ್ ಸ್ಫೋಟಗಳ ಘಟನೆಗಳಿಗೂ ಆರೆಸ್ಸೆಸ್‌ನ ಕೆಲವು ಅಂಗ ಸಂಘಟನೆಗಳಿಗೂ ಇರುವ ಕೊಂಡಿಗಳ ಬಗ್ಗೆ ಬಂದಿದ್ದ ವಿವಿಧ ವರದಿಗಳತ್ತ ಕೇಂದ್ರ ಸರಕಾರದ ಗಮನ ಸೆಳೆದಿತ್ತು. 2008ರಷ್ಟು ಹಿಂದೆಯೇ ಅಕ್ಟೋಬರ್ 13ರಂದು ನಡೆದ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಒಂದು ಸಭೆಯಲ್ಲಿ ಸಿಪಿಐ(ಎಂ) ಮಂಡಿಸಿದ ಪ್ರಬಂಧದಲ್ಲಿ ಇದನ್ನು ತಿಳಿಸಿತ್ತು–"ಕಳೆದ ಕೆಲವು ವರ್ಷಗಳಲ್ಲಿ ಪೋಲೀಸ್ ತನಿಖೆಗಳು ದೇಶದ ಹಲವೆಡೆ ವಿವಿಧ ಬಾಂಬ್ ಸ್ಫೋಟಗಳಲ್ಲಿ ಭಜರಂಗ ದಳ ಅಥವ ಬೇರೆ ಆರೆಸ್ಸೆಸ್ ಸಂಘಟನೆಗಳ



ಶಾಮೀಲನ್ನು ಗಮನಿಸಿವೆ– 2003ರಲ್ಲಿ ಮಹಾರಾಷ್ಟ್ರದ ಪರ್ಬಾನಿ, ಜಾಲ್ನ ಮತ್ತು ಜಲಗಾಂವ್ ಜಿಲ್ಲೆಗಳಲ್ಲಿ, 2005ರಲ್ಲಿ ಉತ್ತರ ಪ್ರದೇಶದ ಮಾವು ಜಿಲ್ಲೆಯಲ್ಲಿ, 2006ರಲ್ಲಿ ನಾಂದೆಡ್‌ನಲ್ಲಿ, ಜನವರಿ 2008ರಲ್ಲಿ ತೆಂಕಾಸಿಯ ಆರೆಸ್ಸೆಸ್ ಕಚೇರಿಯಲ್ಲಿ, ತಿರುನಲ್ವೇಲಿಯಲ್ಲಿ, ಆಗಸ್ಟ 2008ರಲ್ಲಿ ಕಾನ್ಪುರದಲ್ಲಿ..ಇತ್ಯಾದಿ, ಇತ್ಯಾದಿ."

ಹಿಂಸಾಚರಣೆಯ ಇತಿಹಾಸ

ಆರೆಸ್ಸೆಸ್ ತನ್ನ ರಕ್ಷಣೆಗೆ ಏನೇ ಹೇಳಿಕೊಳ್ಳಲಿ, ಮಹಾತ್ಮ ಗಾಂಧಿಯವರ ಹತ್ಯೆಯ ಸಂದರ್ಭದಲ್ಲಿ ಮಾಡಿದಂತೆ 'ತಿರುಳು' ಮತ್ತು 'ಅಂಚು' ಎಂಬ ಭಿನ್ನತೆಗಳ ಸಿದ್ಧಾಂತಗಳನ್ನು ಹುಟ್ಟು ಹಾಕಲಿ, ಅವನ್ನೆಲ್ಲ ಅದರ ಇತಿಹಾಸ ಮತ್ತು ಅದರ ಕೆಲಸದ ವಿಧಾನ ಸುಳ್ಳಾಗಿಸುತ್ತವೆ. ಆರೆಸ್ಸೆಸ್ ಹಿಂದೂಗಳಿಗೆ ಸಶಸ್ತ್ರ ಸಮರ ತರಬೇತಿ ಕೊಡುವ, ಹಿಂಸೆಯನ್ನು ರಾಜಕೀಯ ಅಸ್ತ್ರವಾಗಿ ಬಳಸುವ ಒಂದು ದೀರ್ಘ ಇತಿಹಾಸವನ್ನೇ ಹೊಂದಿದೆ. "ಎಲ್ಲ ರಾಜಕೀಯವನ್ನು ಹಿಂದೂಕರಣಗೊಳಿಸಿ, ಹಿಂದೂತ್ವವನ್ನು ಮಿಲಿಟರೀಕರಣಗೊಳಿಸಿ" ಎಂಬ ಘೋಷಣೆ ಕೊಟ್ಟವರು ಸಾವರ್ಕರ್. ಇದರಿಂದ ಪ್ರೇರಿತರಾದವರು ಡಾ. ಬಿ.ಎಸ್.ಮೂಂಜೆ, ಆರೆಸ್ಸೆಸ್ ಸಂಸ್ಥಾಪಕ ಡಾ.ಹೆಡ್ಗೆವಾರ್ ಅವರ ಗುರು. ಅವರು ಫ್ಯಾಸಿಸ್ಟ್

ಪುಟ 14 ಕ್ಕೆ

ಅಸಮರ್ಥ ಸರ್ಕಾರದ ವಿರುದ್ಧ ಸಿಡಿದೇಳಬೇಕು

ಒಂದು ಅಸಮರ್ಥ ಮತ್ತು ನಿಷ್ಕ್ರಿಯ ಸರ್ಕಾರವನ್ನು ಕಿತ್ತೊಗೆದು ಕರ್ನಾಟಕ ರಾಜ್ಯದ ಜನತೆಯನ್ನು ರಕ್ಷಿಸಬೇಕಾಗಿದೆ. ಆದರಿಂದಾಗಿಯೇ ಕಳೆದ 6 ತಿಂಗಳಿಂದ ಸಿಪಿಐ(ಎಂ) ಪಕ್ಷ ಸತತವಾಗಿ ಸರ್ಕಾರ ರಾಜಿನಾಮೆ ಕೊಡಬೇಕು ಮತ್ತು ಹೊಸದಾಗಿ ಜನಾದೇಶವನ್ನು ಪಡೆಯಬೇಕೆಂದು ಒತ್ತಾಯಿಸುತ್ತಿದೆ. ಆದರೆ ಕಳೆದ ಶುಕ್ರವಾರ ಅಂದರೆ ಜೂನ್ 29 ರಂದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನ ಬಣದ 9 ಜನ ಸಚಿವರು ಮುಖ್ಯಮಂತ್ರಿ ಸದಾನಂಧಗೌಡರಿಗೆ ತಮ್ಮ ರಾಜಿನಾಮೆಯನ್ನು ಸಲ್ಲಿಸಿ ನಿಮ್ಮ ಮೇಲೆ ನಮಗೆ ವಿಶ್ವಾಸವಿಲ್ಲವೆಂದು ತಿಳಿಸಿ ತಕ್ಷಣ ನಾಯಕತ್ವ ಬದಲಾವಣೆ ಮಾಡಬೇಕೆಂದು ಪಕ್ಷದ ಕೇಂದ್ರ ನಾಯಕತ್ವದ ಮೇಲೆ ತೀವ್ರ ಒತ್ತಡವನ್ನು ಹೇರಿರುವುದರಿಂದ ಬಿಜೆಪಿಯಲ್ಲಿನ ಅಂತರಿಕ ಬಿಕ್ಕಟ್ಟು ಪರಾಕಾಷ್ಠೆ ತಲುಪಿತು. 32 ಜನರ ಮಂತ್ರಿಮಂಡಲದಲ್ಲಿ ಈ ಮೊದಲೇ 10 ಜನ ಸಚಿವ ಸ್ಥಾನಗಳು ಖಾಲಿ ಇದ್ದು ಈಗ 9 ಜನರ ರಾಜಿನಾಮೆಯಿಂದಾಗಿ ಒಟ್ಟು 19 ಸಚಿವ ಸ್ಥಾನಗಳು ಖಾಲಿ ಆಗಿ ಹೆಚ್ಚು ಕಡಿಮೆ ಸರ್ಕಾರವೇ ಇಲ್ಲದಂತಾಗಿತ್ತು. ಇದರಿಂದಾಗಿ ರಾಜ್ಯದಲ್ಲಿ ಹೆಚ್ಚು ಕಡಿಮೆ ಆಡಳಿತವೇ ಇಲ್ಲದಂತಾಗಿತ್ತು. ಒಂದು ರೀತಿಯ ಸಂವಿಧಾನಿಕ ಬಿಕ್ಕಟ್ಟು ಉಂಟಾಗಿತ್ತು. ಕಳೆದ ಒಂದು ವರ್ಷದಿಂದ ಅಂದರೆ ಸರಣಿಯಾಗಿ ಮಂತ್ರಿಗಳು ಮತ್ತು ಶಾಸಕರು ಜೈಲು ಸೇರಲಾರಂಭಿಸಿದಾಗಿನಿಂದ 10 ಮಂತ್ರಿ ಸ್ಥಾನಗಳು ಖಾಲಿಯಾದರೂ ಆ ಸ್ಥಾನಗಳನ್ನು ತುಂಬಲು ಅಸಮರ್ಥವಾದ ಮುಖ್ಯಮಂತ್ರಿ ಮತ್ತು ದಿವಾಳಿಯಾದ ಬಿಜೆಪಿ ಸರ್ಕಾರವನ್ನು ನಿಷ್ಕ್ರಿಯಗೊಳಿಸಿತ್ತು. 9 ಮಂತ್ರಿಗಳು ರಾಜಿನಾಮೆ ಕೊಡುವುದರಿಂದಾಗಿ ಒಂದು ರೀತಿಯಲ್ಲಿ ಸರ್ಕಾರವೇ ಇಲ್ಲದಂತಾಯಿತು. ರಾಜಿನಾಮೆಗಳನ್ನು ಅಂಗೀಕರಿಸುವ ಮತ್ತು ಹೊಸಮಂತ್ರಿಗಳನ್ನು ಸೇರಿಸಿಕೊಂಡು ಸರ್ಕಾರವನ್ನು ರಚಿಸುವ ತಾಕತ್ತಿಲ್ಲದ ಮುಖ್ಯಮಂತ್ರಿಯು ತಾನೊಬ್ಬ ಕೈಲಾಗದ ಅಸಮರ್ಥ ಮುಖ್ಯಮಂತ್ರಿಯೆಂದು ಸಾಬೀತು ಪಡಿಸಿದ್ದಾರೆ. ತಾನೊಂದು ಭಿನ್ನ ಶಿಸ್ತಿನ ಪಕ್ಷವೆಂದು ಹೇಳಿಕೊಳ್ಳುವ ಬಿಜೆಪಿ ಭಿನ್ನಮತೀಯರನ್ನು ಹತೋಟಿಯಲ್ಲಿಡುವಲ್ಲಿ ಅಥವಾ ಪಕ್ಷದ ಶಿಸ್ತು ಉಲ್ಲಘಿಸಿದವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳುವಲ್ಲಿ ಸಂಪೂರ್ಣ ವಿಫಲವಾಗಿ ತನ್ನ ರಾಜಕೀಯ ದಿವಾಳಿಕೋರತನವನ್ನು ಪ್ರದರ್ಶಿಸಿದೆ. ಬಫೂನ್‌ನಂತೆ ಆಡುವ ರಾಜ್ಯಾಧ್ಯಕ್ಷ ಮತ್ತು

> ಕರ್ನಾಟಕ ರಾಜ್ಯದಲ್ಲಿನ ಬಿಜೆಪಿ ಸರ್ಕಾರ ಅನ್ನುವುದು ರಾಜ್ಯದ ಜನತೆಗೆ ಒಂದು ಅಪಮಾನವಾಗಿದೆ. ಅದು ಜನರ ನೋವು, ದುಃಖಗಳನ್ನು ಅಳಿಸುವ ಕೆಲಸಕ್ಕೆ ಬದಲಿಗೆ ರಾಜ್ಯದ ಹೆಸರಿಗೆ ಮಸಿ ಬಳಿಯುವ ಕೆಲಸದಲ್ಲಿ ನಿರತವಾಗಿದೆ. ಇಂತಹ ಸರ್ಕಾರವೊಂದು ನಿಜಕ್ಕೂ ಅಧಿಕಾರದಲ್ಲಿ ಇರಬೇಕಾ ? ಎಂದು ಪ್ರಶ್ನಿಸಿದ್ದಾರೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳು.

ಜಿ.ವಿ ಶ್ರೀರಾಮರೆಡ್ಡಿ

ಕೋಡಂಗಿಗಳ ರೀತಿಯಲ್ಲಿ ಆಡುತ್ತಿರುವ ಬಿಜೆಪಿ ಕೇಂದ್ರ ನಾಯಕರು ಕಳೆದ ನಾಲ್ಕು ವರ್ಷಗಳಿಂದ ರಾಜ್ಯದ ಸಾರ್ವಜನಿಕ ಸಂಪತ್ತನ್ನು ಮತ್ತು ಪ್ರಕೃತಿ ಸಂಪತ್ತನ್ನು ಲೂಟಿಹೊಡೆದು, ಇಡೀ ದೇಶದಲ್ಲೇ ಭ್ರಷ್ಟಾಚಾರದಲ್ಲಿ ರಾಜ್ಯವನ್ನು ನಂಬರ್ ಒನ್ ಸ್ಥಾನಕ್ಕೆ ಏರಿಸಿದ್ದಾರೆ.

ಪ್ರವಾಹಕ್ಕೂ ಪರಿಹಾರವಿಲ್ಲ. ಬರಕ್ಕೂ ಉತ್ತರವಿಲ್ಲ

ಈಗ ಕಳೆದ 3 ವರ್ಷಗಳಿಂದ ಒಂದು ಕಡೆ ಅತಿವೃಷ್ಟಿ, ಇನ್ನೊಂದು ಕಡೆ ಅನಾವೃಷ್ಟಿಯಿಂದಾಗಿ ರಾಜ್ಯದ ಜನತೆ ಅದರಲ್ಲೂ ಹಳ್ಳಿಗಾಡಿನ ಬಡಜನ ತತ್ತರಿಸಿ ಹೋಗಿದ್ದಾರೆ. ಮುಂಗಾರು ಮಳೆಯ ವಿಫಲತೆಯಿಂದಾಗಿ ಮತ್ತೆ ರಾಜ್ಯದಲ್ಲಿ ಬರಗಾಲದ ಛಾಯೆ ನಿರ್ಮಾಣವಾಗಿ ಸ್ಪಷ್ಟವಾಗಿ ಗೋಚರಿಸತೊಡಗಿದೆ. ರಾಜ್ಯದ ಜನತೆಯು ಎರಡನೇ ವರ್ಷವೂ ಬರಗಾಲವನ್ನು ಎದುರಿಸುವ ಗಂಭೀರ ಪರಸ್ಥಿತಿ ಇಂತಹ ಸಂದರ್ಭದಲ್ಲಿ ರಾಜ್ಯದ ಜನತೆಯ ರಕ್ಷಣೆಗೆ ದಾವಿಸಬೇಕಾಗಿದ್ದ ಸರ್ಕಾರ ತನ್ನ ಹುಟ್ಟು ಗುಣವಾದ ಗುಂಪುಗಾರಿಕೆ ಮತ್ತು ಭಿನ್ನಮತದಿಂದಾಗಿ ಸಂಕಷ್ಟದಲ್ಲಿರುವ ರಾಜ್ಯದ ಜನತೆಗೆ ದ್ರೋಹವನ್ನು ಬಗೆದಿದೆ. ಇಂತಹ ಜನ ದ್ರೋಹಿ ಸರ್ಕಾರ ಒಂದು ನಿಮಿಷವೂ ಅಧಿಕಾರದಲ್ಲಿ ಇರಕೊಡದು. ಜನತೆ ಇದನ್ನು ಕಿತ್ತೊಗೆಯಬೇಕಾಗಿದೆ. ಇದರ ಜೊತೆಗೆ ರಾಜ್ಯದ ಜನತೆ ಸಂಕಷ್ಟದಲ್ಲಿರುವಾಗ ಜನಹಿತ ಮರೆತ ಸರ್ಕಾರ ಮತ್ತು ಅದು ಸೃಷ್ಟಿ ಮಾಡಿರುವ ಸಂವಿಧಾನಿಕ ಬಿಕ್ಕಟ್ಟಿನಿಂದಾಗಿ ರಾಜ್ಯಪಾಲರು ತತ್‌ಕ್ಷಣ ಮಧ್ಯ ಪ್ರವೇಶ ಮಾಡಬೇಕೆಂದು ಸಿಪಿಐ(ಎಂ) ಪಕ್ಷ ಒತ್ತಾಯಿಸಿತ್ತು. 9 ಜನ ಮಂತ್ರಿಗಳು ಮುಖ್ಯಮಂತ್ರಿಗಳಿಗೆ ರಾಜಿನಾಮೆಯನ್ನು ಕೊಟ್ಟು ನಿಮ್ಮ ಮೇಲೆ ನಮಗೆ ವಿಶ್ವಾಸವಿಲ್ಲವೆಂದು ಸ್ಪಷ್ಟಪಡಿಸಿದ್ದರು. ತನ್ನ ಮಂತ್ರಿಮಂಡಲದ ಸದಸ್ಯರಿಗೆ ತನ್ನ ಮೇಲೆ ವಿಶ್ವಾಸವಿಲ್ಲದಿರುವಾಗ ಮುಖ್ಯಮಂತ್ರಿಗಳು ಸರ್ಕಾರವನ್ನು ಹೇಗೆ ನಡೆಸಲಿಕ್ಕಾಗುತ್ತದೆ ? ಒಂದು ಸಲ ಮಂತ್ರಿಮಂಡಲದ ಸದಸ್ಯರು ತನ್ನ ಮೇಲೆ ಅವಿಶ್ವಾಸ ವ್ಯಕ್ತಪಡಿಸಿದರೆ ಮುಖ್ಯಮಂತ್ರಿ ಸ್ವತಃ ತಾನಾದರು ರಾಜಿನಾಮೆ ಕೊಡಬೇಕು ಅಥವಾ ವಿಶ್ವಾಸವಿಲ್ಲದ ಮಂತ್ರಿಗಳನ್ನು ವಜಾಮಾಡಿ ಹೊಸ ಮಂತ್ರಿಮಂಡಲವನ್ನಾದರೂ ರಚಿಸಬೇಕು ಇದ್ಯಾವುದು ಇಲ್ಲದೆ ಮುಖ್ಯಮಂತ್ರಿ ಅಸಹಾಯಕತೆ ತೋರಿದ್ದಾರೆ. ಇದರಿಂದಾಗಿ ಸಂವಿಧಾನಿಕ ಸಮಸ್ಯೆ ಉದ್ಭವವಾಗಿತ್ತು. ಅದಕ್ಕೋಸ್ಕರವೇ ಸಿಪಿಐ(ಎಂ) ಪಕ್ಷ ರಾಜ್ಯಪಾಲರು ಮಧ್ಯಪ್ರವೇಶ ಮಾಡಬೇಕೆಂದು ಒತ್ತಾಯಿಸಿತ್ತು. ಅದಕ್ಕಾಗಿ ಪಕ್ಷ ಜುಲೈ 02, 2012 ರಂದು ರಾಜ್ಯಾದ್ಯಂತ ಪ್ರತಿಭಟನೆಗೆ ಕರೆನೀಡಿತು. ರಾಜ್ಯದ ಸುಮಾರು 20 ಜಿಲ್ಲೆಗಳಲ್ಲಿ ಈ ಕರೆಯನ್ನು ಜಾರಿಗೊಳಿಸಲಾಗಿದೆ.



ಲೂಟಿ ಲೂಟಿ ಅವ್ಯಾಹತ ಲೂಟಿ

ಬಿಜೆಪಿ ತಾನು ಅಧಿಕಾರಕ್ಕೆ ಬಂದಾಗಿನಿಂದಲೂ ಸತತವಾಗಿ ಗುಂಪುಗಾರಿಕೆಯ ಚಟುವಟಿಕೆಗಳಿಂದಾಗಿ ಒಂದು ಕಡೆ ಆಡಳಿತವನ್ನು ನಿಷ್ಕ್ರಿಯಗೊಳಿಸಿ, ಇನ್ನೊಂದು ಕಡೆ ರಾಜ್ಯವನ್ನು ಲೂಟಿ ಹೊಡೆಯುವುದರಲ್ಲಿ ಮುಳುಗಿದೆ. ಇದೀಗ ತನ್ನ ಗೋರಿಯನ್ನು ತಾನೇ ತೋಡಿಕೊಂಡು ರಾಜ್ಯದ ಜನತೆಗೂ ಗೋರಿಯನ್ನು ತೋಡುವ ಹುನ್ನಾರ ನಡೆಸಿದೆ. ದಕ್ಷಿಣ ಭಾರತದ ಮೊದಲ ಬಿಜೆಪಿ ಸರ್ಕಾರವೆಂದು ಹೆಮ್ಮೆ ಪಟ್ಟುಕೊಳ್ಳುತ್ತಿದ್ದ ಬಿಜೆಪಿಯ ರಾಷ್ಟ್ರೀಯ ನಾಯಕತ್ವ ಇಂದು ತನ್ನೊಳಗಿನ ಗುಂಪುಗಾರಿಕೆಯಿಂದಾಗಿ. ಇಲ್ಲಿನ ಗುಂಪುಗಾರಿಕೆಯನ್ನು ಸಹಿಸಿಕೊಂಡು ಅಸಹಾಯಕರಾಗಿ ಒಂದು ರೀತಿಯ ಕೊಂಡಿಗಳಂತೆ ವರ್ತಿಸುತ್ತಿದ್ದಾರೆ. ಹೆಚ್ಚು ಕಡಿಮೆ ಕಳೆದ ಒಂದು ವರ್ಷದಿಂದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಪಕ್ಷದ ನಾಯಕತ್ವವನ್ನು ಬ್ಲಾಕ್‌ಮೇಲ್ ಮಾಡಿ ಹೆದರಿಸುತ್ತಿದ್ದಾರೆ. ಕೇಂದ್ರ ನಾಯಕತ್ವ ಅಸಹಾಯಕತೆಯಿಂದ ಅದನ್ನು ಸಹಿಸುತ್ತಿದೆ. ಈಗ ಬಿಜೆಪಿಯಲ್ಲಿ ಯಾರಿಗೆ ಯಾರು ನಾಯಕರು ? ಎಷ್ಟು ಗುಂಪುಗಳಿವೆ ? ಎಂಬುದೇ ಗೊತ್ತಾಗದ ಅರಾಜಕ ಸ್ಥಿತಿ ನಿರ್ಮಾಣವಾಗಿದೆ.

ಅಪಾಯಕಾರಿ ಜಾತಿ ರಾಜಕಾರಣ

ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ರಾಜ್ಯದಲ್ಲಿ ಹಿಂದೆಂದೂ ಕಾಣದಂತಹ ಒಂದು ಅಪಾಯಕಾರಿ ಜಾತಿ ರಾಜಕಾರಣವನ್ನು ಸೃಷ್ಠಿ ಮಾಡಿದೆ. ಅದು ಈಗ ತನ್ನ ಪಕ್ಷವನ್ನೇ ನುಂಗಿ ಹಾಕುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ. ಇನ್ನೊಂದು ಕಡೆ ಇಡೀ ರಾಜ್ಯದಲ್ಲಿನ ಜನತೆಯನ್ನು ಜಾತಿ ಆಧಾರದ ಮೇಲೆ ಒಡೆಯುವ ಅಪಾಯಕಾರಿ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದೆ. ಈಗ ಬಿಜೆಪಿ ಸ್ಪಷ್ಟವಾಗಿ ಎರಡು ಜಾತಿಗಳ ಗುಂಪುಗಳಾಗಿ ಒಡೆದಿದೆ. ಬಿಜೆಪಿ ನಿರ್ಮಾಣ ಮಾಡಿರುವ ಈ ವಿಷ ವರ್ತುಲದಿಂದ ರಾಜ್ಯವನ್ನು ರಕ್ಷಿಸಬೇಕಾಗಿರುವ-ನಾವು ಜಾತಿವಾದಿಗಳಲ್ಲ ಜಾತ್ಯಾತೀತರೆಂದು ಹೇಳಿಕೊಳ್ಳುವ ಕಾಂಗ್ರೆಸ್ ಮತ್ತು ಜೆಡಿ(ಎಸ್) ಎಂಬ ಪ್ರಮುಖ ವಿರೋಧ ಪಕ್ಷಗಳು ಜಾತಿ ಸಮಾವೇಶಗಳನ್ನು ನಡೆಸುತ್ತಾ ಜಾತಿ ಉಪಜಾತಿಗಳಿಗೆ ಕುಮ್ಮಕ್ಕು ನೀಡುವುದರೊಂದಿಗೆ ತಾವು ಜಾತಿಯ ವಿಚಾರದಲ್ಲಿ ಬಿಜೆಪಿ ಜೊತೆಗೆ ಸ್ಪರ್ಧೆಗೆ ನಿಂತಿರುವುದು ಒಂದು ದುರಂತವೇ ಆಗಿದೆ. ರಾಜ್ಯದಲ್ಲಿ ಇಷ್ಟೆಲ್ಲಾ ಅನಾಹುತಗಳುಂಟಾಗಿದ್ದರೆ ರಾಜ್ಯದಲ್ಲಿ ಏನೂ ನಡೆದಿಲ್ಲ ಎಂಬಂತೆ ತನ್ನ ಮಾಮೂಲಿ ಗುಂಪುಗಾರಿಕೆಯಲ್ಲಿ ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್ ಪಕ್ಷ ಮುಳುಗಿದೆ. ಇನ್ನೊಂದು ಕಡೆ ಜೆಡಿ(ಎಸ್)

ಪುಟ 12 ಕ್ಕೆ

ದೇಶದ ಪ್ರಧಾನ ಮಂತ್ರಿಗಳು ಈಗ ದೇಶದ ಹಣಕಾಸು ಸಚಿವರೂ ಆಗಿದ್ದಾರೆ. ಬಡತನ, ಹಸಿವು, ಬರ ಮುಂತಾದವುಗಳಿಂದ ಕಂಗೆಟ್ಟ ದೇಶದ ಜನರ ಬದುಕಿಗೆ ಒಂದಷ್ಟು ಆಸರೆ, ನೆಮ್ಮದಿ ನೀಡುವ ಆಹಾರ ಪೂರೈಕೆ ವಿಚಾರ ಈ ಸರ್ಕಾರದ ಆದ್ಯತೆ ಯಾಗಿಲ್ಲ. ಹಣಕಾಸು ಸಚಿವರಾಗಿ ಅವರು ಮೊದ ಮೊದಲಿಗೆ ತೆಗೆದುಕೊಳ್ಳುತ್ತಿರುವ ನಿರ್ಣಯಗಳೇನು ಎಂದು ನೀವೇ ನೋಡಿ.

ಆಹಾರ ಭದ್ರತೆ ಚಳುವಳಿಯ ಮಹತ್ವ

ಪ್ರಕಾಶ್ ಕಾರಟ್

ಕನ್ನಡಕ್ಕೆ: ಸುರೇಂದ್ರ ರಾವ್.ಟಿ.

ಆಹಾರ ಭದ್ರತೆಯ ವಿಷಯ ಕುರಿತು ಎಡ ಪಕ್ಷಗಳು ಜುಲೈ–ಆಗಸ್ಟ್ ನಲ್ಲಿ ದೇಶಾದ್ಯಂತ ಜಂಟಿ ಪ್ರಚಾರ ಮತ್ತು ಚಳುವಳಿಯನ್ನು ಹಮ್ಮಿಕೊಂಡಿವೆ. ಎಲ್ಲಾ ನಾಗರಿಕರಿಗೂ ಆಹಾರ ಭದ್ರತೆಯನ್ನು ಒದಗಿಸಲು ಸಾರ್ವತ್ರಿಕ ಪಡಿತರ ವ್ಯವಸ್ಥೆಯನ್ನು ಜಾರಿಗೊಳಿಸಬೇಕೆಂದು ಈ ಚಳುವಳಿಯ ಮೂಲಕ ಒತ್ತಾಯಿಸಲಾಗುತ್ತದೆ.

ಆಹಾರ ಪದಾರ್ಥಗಳ ಬೆಲೆ ಏರಿಕೆಯಲ್ಲಿ ಯಾವುದೇ ಇಳಿಕೆಯ ಲಕ್ಷಣಗಳಿಲ್ಲದೆ, ಆಹಾರ ಹಣದುಬ್ಬರವು ಶೇಕಡಾ 10 ರ ಆಸುಪಾಸಲ್ಲೇ ಓಲಾಡುತ್ತಿರುವುದರಿಂದ ಎಲ್ಲಾ ಜನರಿಗೂ ಆಹಾರದ ಹಕ್ಕನ್ನು ಖಾತ್ರಿಪಡಿಸಲು ಆಹಾರ ಭದ್ರತೆಯ ಕಾನೂನನ್ನು ತುರ್ತಾಗಿ ತರಬೇಕಾದ ಅವಶ್ಯಕತೆ ಇದೆ. ವಿಶ್ವದಲ್ಲೇ, ಅಪೌಷ್ಟಿಕತೆಯಿಂದ ಮತ್ತು ಪೋಷಕಾಂಶಗಳ ಕೊರತೆಯಿಂದ ನರಳುತ್ತಿರುವ ಅತ್ಯಂತ ಹೆಚ್ಚಿನ ಸಂಖ್ಯೆಯ ಜನರು ಭಾರತದಲ್ಲಿದ್ದಾರೆ.


ಇಂತಹ ಗಂಭೀರ ಪರಿಸ್ಥಿತಿಯಲ್ಲಿ, ಸಂಸತ್ತಿನಲ್ಲಿ ಬಾಕಿ ಉಳಿದಿರುವ ಆಹಾರ ಭದ್ರತೆ ಮಸೂದೆಯನ್ನು ಯುಪಿಎ ಸರ್ಕಾರ ತುರ್ತಾಗಿ ಕೈಗೆತ್ತಿಕೊಳ್ಳಬಹುದೆಂದು ಯಾರಾದರೂ ನಿರೀಕ್ಷಿಸುತ್ತಾರೆ. ಆದರೆ ಸರ್ಕಾರದ ಆದ್ಯತೆಯೇ ಬೇರೆ ಎನ್ನುವ ಸಂಗತಿ ಈಗ ಸಾಬೀತಾಗಿದೆ.

ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿಯಿಂದಾಗಿ ನವ ಉದಾರವಾದಿ ಕ್ರಮಗಳನ್ನು ಜಾರಿಗೊಳಿಸಬೇಕೆಂಬ ಕೂಗಿಗೆ ಹೆಚ್ಚಿನ ಬಲ ಬಂದಿದೆ. ನವ ಉದಾರೀಕರಣ ಸುಧಾರಣೆಗಳನ್ನು ಜಾರಿಗೊಳಿಸುವಲ್ಲಿ ಯುಪಿಎ ಸರ್ಕಾರದ ವಿಫಲತೆಯು ಆರ್ಥಿಕ ಹಿಂಜರಿತಕ್ಕೆ ಕಾರಣ ಎಂದು ಹೇಳಲಾಗುತ್ತಿದೆ. ಯಾವ ಕ್ರಮಗಳಿಂದಾಗಿ ಈ ಬಿಕ್ಕಟ್ಟು ಉಂಟಾಗಿದೆಯೋ ಅದೇ ಕ್ರಮಗಳನ್ನು ಕೈಗೊಳ್ಳಲು ಇದು ಅತ್ಯಂತ ಸರಿಯಾದ ಸಮಯ ಎಂದು ಮನಮೋಹನ್ ಸಿಂಗ್ ಸರ್ಕಾರಕ್ಕೆ ಆರ್ಥಿಕ ಸಲಹೆಗಾರರು ಮತ್ತು ಕಾರ್ಪೊರೇಟ್ ಮಾಧ್ಯಮಗಳು ತಾಕೀತು ಮಾಡುತ್ತಿವೆ. ಡೀಸೆಲ್ ಮೇಲಿನ ಬೆಲೆ ನಿಯಂತ್ರಣ ತೆಗೆದುಹಾಕಿ; ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಅನುವು ಮಾಡಿಕೊಡಿ; ತೆರಿಗೆ ತಪ್ಪಿಸುವವರ ವಿರುದ್ಧದ ನಿಯಮಗಳ ಮೂಲಕ ವಿದೇಶಿ ಹೂಡಿಕೆದಾರರಿಗೆ ಮತ್ತು ಸಟ್ಟಾ ವ್ಯಾಪಾರಿಗಳಿಗೆ ಕಿರುಕುಳ ನೀಡಬೇಡಿ; ಸಾರ್ವಜನಿಕ ಉದ್ದಿಮೆಗಳ ಷೇರುಗಳನ್ನು ಮಾರಾಟಮಾಡಿ; ಮುಂತಾದ ಒಕ್ಕೊರಲಿನ ಒತ್ತಾಯಗಳು ದಟ್ಟವಾಗುತ್ತಿದೆ.

ಈ ಒತ್ತಾಯಗಳಿಗೆ ಯುಪಿಎ ಸರ್ಕಾರ ಮಣಿಯುತ್ತಿದೆ ಎಂಬುದು ಕಳೆದ ಕೆಲವು ದಿನಗಳಿಂದ ಸ್ಪಷ್ಟವಾಗುತ್ತಿದೆ. ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಲು ಪ್ರಣಬ್ ಮುಖರ್ಜಿ ರಾಜೀನಾಮೆ ಕೊಟ್ಟ ನಂತರ ಹಣಕಾಸು ಸಚಿವ ಸ್ಥಾನವನ್ನು ಪ್ರಧಾನ ಮಂತ್ರಿಗಳೇ ವಹಿಸಿಕೊಂಡಿದ್ದಾರೆ. ವಿತ್ತ ಸಚಿವಾಲಯವನ್ನು ವಹಿಸಿಕೊಂಡ ಕೂಡಲೇ ಸಚಿವಾಲಯದ ಅಧಿಕಾರಿಗಳ ಸಭೆ ಕರೆದು "ನಿರಾಶಾದಾಯಕ ವಾತಾವರಣವನ್ನು ಬದಲಿಸಬೇಕು; ದೇಶದ ಆರ್ಥಿಕತೆಯ ಸ್ವಾಭಾವಿಕ ಉತ್ಸಾಹವನ್ನು ಮರಳಿ ತರಬೇಕು; ತೆರಿಗೆ ರಂಗದಲ್ಲಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಬೇಕು." ಎಂದು ಹೇಳಿದ್ದಾರೆ. "ಸ್ವಾಭಾವಿಕ ಉತ್ಸಾಹ"ದ ಅರ್ಥ, ಮನಮೋಹನ್ ಸಿಂಗ್‌ರವರ ನಿಘಂಟಿನ ಪ್ರಕಾರ ಮುಕ್ತ ಮಾರುಕಟ್ಟೆ ಶಕ್ತಿಗಳಿಗೆ ಹೆಚ್ಚು ಒತ್ತು ನೀಡಿ ಎಂಬುದೇ ಆಗಿದೆ.

ವಿತ್ತ ಸಚಿವಾಲಯಕ್ಕೆ ಮನಮೋಹನ್ ಸಿಂಗ್‌ರ ಆಗಮನವಾದ ಮೇಲೆ ಎರಡು ತುರ್ತಿನ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಮೊದಲನೆಯದು, ಕಳೆದ ಬಜೆಟ್ ಸಂದರ್ಭದಲ್ಲಿ, ವಿತ್ತೀಯ ಮಸೂದೆಯಲ್ಲಿ ಅಂಗೀಕರಿಸಿದ ಪೂರ್ವಾನ್ವಯಯುಳ್ಳ ತೆರಿಗೆ ತಿದ್ದುಪಡಿಯನ್ನು ಪುನರ್ವ್ಯಾಖ್ಯಾನ ಮಾಡಬೇಕು ಎನ್ನುವುದು; ಈ ತಿದ್ದುಪಡಿಯು, ವೊಡಾಫೋನ್‌ನ ಮೇಲೆ ವಿಧಿಸಿದ್ದ ರೂ.13,000 ಕೋಟಿ ಬಂಡವಾಳ ವೃದ್ಧಿ ತೆರಿಗೆ(ಕ್ಯಾಪಿಟಲ್ ಗೈನ್ ಟ್ಯಾಕ್ಸ್) ಬೇಡಿಕೆಯನ್ನು ಪುನರ್‌ಸ್ಥಾಪಿಸಲು ಅವಕಾಶ ನೀಡುತ್ತದೆ. ಈ ತಿದ್ದುಪಡಿಯು ವಿದೇಶಿ ಹೂಡಿಕೆದಾರರಲ್ಲಿ ಭೀತಿ ಹುಟ್ಟಿಸಿ ವಿದೇಶಿ ಸಾಂಸ್ಥಿಕ ಹೂಡಿಕೆ(ಎಫ್‌ಐಐ)ಯ ಹರಿವನ್ನು ತಡೆಹಿಡಿದಿದೆ ಎಂಬ ನೆಪ ಒಡ್ಡಲಾಗುತ್ತಿದೆ. ಪ್ರಧಾನ ಮಂತ್ರಿಗಳ ಆರ್ಥಿಕ ಸಲಹೆಗಾರರ ಮಂಡಳಿಯ ಮುಖ್ಯಸ್ಥ ಸಿ.ರಂಗರಾಜನ್ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಮೊಂಟೆಕ್ ಸಿಂಗ್ ಅಹ್ಲುವಾಲಿಯಾ ಈ ಇಬ್ಬರೂ ಸರ್ಕಾರದ ಈ ಕ್ರಮವನ್ನು ಹೀಗಳೆದಿದ್ದಾರೆ. ಸಂಸತ್ತು ಈ ತಿದ್ದುಪಡಿಯನ್ನು ಅಂಗೀಕರಿಸಿದ್ದಾಗ್ಯೂ, ಅಪರೂಪದ ಸಂದರ್ಭಗಳಲ್ಲಿ ಮಾತ್ರ ಇದನ್ನು ಬಳಸಬೇಕೆಂದು ಘೋಷಿಸಿದ್ದಾರೆ.

ಎರಡನೆಯದು, ತೆರಿಗೆಗಳ್ಳತನ ತಡೆಗಟ್ಟುವ ಸಾಮಾನ್ಯ ನಿಯಮಗಳನ್ನು(ಜನರಲ್ ಅಂಟಿ ಅವಾಯ್ಡೆನ್ಸ್ ರೆಗ್ಯುಲೇಷನ್) ಪುನರ್ಪರಿಶೀಲಿಸಬೇಕು ಎನ್ನುವುದು. ತೆರಿಗೆ ಸುರಕ್ಷಾಧಾಮಗಳನ್ನು ಬಳಸಿ ದೇಶಕ್ಕೆ ಹರಿದು ಬರುತ್ತಿರುವ ನಿಧಿಗಳ ಮೇಲಿನ ತೆರಿಗೆ ತಪ್ಪಿಸುವುದನ್ನು ತಡೆಗಟ್ಟಲು ಈ ನಿಯಮಗಳನ್ನು ರೂಪಿಸಲಾಗಿದೆ. ಮಾರಿಷಸ್



ಮಾರ್ಗ ಬಳಸಿ ತೆರಿಗೆಗಳ್ಳತನ ಮಾಡುವುದರ ವಿರುದ್ಧ ಇದನ್ನು ಬಳಸಬಹುದಾಗಿತ್ತು. ಆದರೆ ಇದರ ವಿರುದ್ಧ ಹಣಕಾಸು ವಲಯದ ಪ್ರಬಲ ಪ್ರತಿರೋಧ ಬಂದಿದ್ದರಿಂದಾಗಿ, ಒಂದು ವರ್ಷ ಕಾಲ ಇದರ ಅನುಷ್ಠಾನವನ್ನು ಮುಂದೂಡಲಾಗಿದೆ ಎಂದು ವಿತ್ತ ಸಚಿವರು ಪ್ರಕಟಿಸಬೇಕಾಯಿತು. ಅದನ್ನು ಹೇಗಾದರೂ ಮಾಡಿ ಸಂಪೂರ್ಣವಾಗಿ ನಿಷ್ಕ್ರಿಯಗೊಳಿಸುವ ಪ್ರಯತ್ನ ಈಗ ಸಾಗಿದೆ. ಹಣಕಾಸು ಬಂಡವಾಳ ಮತ್ತು ಸಟ್ಟಾ ವ್ಯಾಪಾರಿಗಳ ಬೇಡಿಕೆ ಪೂರೈಸುವ ಪ್ರಯತ್ನದಲ್ಲಿ ಸದ್ಯ ಪ್ರಧಾನ ಮಂತ್ರಿಗಳು ಮತ್ತು ಅವರ ಆರ್ಥಿಕ ಸಲಹೆಗಾರರು ನಿರತರಾಗಿದ್ದಾರೆ. ಹೂಡಿಕೆದಾರರ ಭಾವನೆ ಮತ್ತು "ಸ್ವಾಭಾವಿಕ ಉತ್ಸಾಹ"ವನ್ನು ಪುನರುಜ್ಜೀವನಗೊಳಿಸುವ ಮೂಲಕ ಅಂತಹ ಹಿತಾಸಕ್ತಿಗಳ ತುಷ್ಟೀಕರಣದಲ್ಲಿ ಸರ್ಕಾರ ಮಗ್ನವಾಗಿದೆ. ಬೊಕ್ಕಸ ಕೊರತೆ ಮತ್ತು ಹೆಚ್ಚುತ್ತಿರುವ ವೆಚ್ಚ ತಡೆಯುವ ಸಲುವಾಗಿ, ಉಳಿದವರಿಗೆ ಅಂದರೆ ಜನಸಾಮಾನ್ಯರ ಮೇಲೆ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕೆನ್ನುವುದೇ ಸರ್ಕಾರದ ಹುನ್ನಾರ. ಇದರ ಭಾಗವಾಗಿಯೇ, ಇಂಧನ ಹಾಗೂ ರಸಗೊಬ್ಬರದ ಮೇಲಿನ ಸಬ್ಸಿಡಿಯನ್ನು ಕಡಿತಗೊಳಿಸಬೇಕೆನ್ನುವ ಮಾತನ್ನು ಸರ್ಕಾರ ಆಡುತ್ತಿದೆ.

ಆರ್ಥಿಕ ಪುನಶ್ಚೇತನದ ಇಂತಹ ಧೋರಣೆಯಿಂದಾಗಿ, ಆಹಾರ ಭದ್ರತೆ ಕಾಯಿದೆಯಂತಹ ಕ್ರಮಗಳನ್ನು ನಿರರ್ಥಕ ಹಾಗೂ ದುಂದುವೆಚ್ಚ ಎಂದು ಕಾಣಲಾಗುತ್ತಿದೆ. ಸಂಸತ್ತಿನ ಮಳೆಗಾಲದ ಅಧಿವೇಶನದಲ್ಲಿ ಈ ಆಹಾರ ಭದ್ರತೆ ಶಾಸನವನ್ನು ಅಂಗೀಕರಿಸಲಾಗುವುದು ಎಂದು ನಿರೀಕ್ಷಿಸಲಾಗಿತ್ತು. ಆದರೆ ಅಂತಹ ಯಾವ ಸೂಚನೆಗಳೂ ಕಂಡುಬರುತ್ತಿಲ್ಲ. ಈ ಶಾಸನವನ್ನು ಕೂಲಂಕುಷ ಅಭ್ಯಾಸ ಮಾಡುತ್ತಿರುವ ಸಂಸತ್ತಿನ ಸ್ಥಾಯೀ ಸಮಿತಿ ತನ್ನ ಕೆಲಸವನ್ನು ಇನ್ನೂ ಪೂರೈಸಿಲ್ಲ. ಆದ್ಯತೆ(ಬಿಪಿಎಲ್) ಮತ್ತು ಸಾಮಾನ್ಯ(ಎಪಿಎಲ್) ಎಂದು ಜನರನ್ನು ವಿಭಜಿಸುವ ಕರಡು ಮಸೂದೆಯ ಧೋರಣೆ ಹಾಗೆಯೇ ಮುಂದುವರಿದಿದೆ. ಇದು ಅಪ್ರಜ್ಞಾಪೂರ್ವಕವಾಗಿ ಗ್ರಾಮೀಣ ಪ್ರದೇಶದ ಶೇಕಡಾ 54 ರಷ್ಟು ಮತ್ತು ಪಟ್ಟಣ ಪ್ರದೇಶದ ಶೇಕಡಾ 72 ರಷ್ಟು ಕುಟುಂಬಗಳನ್ನು ಹೊರಗುಳಿಸುತ್ತದೆ. ಎಂಟು ರಾಜ್ಯಗಳಲ್ಲಿನ ಬಿಪಿಎಲ್ ಕಾರ್ಡುದಾರರು ಈಗ ಒಂದು ಅಥವಾ ಎರಡು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಪಡೆಯುತ್ತಿದ್ದರೆ, ಇನ್ನು ಮುಂದೆ ಮೂರು ರೂಪಾಯಿ ಕೊಡಬೇಕಾಗುತ್ತದೆ.

ಹಣಕಾಸು ಬಂಡವಾಳಗಾರರು ಮತ್ತು ವಿದೇಶಿ ಸಟ್ಟಾ ವ್ಯಾಪಾರಿಗಳನ್ನು ಸಂತುಷ್ಟಗೊಳಿಸಲು ಅವರ ಪ್ರವೇಶವನ್ನು ಇನ್ನೂ ಮುಕ್ತಗೊಳಿಸಲು ಹಾಗೂ ಅವರ ಲಾಭದ ಮೇಲೆ ತೆರಿಗೆ ವಿಧಿಸದಿರಲು ಸರ್ಕಾರ ಉತ್ಸುಕವಾಗಿದೆ. ಆದರೆ ಅದೇ ಸಂದರ್ಭದಲ್ಲಿ, ಎಲ್ಲರಿಗೂ ಸಾರ್ವತ್ರಿಕ ಪಡಿತರ ಪದ್ಧತಿಯನ್ನು ಜಾರಿಗೊಳಿಸಲು ಅಗತ್ಯವಿರುವ ಆಹಾರ ಸಬ್ಸಿಡಿಯನ್ನು ಹೆಚ್ಚಿಸಲು ಸಾಧ್ಯವಿಲ್ಲ ಎನ್ನುವುದರ ಮೂಲಕ ಜನಸಾಮಾನ್ಯರನ್ನು ಹಸಿವು ಮತ್ತು ಅಪೌಷ್ಟಿಕತೆಯಿಂದ ನರಳುವಂತೆ ಮಾಡುತ್ತಿದೆ.

ಪುಟ 10 ಕ್ಕೆ

ಗಮನ ಸೆಳೆಯುತ್ತಿರುವ ಗಜೇಂದ್ರಗಡ

ಪುಟ 5 ರಿಂದ

ಸಲ್ಲಿಸಲಾಯಿತು. ಭೈರಾಪೂರ, ಭೈರಾಪೂರ ತಾಂಡಾ, ರಾಜೂರು, ದಿಂಡೂರು, ನಾಗೇಂದ್ರಗಡ, ಶಾಂತಗೀರಿ, ಬೊಮ್ಮಸಾಗರ, ಮಾಟರಂಗಿ, ಮೊದಲಾದ ಗ್ರಾಮಗಳ 200 ಕ್ಕೂ ಹೆಚ್ಚು ಅರ್ಜಿದಾರರು ಸರಕಾರಕ್ಕೆ ತಹಶೀಲ್ದಾರರ ಮೂಲಕ ಅರ್ಜಿಗಳನ್ನು ಸಲ್ಲಿಸಿದರು.

ಮೇ 21 ರಂದು ಬೆಂಗಳೂರಿನಲ್ಲಿ ಭೂಮಿ ಮತ್ತು ಮನೆ ನಿವೇಶನಗಳಿಗಾಗಿ ಏರ್ಪಡಿಸಲಾದ "ಮಹಾ ಧರಣಿ" ಕಾರ್ಯಕ್ರಮದ ಪ್ರಚಾರಾರ್ಥ ಏರ್ಪಡಿಸಿದ್ದ 5 ರಾಜ್ಯಮಟ್ಟದ ಪ್ರಚಾರ ಜಾಥಾಗಳಲ್ಲಿ ಕೊನೆಯ ಜಾಥಾವನ್ನು ಗಜೇಂದ್ರಗಡದಿಂದಲೇ ಆರಂಭಿಸಲಾಗಿತ್ತು. ವ್ಯವಸ್ಥಿತವಾಗಿ ಏರ್ಪಡಿಸಲಾಗಿದ್ದ ಬಹಿರಂಗ ಸಭೇಯಲ್ಲಿ ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿ ವಾಹನ ಜಾಥಾವನ್ನು ಉದ್ಘಾಟಿಸಿದರು. ಜಾಥಾದ ನೇತೃತ್ವವನ್ನು ವಹಿಸಿದ್ದ ರೈತ ಸಂಘದ ಜಿಲ್ಲಾ ಮುಖಂಡರಾದ ಬಿ.ಎಸ್. ಸೊಪ್ಪಿನ್ ಸಭೆಯಲ್ಲಿ ಹಾಜರಿದ್ದು ಮಾತನಾಡಿದರು. 5 ದಿನಗಳ ವರೆಗೆ ನಡೆದ ಈ ಜಾಥಾದಲ್ಲಿ ಗಜೇಂದ್ರಗಡದ ಎಸ್ಎಫ್ಐ ಕಲಾ ತಂಡದ ಪೀರು ರಾಠೋಡ್, ಶಿವು ಚೆವ್ಹಾಣ್, ಶಿವಾನಂದ ಬೋಸಲೆ , ದಾವಲಸಾಬ್, ಮೊದಲಾದವರು ಭಾಗವಹಿಸಿದ್ದರು. ಭೂಮಿ ಹಾಗೂ ಮನೆ ನಿವೇಶನಗಳಿಗಾಗಿ ಅರ್ಜಿಸಲ್ಲಿಸಿದ ಸುಮಾರು 200 ಜನ ಜಾಥಾ ಉದ್ಘಾಟನಾ ಸಭೆಯಲ್ಲಿ ಭಾಗವಹಿಸಿದ್ದರು. ಮೇ 21 ರಂದು ಬೆಂಗಳೂರಿನಲ್ಲಿ ನಡೆದ "ಮಹಾ ಧರಣಿ" ಯಲ್ಲಿ ಇಲ್ಲಿಯ ಸುಮಾರು 100 ಜನ ಭಾಗವಹಿಸಿದ್ದರು. ತಾವು ಸಲ್ಲಿಸಿದ ಅರ್ಜಿಗಳನ್ನು ಕೂಡಲೇ ಇತ್ಯರ್ಥ ಮಾಡಲು ಒತ್ತಾಯಿಸಿ ಜೂನ್ 7 ರಂದು ರೋಣ ತಾಲ್ಲೂಕು ತಹಸೀಲ್ದಾರ ಕಛೇರಿ ಎದುರು ಮತ್ತೊಮ್ಮೆ ಸಾಮೂಹಿಕ ಧರಣಿ ನಡೆಸಲಾಯಿತು. ಇದರ ಪರಿಣಾಮವಾಗಿ ತಾಲ್ಲೂಕು ತಹಶಿಲ್ದಾರರು ಜೂನ್ 13 ರಂದು ಸಭೆ ಕರೆದು ಭೈರಾಪುರ, ರಾಜೂರು, ಶಾಂತಗಿರಿ, ಬೊಮ್ಮಸಾಗರ, ಉಣಚಗೇರಿ, ವದೇಗೋಳ್, ಜಿಗೇರಿ, ಕುಂಟೋಜಿ, ನಾಗೇಂದ್ರಗಡ, ದಿಂಡೂರ ಮೊದಲಾದ ಗ್ರಾಮಗಳ ಬಗರ್ ಹುಕುಂ ಸಾಗುವಳಿದಾರರ ಅರ್ಜಿಗಳನ್ನು ಪರಿಶೀಲಿಸಿ ಸಭೆ ನಡೆಸಿದರು.

ದಲಿತರ ರಕ್ಷಣೆಗಾಗಿ ಮಧ್ಯಪ್ರವೇಶ

ರೋಣ ತಾಲ್ಲೂಕಿನಲ್ಲಿ ದಲಿತರ ಮೇಲೆ ಸವರ್ಣೀಯರ ದೌರ್ಜನ್ಯದ ಪ್ರಕರಣಗಳು ಮೇಲಿಂದ ಮೇಲೆ ಸಂಭವಿಸುತ್ತಿರುತ್ತವೆ. ಕಳೆದ ಮೇ ತಿಂಗಳಲ್ಲಿ ಕರಮುಡಿ ಎಂಬ ಗ್ರಾಮದಲ್ಲಿ ಸವರ್ಣೀಯ ಯುವಕರು ದಲಿತ ಕೇರಿಗೆ ನುಗ್ಗಿ ದಲಿತ ಯುವಕರ ಮೇಲೆ ಹಲ್ಲೆ ಮಾಡಿದ ಪ್ರಕರಣ ನಡೆಯಿತು. ಇದಕ್ಕೂ ಮೊದಲು ದಲಿತರು ಸಾರ್ವಜನಿಕ ಬಾವಿಯಿಂದ ನೀರು ಸೇದಿದ್ದಾರೆ ಎಂದು ಆರೋಪಿಸಿ ದಲಿತರ ಮೇಲೆ ಅಘೋಷಿತ ಬಹಿಷ್ಕಾರ ಹೇರಲಾಗಿತ್ತು. ಇದೇ ಸಮಯದಲ್ಲಿ ದಲಿತರಿಗೆ ಚಹಾದ ಅಂಗಡಿಯಲ್ಲಿ ಚಹ ನೀಡಲು ಹಾಗೂ ಕ್ಷೌರಿಕ ಅಂಗಡಿಯಲ್ಲಿ ಕ್ಷೌರ ಮಾಡಲು ನಿರಾಕರಿಸಲಾಗಿತ್ತು. ಸಾರ್ವಜನಿಕ ಬಾವಿಯಲ್ಲಿ ಚಪ್ಪಲಿ ಹಾಕಿದ್ದಾರೆ ಎಂದು ದಲಿತರ ಮೇಲೆ ಸುಳ್ಳು ಆರೋಪ ಹೊರಿಸಿ ಅವರ ಮೇಲೆ ಹಲ್ಲೆ ಮಾಡಲಾಯಿತು. ಪ್ರಕರಣದ ಸುದ್ದಿ ತಿಳಿದ ಕೂಡಲೇ ಗಜೇಂದ್ರಗಡ ಮತ್ತು ಬೆಳವಣಿಕಿಯ ಸಿಪಿಐ(ಎಂ)



ಕಾರ್ಯಕರ್ತರು ಒಂದು ತಂಡವಾಗಿ ಕರಮುಡಿ ಗ್ರಾಮಕ್ಕೆ ಭೇಟಿಕೊಟ್ಟು ಹಲ್ಲೆಗೊಳಗದವರ ಕುಟುಂಬಗಳ ಸದಸ್ಯರನ್ನು ಕಂಡು ಮಾತನಾಡಿದ್ದಾರೆ. ಅದೇ ಸಮಯಕ್ಕೆ ಅಲ್ಲಿ ಆಗಮಿಸಿದ ಶಾಸಕರು, ತಹಶೀಲ್ದಾರರು ಮತ್ತು ಪೋಲಿಸ್ ಅಧಿಕಾರಿಗಳ ಸಮಕ್ಷಮ ಶಾಂತಿ ಸಭೆಯನ್ನು ಏರ್ಪಡಿಸಲಾಯಿತು. ಸಭೆಯಲ್ಲಿ ಸಿಪಿಐ(ಎಂ) ಪರವಾಗಿ ಮಾತನಾಡಿದ ಎಂ.ಎಸ್. ಹಡಪದ, ಬಸವರಾಜ ಮಂತೂರ, ಮಹೇಶ ಹಿರೇಮಠ, ಪೀರು ರಾಠೋಡ್ ಘಟನೆಗೆ ಸಂಬಂಧಿಸಿದಂತೆ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸುವಂತೆ ಒತ್ತಾಯಿಸಿದರಲ್ಲದೆ ಗ್ರಾಮದ ದಲಿತರಿಗೆ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೆಲಸ, ವಸತಿರಹಿತ ದಲಿತರಿಗೆ ಮನೆ ನಿವೇಶನ ವಿತರಣೆ, ಪಡಿತರ ಚೀಟಿ ನೀಡುವುದು ಇತ್ಯಾದಿ ಕ್ರಮಗಳಿಗೆ ಒತ್ತಾಯಿಸಿದರು. ಸಾರ್ವಜನಿಕ ಬಾವಿಯಿಂದ ನೀರನ್ನು ಸೇದಲು ಹಾಗೂ ಗ್ರಾಮದ ದೇವಸ್ಥಾನಗಳಲ್ಲಿ ದಲಿತರಿಗೆ ಪ್ರವೇಶ ನೀಡಬೇಕೆಂದು ಒತ್ತಾಯಿಸಿದರು. ಬಳಿಕ ಗ್ರಾಮಸ್ಥರ ಸಮ್ಮುಖದಲ್ಲಿ ದಲಿತರು ಬಾವಿ ನೀರನ್ನು ಸೇದಿ, ಗ್ರಾಮದ ಮಾರುತಿ ದೇವಸ್ಥಾನ ಪ್ರವೇಶಿಸಿದರು. ಸಿಪಿಐ(ಎಂ) ತಂಡದಲ್ಲಿ ಬಾಲು ರಾಠೋಡ್, ಮಾರುತಿ ಚಿಟಗಿ, ಮೈಲಾರಪ್ಪ ಮಾದರ್, ಕೃಷ್ಣಪ್ಪ ಮಾಡೊಳ್ಳಿ ಮೊದಲಾದವರು ಭಾಗವಹಿಸಿದ್ದರು. ಈ ಹಿಂದೆ ಇದೇ ರೀತಿ ಜಗಳೂರು, ವೀರಾಪುರ ಮತ್ತು ಹಾಲಕೇರಿ ಗ್ರಾಮಗಳಲ್ಲಿ ದಲಿತರ ಮೇಲೆ ದೌರ್ಜನ್ಯ ಪ್ರಕರಣಗಳು ನಡೆದಾಗಲೂ ಗಜೇಂದ್ರಗಡ-ಬೆಳವಣಿಕಿ ಸಿಪಿಐ(ಎಂ) ತಂಡ ಸ್ಥಳಕ್ಕೆ ಭೇಟಿಕೊಟ್ಟು ದಲಿತರಿಗೆ ರಕ್ಷಣೆ ನೀಡುವಂತೆ ಮಧ್ಯಪ್ರವೇಶ ಮಾಡಲಾಗಿತ್ತು.

ಪೆಟ್ರೋಲ್ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ.

ಸಾಮಾಜಿಕ ಸಂಘಟನೆಗಳ ಚಳುವಳಿ ಚಟುವಟಿಕೆಗಳ ನಡುವೆಯೇ ಸ್ಪಷ್ಟ ಪರ್ಯಾಯ ಧೋರಣೆಗಳುಳ್ಳ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವನ್ನು ಗಜೇಂದ್ರಗಡ ಜನತೆಗೆ ಪರಿಚಯಿಸಲು ಸಾಧ್ಯವಾಗಿರುವುದು ಇನ್ನೊಂದು ಮಹತ್ವದ ಮುನ್ನಡೆಯಾಗಿದೆ. ಸಿಪಿಐ(ಎಂ) ನೀಡುವ ಕರೆಗಳನ್ನು ಜಾರಿಗೊಳಿಸಲು ಪಕ್ಷದ ಶಾಖೆಗಳು ಪ್ರಯತ್ನ ಪಡುತ್ತಿವೆ. . ಇತ್ತೀಚಿಗೆ ಕೇಂದ್ರ ಸರ್ಕಾರ ಪೆಟ್ರೋಲ್ ದರ ಏರಿಕೆಗೆ ಅವಕಾಶ ಮಾಡಿಕೊಟ್ಟಾಗ ಅದನ್ನು ಪ್ರತಿಭಟಿಸಲು ಪಕ್ಷ ನೀಡಿದ ಕರೆಯನ್ನು ಗಜೇಂದ್ರಗಡದಲ್ಲಿ ಬೆಲೆ ಏರಿಕೆಯ ಭೂತದಹನ ಮಾಡುವ ಮೂಲಕ ಜಾರಿಗೊಳಿಸಲಾಗಿದೆ. ಈ ಹಿಂದೆಯೂ ಇಂಧನ ಬೆಲೆ ಏರಿಕೆ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಸಮಯದಲ್ಲಿ ಗಜೇಂದ್ರಗಡದಲ್ಲಿ ಪ್ರತಿಭಟನೆಗಳನ್ನು ನಡೆಸಲಾಗಿದೆ.

ಮಹಿಳಾ ಶೌಚಾಲಯಕ್ಕಾಗಿ ಯಶಸ್ವಿ ಹೋರಾಟ

ಗಜೇಂದ್ರಗಡ ಪಟ್ಟಣದಲ್ಲಿ ಕಳೆದ ಹಲವು ದಶಕಗಳಿಂದ ಹಿಂದುಳಿದ ಪ್ರದೇಶಗಳಲ್ಲಿ ಮಹಿಳಾ ಶೌಚಾಲಯಗಳಿಲ್ಲದೆ ಮಹಿಳೆಯರು ತೀವ್ರ ಹಿಂಸೆಯನ್ನು ಅನುಭವಿಸುತ್ತಿದ್ದಾರೆ. ಮಹಿಳೆಯರಿಗೆ ಸಮರ್ಪಕ ಸಮುದಾಯ ಶೌಚಾಲಯಗಳನ್ನು ಒದಗಿಸಬೇಕೆಂದು ಆಗ್ರಹಿಸಿ ಡಿವೈಎಫ್ಐ ಕಾರ್ಯಕರ್ತರು ಇತ್ತೀಚೆಗೆ ಪುರಸಭೆ ಕಾರ್ಯಾಲಯಕ್ಕೆ ಮುತ್ತಿಗೆ ಹಾಕಿ ಅಹೋರಾತ್ರಿ ಪ್ರತಿಭಟನೆ ನಡೆಸಿದರು. ಪ್ರತಿಷ್ಠಿತ ಬಡಾವಣೆಗಳಲ್ಲಿ ಸಕಲ ಸೌಕರ್ಯಗಳನ್ನು ಒದಗಿಸುವ ಪುರಸಭೆ ಹಿಂದುಳಿದ ಪ್ರದೇಶಗಳಿಗೆ ತಾರತಮ್ಯ ನೀತಿ ಅನುಸರಿಸುತ್ತಿದೆ. ಈ ಕುರಿತು ಸಾಕಷ್ಟು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ ಎಂಬುದು ಡಿವೈಎಫ್ಐ ಟೀಕೆಯಾಗಿತ್ತು. ಪುರಸಭೆಗೆ ಹಾಕಲಾದ ಮುತ್ತಿಗೆ ತಡರಾತ್ರಿವರೆಗೂ ಮುಂದುವರೆದಿರುವುದನ್ನು ಕಂಡು ಗಾಬರಿಗೊಂಡ ಪುರಸಭೆಯ ಮುಖ್ಯಾಧಿಕಾರಿ 11 ಲಕ್ಷ ರೂ ಅನುದಾನದಲ್ಲಿ ಖರೀದಿಸಲಾದ ನೂತನ ಮೊಬೈಲ್ ಶೌಚಾಲಯವನ್ನು ಪಟ್ಟಣದ ಲಂಬಾಣಿ ತಾಂಡಾ ಮತ್ತು ನವನಗರದಲ್ಲಿ ಸ್ಥಾಪಿಸುವ ಭರವಸೆಯನ್ನು ನೀಡಿದರು. ಸಕ್ರಪ್ಪ ಮಾಳೋತ್ತರ, ನೀಲಾ ಶಿನ್ನೂರ, ಅಂಬಿಕಾ ಗುಗಲೋತ್ತರ, ಸಾವಿತ್ರಿ ಶಿನ್ನೂರ್, ಬಾಲು ರಾಠೋಡ್ ಮೊದಲಾದವರು ಚಳುವಳಿಯ ನೇತೃತ್ವವಹಿಸಿದ್ದರು.

ಮಾಸಾಶನ ಪುನರಾರಂಭಕ್ಕೆ ಆಗ್ರಹಿಸಿ ಧರಣಿ

ಅವೈಜ್ಞಾನಿಕವಾದ ಸರ್ವೆ ಮೂಲಕ ವೃದ್ಧಾಪ್ಯ, ಅಂಗವಿಕಲ, ಸಂಧ್ಯಾ ಸುರಕ್ಷಾ ಹಾಗೂ ವಿಧವಾ ಮಾಸಾಶನ ಕಡಿತಗೊಳಿಸಿದ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಇತ್ತೀಚೆಗೆ ಸ್ಥಳೀಯ ಡಿವೈಎಫ್ಐ ಬೃಹತ್ ಸಾಮೂಹಿಕ ಧರಣಿಯನ್ನು ಏರ್ಪಡಿಸಿತ್ತು. ಒಂದು ಜಿಲ್ಲೆಗೆ ಇಂತಿಷ್ಟೇ ಫಲಾನುಭವಿಗಳನ್ನು ನಿಗದಿಪಡಿಸುವ ತಪ್ಪು ಕ್ರಮವನ್ನು ಕೈಬಿಟ್ಟು ಎಲ್ಲಾ ಅರ್ಹ ಫಲಾನುಭವಿಗಳಿಗೆ ಮಾಸಾಶನವನ್ನು ಪುನರಾಂಭ ಮಾಡಬೇಕೆಂದು ಧರಣಿಯಲ್ಲಿ ಪಾಲ್ಗೊಂಡಿದ್ದ ಫಲಾನುಭವಿಗಳ ಬೇಡಿಕೆಯಾಗಿತ್ತು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಈ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿತ್ತು. ಗಜೇಂದ್ರಗಡ ಹಾಗೂ ಸುತ್ತಲಿನ ಗ್ರಾಮಗಳ ಐದಾರು ನೂರು ಜನ ಮಾಶಾಸನ ವಂಚಿತ ಬಡವರು ಈ ಹೋರಾಟದಲ್ಲಿ ಭಾಗವಹಿಸಿದ್ದರು. ಡಿವೈಎಫ್ಐ ಮುಖಂಡ ಬಿ.ಎಸ್.ಶೀಲವಂತರ, ಸಿಪಿಐ(ಎಂ) ಜಿಲ್ಲಾ ಮುಖಂಡ ಎಂ.ಎಸ್.ಹಡಪದ ಧರಣಿ ನಿರತರನ್ನು ಉದ್ದೇಶಿಸಿ ಮಾತನಾಡಿದರು. ಮಾಸಾಶನ ಪುನರಾರಂಭಕ್ಕೆ ಆಗ್ರಹಿಸಿ ಸಲ್ಲಿಸಲಾದ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಫಲಾನುಭವಿಗಳಿಗೆ ಮಾಶಾಸನವನ್ನು ಪುನರಾರಂಭಿಸಲಾಗುವುದೆಂದು ತಾಲ್ಲೂಕ ತಹಶೀಲ್ದಾರರಿಂದ ಭರವಸೆಯೂ ದೊರಕಿದೆ. ಒಟ್ಟಿನಲ್ಲಿ ಗಜೇಂದ್ರಗಡದ ಜನರಲ್ಲಿ ನಿರೀಕ್ಷೆಗಳು ಹೆಚ್ಚಾಗತೊಡಗಿವೆ.

ಆಹಾರ ಭದ್ರತೆ.....


ಪುಟ 9 ರಿಂದ

ಈ ಹಿನ್ನೆಲೆಯಲ್ಲಿ ಆಹಾರ ಭದ್ರತೆಗಾಗಿನ ಎಡಪಕ್ಷಗಳ ಚಳುವಳಿ ಮಹತ್ವವನ್ನು ಪಡೆಯುತ್ತದೆ. ಮುಂಬರುವ ವಾರಗಳಲ್ಲಿ ಲಕ್ಷಾಂತರ ಜನರನ್ನು ಅಣಿನೆರೆಸಿ ಈ ಕೆಳಗಿನ ನಾಲ್ಕು ಬೇಡಿಕೆಗಳಿಗಾಗಿ ಚಳುವಳಿ ನಡೆಸಲಾಗುತ್ತದೆ:

- ಎಪಿಎಲ್ ಅಥವಾ ಬಿಪಿಎಲ್ ಬೇಡ, ಸಾರ್ವತ್ರಿಕ ಪಡಿತರ ಪದ್ಧತಿ ಬೇಕು;
- **ಪ್ರತಿಯೊಂದು ಕುಟುಂಬಕ್ಕೂ ಕೆ.ಜಿ.ಗೆ ಎರಡು ರೂಪಾಯಿಯಂತೆ ಪ್ರತಿತಿಂಗಳೂ 35 ಕೆ.ಜಿ. ಆಹಾರಧಾನ್ಯಗಳನ್ನು ನೀಡಬೇಕು;**
- **ಕಲ್ಯಾಣ ಹಕ್ಕುಗಳ ಆಧಾರಕ್ಕೆ ಯೋಜನಾ** ಆಯೋಗ ಮಂಡಿಸಿರುವ ಬಡತನದ ಸುಳ್ಳು ಅಂದಾಜನ್ನು ರದ್ದು ಮಾಡಿ;
- ರೈತರಿಗೆ ಲಾಭದಾಯಕ ಬೆಲೆ ಬಗ್ಗೆ ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿ ಮಾಡಿ.

ಸಂಸತ್ತಿನ ಮಳೆಗಾಲದ ಅಧಿವೇಶನದ ಸಮಯದಲ್ಲಿ ಜುಲೈ 30, 2012 ರಿಂದ ಆಗಸ್ಟ್ 5 2012 ರವರೆಗೆ ನವದೆಹಲಿಯಲ್ಲಿ ಐದು ದಿನಗಳ ಧರಣಾದೊಂದಿಗೆ ಈ ಚಳುವಳಿ ಮುಕ್ತಾಯಗೊಳ್ಳುತ್ತದೆ. ಜನರ ಕಲ್ಯಾಣದ ಬಗ್ಗೆ ಕಾಳಜಿಯಿರುವ ಪ್ರತಿಯೊಬ್ಬರೂ ಹಾಗೂ ಆಹಾರದ ಹಕ್ಕು ಎಲ್ಲಾ ನಾಗರಿಕರ ಮೂಲಭೂತ ಹಕ್ಕು ಎಂದು ಪರಿಗಣಿಸುವವರೆಲ್ಲರೂ ಈ ಚಳುವಳಿಗೆ ಬೆಂಬಲ ನೀಡಬೇಕು.

ಈ ಧಗಾಕೋರರು, ಲೂಟಿಕೋರರು ಇನ್ನೂ ಬಿಜೆಪಿ ಮುಖಂಡರೇ ತಾನೇ




ಬಿಜೆಪಿ ದರ್ಬಾರ್

ಆರ್.ರಾಮಕೃಷ್ಣ

ಇದೀಗ ಶ್ರೀಕೃಷ್ಣ ಜನ್ಮ ಸ್ಥಾನದಲ್ಲಿ ಕುಳಿತು ಅನುದಿನವೂ ಅನುಗಾಲವೂ ಕಂಬಿ ಎಣಿಸುತ್ತಿರುವ ರಾಜ್ಯ ಬಿಜೆಪಿ ಸರ್ಕಾರದ ಶಿಲ್ಪಿ, ರೂವಾರಿ–ಆಪರೇಷನ್ ಕಮಲದ ಬಲವೆಂಬ 'ಖ್ಯಾತಿ'ಯ ಜನಾರ್ಧನ ರೆಡ್ಡಿಗೆ ಜಾಮೀನು ಮಂಜೂರು ಮಾಡಲು ಕೋಟಿ ಕೋಟಿ ರೂಪಾಯಿಗಳ 'ಪ್ರಸಾದ'ವನ್ನು ಸ್ವೀಕರಿಸಿ ಇದೀಗ ತಾವೂ ಕೃಷ್ಣ ಜನ್ಮ ಸ್ಥಾನ ಸೇರಿ ಕಂಬಿ ಗುಣಿಸುತ್ತಿರುವ ಸಿಬಿಐ ನ್ಯಾಯಾಧೀಶ ಪಟ್ಟಾಭಿರಾಮ್ ರಾವ್ ಕತೆ ಈಗಾಗಲೇ ಜಗದ್ವಿಖ್ಯಾತ.

ಈ ಪ್ರಕರಣ ಒಟ್ಟು 60 ಕೋಟಿ ರೂಪಾಯಿಗಳ 'ಡೀಲ್' ಎಂಬುದು ಈಗಾಗಲೇ ವರದಿಯಾಗಿರುವ ವಿಷಯ. ಇದರಲ್ಲಿ ಇತ್ತೀಚಿನ ವಿಷಯ ಏನೆಂದರೆ ಕೆಎಂಎಫ್ ಅಧ್ಯಕ್ಷ ಸೋಮಶೇಖರ ರೆಡ್ಡಿ, ಕಂಪ್ಲಿ ಶಾಸಕ ಸುರೇಶ್ ಬಾಬು ಅವರುಗಳೇ ಖುದ್ದು ಈ ಜಾಮಿನಿಗೆ ಅಗತ್ಯವಾದ 'ಪ್ರಸಾದ'ವನ್ನು ತಮ್ಮ ವಾಹನಗಳ ಮುಖಾಂತರ ಪೂರೈಸಿದ್ದಂತೆ.

9.5 ಕೋಟಿ ರೂಪಾಯಿಗಳ 'ಪ್ರಸಾದ'ವನ್ನು ಸಾಗಣೆ ಮಾಡಿ 3 ಹಂಚಿ ಕೋಟಿ ರೂಪಾಯಿಗಳನ್ನು ಉಳಿದದ್ದರಲ್ಲಿ ತನಗೆ ಬೇಕಾದ್ದು ಖರೀದಿ ಮಾಡಿ, ಮತ್ತೂ ಉಳಿದಿದ್ದನ್ನು ಬೇಕಾದ ಕಡೆ– ಅಂದರೆ



ಹೈದರಾಬಾದ್‌ನ ಮನೆಯ ನೀರಿನ ಟ್ಯಾಂಕರ್ ಕೆಳಗೆ 'ಸಂರಕ್ಷಿಸಿ' ಸುರಕ್ಷಿತವಾಗಿ ಇಟ್ಟಿದ್ದ ರೌಡಿ ಶೀಟರ್ ಯಾದಗೀರ್ ಮತ್ತು ನಿವೃತ್ತ 'ನ್ಯಾಯಮೂರ್ತಿ ಚಲಪತಿ ರಾವ್ ಅವರೇ ಈ ಎಲ್ಲ ಮಾಹಿತಿಯನ್ನೂ ನೀಡುತ್ತಿದ್ದಾರೆ. (ಇದರಿಂದ ರಾಜ್ಯದ ಜನರಿಗಂತೂ ಇವನ್ನು ನಂಬದೇ ಬೇರೇನೂ ದಾರಿಯೇ ಇಲ್ಲ. ಇದನ್ನೆಲ್ಲ ನಂಬದೇ ಸುಳ್ಳು ಎಂದು ಸಾರಲು ಅವರೇನು ಬಿಜೆಪಿ ಹೈಕಮಾಂಡುಗಳೇ ? ಅಥವಾ ಆರೆಸ್ಸೆಸ್‌ನ ಕಟೆದ ಶಿಸ್ತಿನ ತುಂಡುಗಳೇ ?) ಅದರ ಆಧಾರದಲ್ಲಿ ಈಗಾಗಲೇ ಸೋಮಶೇಖರ ರೆಡ್ಡಿ, ಸುರೇಶ್ ಬಾಬು ಅವರುಗಳನ್ನು ಬಂಧಿಸಲಾಗಿದೆ ಎಂಬ ದಟ್ಟ ಅನುಮಾನಗಳು ವ್ಯಕ್ತವಾಗಿವೆ. ಅವರು ಜನರ ಕಣ್ಣಿಗೆ ಬೀಳದೆ 'ಮಾಯ'ವಾಗಿದ್ದುದರಿಂದ ಏನೂ ಆಗಿರಬಹುದು. ಇರಲಿ. ಈ ಒಟ್ಟು ಪ್ರಕರಣದಲ್ಲಿ ಗಮನಿಸಬೇಕಾದ ಮುಖ್ಯ ವಿಚಾರ ಬೇರೆನೇ ಇದೆ.

ಕಣ್ಣು ಮುಚ್ಚಿ ಹಾಲು ಕುಡಿದ ಬೆಕ್ಕುಗಳು

ಕರ್ನಾಟಕ ರಾಜ್ಯದ ಅಮೂಲ್ಯ ಖನಿಜ ಸಂಪತ್ತನ್ನು ಅಗಾಧ ಪ್ರಮಾಣದಲ್ಲಿ ರೆಡ್ಡಿ ಗ್ಯಾಂಗ್ ಅತ್ಯಂತ ವ್ಯವಸ್ಥಿತವಾಗಿ ಲೂಟಿ ಹೊಡೆಯುತ್ತಿದ್ದುದು ಇಡೀ ಲೋಕಕ್ಕೆ ಗೊತ್ತಿದ್ದರೂ ಪಾಪ ಜಗತ್ತಿನಲ್ಲಿ ಇನ್ನೆಲ್ಲೂ ಕಾಣಸಿಗದಷ್ಟು ಶೀಲವಂತರ– ದೇಶ ಭಕ್ತರ ಸಂಘಟನೆಯಾದ ಆರೆಸೆಸ್ಸ್‌ಗೂ, ಬಿಜೆಪಿಗೂ ಅದು 'ತಿಳಿಯಲೇ ಇಲ್ಲ'.

ಬಿಜೆಪಿಯ ಪ್ರಧಾನಿ ಸ್ಥಾನದ ಸ್ಪರ್ಧಿ 'ಅಮ್ಮ' ಸುಶ್ಮಾ ಸ್ವರಾಜ್ ಅವರ ಆಶೀರ್ವಾದ ನೀಡುವ ಕೈ ದಶಕಗಳ ಕಾಲ ರೆಡ್ಡಿ ಸಹೋದರರ ತಲೆಯ ಮೇಲೇ ಇತ್ತು. ರೆಡ್ಡಿ ಬಳಗವು ಆರೆಸ್ಸೆಸ್–ಬಿಜೆಪಿ ಬಳಗದ ಕಣ್ಮಣಿಗಳಾಗಿಯೇ ಮುಂದುವರಿದಿದ್ದರು. ಆರೆಸ್ಸೆಸ್‌ನ ಗಣ ವೇಷಧಾರಿಗಳೊಂದಿಗೆ ನೇತಾರರೊಂದಿಗೆ

ಪುಟ 14 ಕ್ಕೆ

ಮೀಸಲು ಅರಣ್ಯ ಭೂಮಿ ಮುಕ್ಕುವ ಅಕ್ರಮ ಖಾಸಗಿ ವಿದ್ಯುತ್ ಯೋಜನೆಗಳು ಮತ್ತು ಅರವಿಂದ ಲಿಂಬಾವಳಿಯವರ ಲೀಲಾವಳಿಗಳು

ಅರವಿಂದ ಲಿಂಬಾವಳಿ ಅಂತ ಅವರ ಹೆಸರು. ಅವರು ಕೆಲವರ್ಷಗಳ ಹಿಂದೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ಮುಖಂಡರಾಗಿದ್ದರು. ಆ ಮೇಲೆ ಅವರು ಬಿಜೆಪಿ ಸರ್ಕಾರದಲ್ಲಿ ಸಚಿವರೂ ಆಗಿದ್ದರು. ನಮ್ಮ ಯಡಿಯೂರಪ್ಪನವರಿಗೂ ಅವರಿಗೂ ಯಾವ ಯಾವ 'ಪ್ರಕರಣ'ಗಳಲ್ಲಿ ತಕರಾರು ಬಂತೋ ? ಏನು ಕತೆಯೋ ? ಲಿಂಬಾವಳಿ ಮಂತ್ರಿ ಪದವಿ ಕಳೆದುಕೊಂಡು ಬಿಜೆಪಿ ಭಿನ್ನಮತೀಯ ನಾಯಕರಾದರು. ಈಗ ಅವರ ವಿಚಾರ ಯಾಕೆ ಅಂತೀರಾ ? ಸ್ವಲ್ಪ ತಿಳಿದುಕೊಳ್ಳಬೇಕಾದ ಅಗತ್ಯ ಬಂದಿದೆ.

ಮಂಡ್ಯ ಜಿಲ್ಲೆಯ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆಯ ಅನುಮತಿ ಇಲ್ಲದೇ, ನಿಯಮಗಳನ್ನು ಮುರಿದು ಕಿರು ವಿದ್ಯುತ್ ಉತ್ಪಾದನೆ ಹೆಸರಿನಲ್ಲಿ ಹಲವಾರು ಖಾಸಗಿ ಕಂಪನಿಗಳು ಅರಣ್ಯ ಭೂಮಿ ವಶಕ್ಕೆ ಪಡೆದು ನಿರ್ಮಾಣ ಕಾಮಗಾರಿ ಇತ್ಯಾದಿ ಚಟುವಟಿಕೆ ನಡೆಸಿ ನೂರಾರು ಎಕರೆ ಅರಣ್ಯ ಭೂಮಿಯನ್ನು ನಾಶ ಮಾಡಿವೆ ಎಂಬ ಅಘಾತಕಾರಿ ವರದಿಗಳು ಬಂದಿದೆ. ಮತ್ತು ಅರಣ್ಯ ಇಲಾಖೆಯು ಈ ಕಾಮಗಾರಿ ಸ್ಥಗಿತಗೊಳಿಸಿ ಯೋಜನೆಯನ್ನು ಎತ್ತಂಗಡಿ ಮಾಡಿ ಎಂದು ಆದೇಶಿಸಿರುವ– ಕೊಂಚ ನೆಮ್ಮದಿ ನೀಡುವ ಸುದ್ದಿಯೂ ಜೊತೆಗೇ ಬಂದಿದೆ.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿ ಧನಗೂರು ರಕ್ಷಿತಾರಣ್ಯದಲ್ಲಿ ಏಟ್ರಿಯಾ ಪವರ್ ಕಾರ್ಪೊರೇಷನ್, ಪಯನೀರ್ ಜೆಂಕೊ ಕಂಪನಿಯ ಘಟಕ ಬೆಳಕವಾಡಿ ಪ್ರದೇಶದಲ್ಲಿ ಸೂಕ್ತ ಅನುಮತಿ ಇಲ್ಲದೇ ತಲೆ ಎತ್ತಿವೆ. ಇದರ ಜೊತೆ ಅರವಿಂದ ಲಿಂಬಾವಳಿಯವರ 'ಲಿಂಬಾವಳಿ ಪವರ್ ಪ್ರಾಜೆಕ್ಟ್'ನ ಕಾಮಗಾರಿ ಕೂಡ ನಡೆದಿದ್ದು ಅರಣ್ಯ ಇಲಾಖೆಯ ಅನುಮತಿ ಇಲ್ಲದೇ ಕಟ್ಟಡಗಳೂ, ಪವರ್ ಹೌಸ್,



ರಸ್ತೆ ಇತ್ಯಾದಿ ನಿರ್ಮಾಣ ಮಾಡಲಾಗಿದೆ. ಎಂ.ಎಸ್.ಹೈಡ್ರೋ ಪವರ್‌ನ ಕಿರು ಜಲ ವಿದ್ಯುತ್ ಘಟಕದ ಕಾಮಗಾರಿಗಳು ಇತ್ತೀಚೆಗೆ ಆರಂಭಗೊಂಡು ನಡೆಯುತ್ತಿವೆ ಎಂದು ವರದಿ ಹೇಳುತ್ತಿದೆ.

ಇತ್ತೀಚೆಗೆ 'ವಿಜಯ ಕರ್ನಾಟಕ' ದಿನ ಪತ್ರಿಕೆ ಪ್ರಕಟಿಸಿದ ತನಿಖಾ ವರದಿ ಆಧರಿಸಿ ಅರಣ್ಯ ಇಲಾಖೆ ಉನ್ನಾಧಿಕಾರಿ– ಮೈಸೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ (ಸಿಸಿಎಫ್) ಈ ಎಲ್ಲ ಪ್ರಾಜೆಕ್ಟುಗಳು ಅಕ್ರಮವಾಗಿದ್ದು ಅದನ್ನು ಎತ್ತಂಗಡಿ ಮಾಡಿ ಅಂತ ಮಂಡ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿ(ಎಸಿಎಫ್)ಗೆ ಆದೇಶ ನೀಡಿದ್ದಾರೆ.

ಲಿಂಬಾವಳಿ ಪ್ರಾಜೆಕ್ಟ್ ಎಂದರೆ 12 ಮೆಗಾವ್ಯಾಟ್ ಉತ್ಪಾದನೆಗೆಂದು 30 ವರ್ಷಗಳ ಗುತ್ತಿಗೆಗೆ ಭೂಮಿಯನ್ನು ಪಡೆಯಲಾದ ಅಪೂರ್ವ ಯೋಜನೆ. ಅರಣ್ಯ ಭೂಮಿಯನ್ನು ಕಂದಾಯ ಇಲಾಖೆಯೇ ಮಂಜೂರು ಮಾಡಿರುವುದರಿಂದ ಇದು ಅಪೂರ್ವ ಯೋಜನೆಯೇ ಸೈ. ಆ ಮೇಲೆ ಅರಣ್ಯ ಇಲಾಖೆಯ ಸ್ಥಳೀಯ ಅಧಿಕಾರಿಗಳು ಆ ಬಗ್ಗೆ ತಕರಾರು ಎತ್ತದೇ ಮೌನವಾಗಿರುವುದೂ ಇನ್ನೂ ಅಪೂರ್ವವೇ ಸೈ. ಇದರ ಹಿಂದಿನ 'ಚಮತ್ಕಾರ'ಗಳನ್ನು ನಾವಿನ್ನು ಪೂರ್ಣವಾಗಿ ಅರಿಯ ಬೇಕಾಗಿದೆ.

'ಸರ್ವ ಶೀಲವಂತರ ಸ್ವಂತ ಸಂಘಟನೆ'ಯಾದ ಆರೆಸ್ಸೆಸ್ ಗರಡಿಯಲ್ಲಿ ಪಳಗಿದ ಹಾಗೂ'ದೇಶ ಭಕ್ತರ ಸ್ವಂತ ಪಕ್ಷ'ವಾದ ಬಿಜೆಪಿಯ ನೇತಾರರಾದ ಅರವಿಂದ ಲಿಂಬಾವಳಿ ಅವರ ಕಂಪನಿ ಇಷ್ಟು ಕರಾಮತ್ತು ತೋರದಿದ್ದರೆ, "ಕರಾಗ್ರೇ ವಸತೇ ಲಕ್ಷ್ಮಿ, ಕರಮೌಲೇತು ಗೋವಿಂದಃ" ಎಂದು ನಿತ್ಯ ಶ್ಲೋಕ ಪಠಿಸುವ ಸಂಘ ಪರಿವಾರಕ್ಕೇ ಅವಮಾನ ಅಲ್ಲವೇ ?

ಮಾದರಿ ಬರ ನಿರ್ವಹಣೆ

ರಾಜ್ಯದಲ್ಲಿ ತೀವ್ರ ಬರ ಇದೆ. ಅದನ್ನು ಸರ್ಕಾರ ನಿಭಾಯಿಸುತ್ತಿದೆ ಹೇಗೆ ಅಂತ ಒಂದು ಉದಾಹರಣೆ ನೋಡಿ.

ಕೊಪ್ಪಳದಲ್ಲಿ ಸರ್ಕಾರ ಒಂದು ಗೋಶಾಲೆ ಆರಂಭಿಸಿತ್ತು. ಗೋಶಾಲೆ ಆರಂಭವಾಗಿ ಎರಡು ದಿನವಾಯಿತು ಮೇವು ಖಾಲಿ !! ವಾಹ್ ವ್ಯವಸ್ಥೆಯೇ. !!! ದನಕರುಗಳನ್ನು ಅಲ್ಲಿ ಬಿಟ್ಟ ರೈತರು ಕಂಗಾಲಾಗಿ ಹೆದ್ದಾರಿ–ರಸ್ತೆ ತಡೆಯನ್ನೇ ಶುರು ಮಾಡಿದರು. ತಹಸೀಲ್ದಾರರು ಬಂದರು: ಮೇವು ತರಿಸುವ ಭರವಸೆ ನಿಡಿದರು. ಉಹುಂ. ರೈತರು ಜಗ್ಗಲಿಲ್ಲ. ಈಗಲೇ ತರಿಸಿ ಮೇವು ಅಂದರು. ಕೊನೆಗೂ ಮೇವು ತರಿಸುವವರೆಗೆ ಜಾಗ ಬಿಟ್ಟು ಕದಲಲಿಲ್ಲ. ಅಂದರೆ ಅಷ್ಟು ನಂಬಿಕೆ ಬರಿದಿದೆ ರೈತರಿಗೆ ಮತ್ತು ಜನರಿಗೆ ಈ ರಾಜ್ಯ ಬಿಜೆಪಿ ಸರ್ಕಾರದ ಮೇಲೆ. ಅಲ್ಲವೇ ?

ಅಸಮರ್ಥ ಸರ್ಕಾರದ ವಿರುದ್ಧ.....

ಪುಟ 8 ರಿಂದ

ಮುಖಂಡ ಕುಮಾರ ಸ್ವಾಮಿ ಸದಾನಂದಗೌಡರ ಸರ್ಕಾರ ಹಗರಣ ರಹಿತ ಸರ್ಕಾರವಾಗಿದೆ ಎಂದು ಬಿಜೆಪಿ ಸರ್ಕಾರಕ್ಕೆ ಕ್ಲೀನ್ ಚಿಟ್ ಕೊಟ್ಟಿದ್ದಾರೆ. ಇಂತಹ ವಿರೋಧ ಪಕ್ಷಗಳಿಂದ ರಾಜ್ಯದ ಜನತೆ ಏನನ್ನೂ ನಿರೀಕ್ಷೆ ಮಾಡಲು ಸಾಧ್ಯವಿಲ್ಲ.

ಯಾಕಾಗಿ ಭಿನ್ನಮತ ?

ಇಷ್ಟಕ್ಕೂ ಬಿಜೆಪಿಯಲ್ಲಿನ ಭಿನ್ನತೆ ಯಾವ ಕಾರಣಕ್ಕಾಗಿ? ರಾಜ್ಯದ ಜನತೆಯ ಹಿತದೃಷ್ಟಿಯಿಂದಲಾ? ಅಥವಾ ಒಂದು ಜಾತಿಯ ಪ್ರಾಬಲ್ಯವನ್ನು ಮೆರೆಯಲಿಕ್ಕಾ? ಅಥವಾ ಯಡಿಯೂರಪ್ಪ ತನ್ನ ಭ್ರಷ್ಟಾಚಾರದ ಉರುಳಿನಿಂದ ತಪ್ಪಿಸಿಕೊಳ್ಳುವುದಕ್ಕೊಸ್ಕರನಾ? ಖಂಡಿತವಾಗಿ ಜನರ ಹಿತ ದೃಷ್ಟಿಯಿಂದಂತೂ ಅಲ್ಲ. ಹಾಗಾಗಿ ಯಡಿಯೂರಪ್ಪ ಮತ್ತು ಅವರ ಬಣ ಲಿಂಗಾಯತರ ಹಿಡಿತವನ್ನು ಸರ್ಕಾರದ ಮೇಲೂ ಮತ್ತು ರಾಜ್ಯದ ಮೇಲೂ ಹಿಡಿತವನ್ನು ಸಾಧಿಸಬೇಕು ಮತ್ತು ಯಡಿಯೂರಪ್ಪನ ಬಂದಿರುವ ಭ್ರಷ್ಟಾಚಾರದ ಆರೋಪಗಳಿಂದ ರಕ್ಷಿಸಿಕೊಳ್ಳಬೇಕಾದರೆ ಸರ್ಕಾರದ ಮೇಲೆ ತನ್ನ ಹಿಡಿತವನ್ನು ಸಾಧಿಸಬೇಕು. ಇವೇ ಮುಖ್ಯ ಕಾರಣ. ಈ ಜಾತಿ ಸಮೀಕರಣಕ್ಕೆ ಒಂದು ರೀತಿಯಲ್ಲಿ ಸದಾನಂದಗೌಡರೂ ಕಾರಣರಾಗಿದ್ದಾರೆ. ಯಡಿಯೂರಪ್ಪನಿಂದಾಗಿ ತಾನು ಮುಖ್ಯಮಂತ್ರಿಯಾದ ಮೇಲೆ ಹಂತ ಹಂತವಾಗಿ ಯಡಿಯೂರಪ್ಪನಿಂದ ದೂರವಾಗಿ ತಾನೊಬ್ಬ ಒಕ್ಕಲಿಗ ಮುಖ್ಯಮಂತ್ರಿಯೆಂದು ಬಿಂಬಿಸಿಕೊಳ್ಳಲು ಪ್ರಯತ್ನ ಮಾಡುತ್ತಾ ಬಂದರು.

ಇನ್ನು ಒಕ್ಕಲಿಗರ ವಿರುದ್ಧ ನಿಂತು ಸದಾನಂದಗೌಡರನ್ನು ಪದಚ್ಯುತಿಗೊಳಿಸಿದರೆ ಒಕ್ಕಲಿಗರು ಹೋರಾಟ ಮಾಡಬೇಕಾಗುತ್ತದೆ ಎಂದು ಒಕ್ಕಲಿಗ ಸಂಘಟನೆಗಳು ಕೆಲವು ಸಮಾವೇಶಗಳಲ್ಲಿ ಘೋಷಿಸಿದ್ದು ಆಯ್ತು. ಇದರಿಂದಾಗಿ ಬಿಜೆಪಿ ಒಳಗಡೆ ಇಂತಹದೊಂದು ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಅಪಾಯಕಾರಿ ಬೆಳವಣಿಗೆಯಿಂದಾಗಿ ಇಂದು ರಾಜ್ಯದಲ್ಲಿ ಸರ್ಕಾರವೇ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ಮುಖ್ಯಮಂತ್ರಿಗಳ ಕೈಯಲ್ಲಿ 19 ಖಾತೆಗಳಿವೆ. ಹೇಗೆ ಸರ್ಕಾರ ನಡೆಸುವುದು? ಇದರಿಂದಾಗಿ ಆಡಳಿತ ಯಂತ್ರ ಸಂಪೂರ್ಣ ಸ್ಥಗಿತವಾಗಿ ಭ್ರಷ್ಟಾಚಾರದಿಂದ ತುಂಬಿ ತುಳುಕುತ್ತಿದೆ. ಸರ್ಕಾರ ಯಾರ ನಿಯಂತ್ರಣದಲ್ಲಿದೆ ಎಂಬುದೇ ಒಂದು ಕಗ್ಗಂಟಾಗಿದೆ. ಇದಕ್ಕೆ ಒಂದೇ ಒಂದು ಸಣ್ಣ ಉದಾಹರಣೆ ಇದು. ಪರಪ್ಪನ ಅಗ್ರಹಾರದ ಒಬ್ಬ ಜೈಲು ಅಧಿಕಾರಿಯನ್ನು ಸರ್ಕಾರ ಸೇವೆಯಿಂದ ಅಮಾನತ್‌ಗೊಳಿಸಿತ್ತು. ಇದರ ವಿರುದ್ಧ ಅವರು ಹೈಕೋರ್ಟ್‌ಗೆ ರಿಟ್ ಅರ್ಜಿಯನ್ನು ಸಲ್ಲಿಸಿದರು. ಉಚ್ಚನ್ಯಾಯಾಲಯ ಇವರ ಅಮಾನತನ್ನು ರದ್ದುಗೊಳಿಸಲು ಸರ್ಕಾರಕ್ಕೆ ಆದೇಶ ನೀಡಿತ್ತು. ಮತ್ತು ಸರ್ಕಾರಕ್ಕೆ ಇದು ಜಾರಿ ಮಾಡಲು ಒಂದು ವಾರದ ಕಾಲಾವಕಾಶ ನೀಡಿತ್ತು. ಎರಡು ವಾರವಾದರೂ ನ್ಯಾಯಾಂಗದ ಆದೇಶವನ್ನು ಜಾರಿಮಾಡದ ಸರ್ಕಾರದ ಧೋರಣೆಯಿಂದಾಗಿ ನಂತರ ನ್ಯಾಯಾಲಯವೇ ಅಮಾನತ್ ಆದೇಶವನ್ನು ರದ್ದುಗೊಳಿಸಿತು. ಅಂದರೆ ಇದರ ಅರ್ಥ ಕಾರ್ಯಾಂಗದ ಕೆಲಸವನ್ನು ನ್ಯಾಯಾಂಗವೇ ಮಾಡಿತು. ಇದು ಆರೋಗ್ಯಕರ ಬೆಳವಣಿಗೆ ಅಲ್ಲ. ಆದರೆ ಆಡಳಿತ ಯಂತ್ರ ಎಷ್ಟರ ಮಟ್ಟಿಗೆ ಹಳಿತಪ್ಪಿದೆ ಎಂಬುದಕ್ಕೆ ಇದು ಒಂದು ಸಣ್ಣ ಉದಾಹರಣೆ.

ಇದರಿಂದಾಗಿ ಇಡೀ ರಾಜ್ಯವೇ ಬರಗಾಲದ ಅಪಾಯಕ್ಕೆ ಸಿಕ್ಕು ಜನ ತತ್ತರಿಸುತ್ತಿದ್ದರೆ, ಇನ್ನೊಂದು ಕಡೆ ರಾಜ್ಯ ಆರ್ಥಿಕವಾಗಿ ದಿವಾಳಿ ಆಗುತ್ತಿದೆ. ಕೈಗಾರಿಕಾರಂಗ ಮತ್ತು ಕೃಷಿರಂಗಗಳಲ್ಲಿ ಉತ್ಪಾದನೆ ಸಂಪೂರ್ಣವಾಗಿ ಕುಸಿದಿದೆ. ಗ್ರಾಮೀಣ ಪ್ರದೇಶದ ಜನರು ಹಳ್ಳಿಗಳನ್ನು ಬಿಟ್ಟು ಸತತವಾಗಿ ವಲಸೆ ಹೋಗುತ್ತಿದ್ದಾರೆ. ಬೆಳೆಗಳನ್ನು ಬಿತ್ತಲಾರದೆ ಬೆಳೆದ ಪಸಲಿಗೆ ಬೆಲೆಸಿಗದೆ ರೈತರು ಕಂಗಾಲಾಗಿದ್ದಾರೆ. ಇನ್ನೊಂದು ಕಡೆ ಶಿಕ್ಷಣದಲ್ಲಿನ ತನ್ನ ಕೋಮುವಾದಿ ಅಜೆಂಡಾವನ್ನು ಜಾರಿಗೊಳಿಸುತ್ತಾ ಹಳ್ಳಿಗಾಡಿನ ಶಾಲೆಗಳನ್ನು ಮುಚ್ಚುತ್ತಾ ಇಡೀ ಶಿಕ್ಷಣರಂಗದಲ್ಲಿ ಅರಾಜಕತೆಯನ್ನು ನಿರ್ಮಾಣ ಮಾಡುತ್ತಿದ್ದಾರೆ. ವಿಶ್ವವಿದ್ಯಾನಿಲಯಗಳಲ್ಲಿನ ಭ್ರಷ್ಟಾಚಾರಗಳು ಒಂದೊಂದಾಗಿ ಹೊರಬರುತ್ತಿವೆ. ದಲಿತರ ಮೇಲಿನ ದೌರ್ಜನ್ಯಗಳು ಮಹಿಳೆಯರ ಮೇಲಿನ ದೌರ್ಜನ್ಯಗಳು ದಿನೇ ದಿನೇ ಹೆಚ್ಚಾಗತೊಡಗಿವೆ. ಇನ್ನೊಂದು ಕಡೆ ಅಘಾತಕಾರಿಯಾದ ಮರ್ಯಾದಾ ಹತ್ಯೆಗಳು ಹೆಚ್ಚಾಗತೊಡಗಿವೆ. ಪೌಷ್ಠಿಕ ಆಹಾರದ ಕೊರತೆಯಿಂದಾಗಿ ನೂರಾರು ಮಕ್ಕಳು ಸಾವೀಗಿಡಾಗುತ್ತಿದ್ದಾರೆ. ಇಷ್ಟೆಲ್ಲಾ ಗಂಭೀರ ಪರಿಸ್ಥಿತಿಗಳು ರಾಜ್ಯವನ್ನು ಕಾಡುತ್ತಿದ್ದರೆ ಬಿಜೆಪಿ ಸರ್ಕಾರ ತನ್ನ ಗುಂಪುಗಾರಿಕೆಗಳಿಂದ ರಾಜ್ಯವನ್ನು ಅರಾಜಕತೆ ಮತ್ತು ಅಸಹಾಯಕ ಸ್ಥಿತಿಗೆ ತಳ್ಳಿದ್ದಾರೆ. ಇಂತಹ ಸರ್ಕಾರ ಮತ್ತು ಆಡಳಿತದಿಂದ ಕರ್ನಾಟಕ ರಾಜ್ಯವನ್ನು ರಕ್ಷಿಸಿ ಉಳಿಸಬೇಕಾಗಿದೆ. ಹಾಗಾಗಿ ಈ ಸರ್ಕಾರ ತಕ್ಷಣ ರಾಜಿನಾಮೆಯನ್ನು ನೀಡಿ ಜನಾದೇಶವನ್ನು ಪಡೆಯಬೇಕು. ಇಲ್ಲವಾದರೆ ಇಂತಹ ಬಿಕ್ಕಟಿನ ಪರಿಸ್ಥಿತಿಯಲ್ಲಿ ರಾಜ್ಯಪಾಲರು ಮಧ್ಯ ಪ್ರವೇಶ ಮಾಡಿ ಮಂತ್ರಿ ಮಂಡಲದಲ್ಲಿ ವಿಶ್ವಾಸದ ಕೊರತೆಯಿರುವುದರಿಂದ ಒಂದೋ ಮಂತ್ರಿ ಮಂಡಲವನ್ನು ಪುನರ್‌ರಚಿಸಲು ಮುಖ್ಯಮಂತ್ರಿಗೆ ರಾಜ್ಯಪಾಲರು ಸೂಚನೆ ನೀಡಬೇಕು ಅಥವಾ ಶಾಸನ ಸಭೆಯನ್ನು ಕರೆದು ಸರ್ಕಾರ ವಿಶ್ವಾಸಮತವನ್ನು ಪಡೆಯಬೇಕೆಂದು ರಾಜ್ಯಪಾಲರು ಸರ್ಕಾರಕ್ಕೆ ತಿಳಿಸಬೇಕಾಗಿದೆ.

ಈಗ ರಾಜಿನಾಮೆ ಕೊಟ್ಟಿರುವ ಮಂತ್ರಿಗಳು ತಮ್ಮ ರಾಜಿನಾಮೆಗಳನ್ನು ವಾಪಸ್ ಪಡೆದಿದ್ದಾರೆ. ಬಿಜೆಪಿಯ ಕೇಂದ್ರ ನಾಯಕತ್ವ ತೇಪೆ ಹಚ್ಚುವ ಕೆಲಸದಲ್ಲಿ ತೊಡಗಿದೆಯೆಂದು ಕಾಣುತ್ತದೆ. ಬಿಜೆಪಿಯ ಕೇಂದ್ರ ನಾಯಕತ್ವ ಏನೇ ತೇಪೆ ಹಚ್ಚಿದರೂ ಯಡಿಯೂರಪ್ಪನಿಗೆ ಸರ್ಕಾರದ ಮೇಲೆ ಮತ್ತು ಪಕ್ಷದ ಮೇಲೆ ಸಂಪೂರ್ಣ ನಿಯಂತ್ರಣ ಸಿಗದಿದ್ದರೆ ಈ ಸರ್ಕಾರವನ್ನು ನಡೆಸಲು ಅವರು ಬಿಡುವುದಿಲ್ಲವೆಂಬುದು ನಿಶ್ಚಿತ. ಈಗ ಕೇಂದ್ರ ನಾಯಕತ್ವಕ್ಕೆ ಇರುವುದು ಎರಡೇ ದಾರಿ. ಒಂದು ಸರ್ಕಾರವನ್ನು ವಿಸರ್ಜನೆಗೊಳಿಸಿ ಹೊಸದಾಗಿ ಜನಾದೇಶವನ್ನು ಪಡೆಯಲು ಸೂಚನೆ ಕೊಡುವುದು. ಇಲ್ಲವೇ ಯಡಿಯೂರಪ್ಪನಿಗೆ ಶರಣಾಗುವುದು. ಎರಡನೆಯದನ್ನು ಮಾಡಿದರೆ ಇಡೀ ರಾಜ್ಯವೇ ಎಲ್ಲ ರೀತಿಯಲ್ಲಿ ಅರಾಜಕತೆಗೆ ಹೋಗುತ್ತದೆ. ಇಂತಹ ಯಾವುದೇ ತಿರ್ಮಾನವನ್ನು ಮಾಡಲು ಬಿಜೆಪಿ ಕೇಂದ್ರ ನಾಯಕತ್ವಕ್ಕೆ ಶಕ್ತಿ ಇಲ್ಲ. ಹಾಗಾಗಿ ರಾಜ್ಯದ ಜನತೆಯೇ ಸಿಡಿದೆದ್ದು ಈ ಸರ್ಕಾರವನ್ನು ಕಿತ್ತೊಗೆಯಬೇಕು. ಮತ್ತು ಬಿಜೆಪಿ ವಿಷಪೂರಿತ, ಭ್ರಷ್ಠ, ಅಸಮರ್ಥ ಆಡಳಿತದಿಂದ ರಾಜ್ಯವನ್ನು ಮತ್ತು ರಾಜ್ಯದ ಜನತೆಯನ್ನು ರಕ್ಷಿಸಬೇಕಾಗಿದೆ ●


ವಿಠ್ಠಲ ಮಲೆ ಕುಡಿಯ ಮತ್ತು ತಂದೆಗೆ ಜಾಮೀನು: ಸಂಭ್ರಮಾಚರಣೆ

ನಕ್ಸಲರ ಜೊತೆ ಸಂಪರ್ಕವಿದೆಯೆಂಬ ಸುಳ್ಳು ಆರೋಪದಡಿ ರಾಜ್ಯ ಬಿಜೆಪಿ ಸರ್ಕಾರದ ಪೋಲಿಸರಿಂದ ಬಂಧಿತರಾಗಿ ಜೈಲುವಾಸಕ್ಕೆ ದೂಡಲ್ಪಟ್ಟಿದ್ದ ಡಿವೈಎಫ್ಐ ಕಾರ್ಯಕರ್ತ,ಆದಿವಾಸಿ ಹಕ್ಕುಗಳ ಸಮಿತಿಯ ರಾಜ್ಯ ಘಟಕದ ಸದಸ್ಯರು, ಮಂಗಳೂರು ವಿ.ವಿ. ಸ್ನಾತಕೋತ್ತರ ವಿದ್ಯಾರ್ಥಿ ವಿಠ್ಠಲ ಮಲೆ ಕುಡಿಯ ಮತ್ತು ತಂದೆ ಲಿಂಗಪ್ಪ ಯಾನೆ ಲಿಂಗಣ್ಣ ನವರಿಗೆ ನ್ಯಾಯಾಲಯದ ಷರತ್ತು ಬದ್ಧ ಜಾಮೀನು ದೊರೆತಿದೆ. ಇದು ವಿಠ್ಠಲ ಮಲೆ ಕುಡಿಯ ಮತ್ತು ತಂದೆಯವರ ಬಿಡುಗಡೆಗಾಗಿ ಪ್ರಜಾಸತ್ತಾತ್ಮಕ ಶಕ್ತಿಗಳು ನಿರಂತರವಾಗಿ ನಡೆಸಿದ ಜನಾಂದೋಲನ ಹಾಗೂ ಕಾನೂನು ಹೋರಾಟಕ್ಕೆ ಸಿಕ್ಕ ಒಂದು ಹಂತದ ಜಯವಾಗಿದೆ.

ಜುಲೈ 5, 2012 ರಂದು ಈ ಇಬ್ಬರ ಬಿಡುಗಡೆಯಾದಾಗ ಮಂಗಳೂರು ಉಪ ಕಾರಾಗ್ರಹದ ಬಳಿ ಭಾರಿ ಸಂಭ್ರಮದಿಂದ ಅವರನ್ನು ಬರ ಮಾಡಿಕೊಂಡು ಸ್ವಾಗತಿಸಲಾಯಿತು. ಈ ಸಂದರ್ಭದಲ್ಲಿ ಬಿಡುಗಡೆಗೊಂಡವರಿಗೆ ಹೂವಿನ ಹಾರವನ್ನು ಹಾಕಿ ಸಿಹಿ ಹಂಚಿ ಸಂಭ್ರಮವನ್ನು ಆಚರಿಸಲಾಗಿತು. ಈ ಸಂದರ್ಭದಲ್ಲಿ ವಿಠಲ ಕುಟುಂಬ ರಕ್ಷಣಾ ಸಮಿತಿಯ ಉಪಾಧ್ಯಕ್ಷ , ಕೊಂಕಣಿ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷೆರಿಕ್ ಒಜಾರಿಸ್, ಡಿವೈಎಫ್ಐ ದಕ್ಷಿಣ ಕನ್ನಡ ಜಿಲ್ಲಾ ಆಧ್ಯಕ್ಷ ಮುನೀರ್ ಕಾಟಿಪಳ್ಳ, ಕಾರ್ಯದರ್ಶಿ ದಯಾನಂದ ಶೆಟ್ಟಿ, ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಸಂತ ಆಚಾರಿ, ಯಾದವ ಶೆಟ್ಟಿ,ಆದಿವಾಸಿ ಹಕ್ಕುಗಳ ಸಮಿತಿಯ ಬೆಳಗ್ತಂಗಡಿ ತಾಲ್ಲೂಕು ಆಧ್ಯಕ್ಷ ಶೇಖರ್ ಮುಂತಾವರಿದ್ದರು. ಕಾರಾಗ್ರಹದಿಂದ ಸಿಪಿಐ(ಎಂ) ಕಾರ್ಯಾಲಯದ ವರೆಗೆ ಬೈಕ್ ರ್‍ಯಾಲಿಯನ್ನು ಸಹ ನಡೆಸಲಾಯಿತು.




3 ಲಕ್ಷ ಮಂದಿಗೆ ತರಬೇತಿ ಕೊಡಲಾಗದಿದ್ದರೂ 50 ಕೋಟಿಯ ಭರವಸೆ !


ವೇದರಾಜ ಎನ್.ಕೆ.

ಯುಪಿಎ ಸರಕಾರ ಒಂದು 'ನೈಪುಣ್ಯ ಅಭಿವೃದ್ಧಿ ಮಂಡಳಿ'ಯನ್ನು ರಚಿಸಿ 2022 ರೊಳಗೆ 50 ಕೋಟಿ ಜನರಿಗೆ, ಅಂದರೆ ಪ್ರತಿ ವರ್ಷ ಕನಿಷ್ಟ 5 ಕೋಟಿ ಜನರಿಗೆ ತರಬೇತಿ ನೀಡುವ ಗುರಿ ನಿಗದಿಮಾಡಿತ್ತು. ಆದರೆ ಜೂನ್ 26ರಂದು ಉದ್ಯೋಗ ಮತ್ತು ತರಬೇತಿ ಮಹಾ ನಿರ್ದೇಶಕರು(ಡಿಜಿಟಿ) ಆಯೋಜಿಸಿದ್ದ 'ಅಪ್ರೆಂಟಿಸಸ್ ಕಾನೂನು, 1961'ಕ್ಕೆ ತಿದ್ದುಪಡಿಗಳನ್ನು ಕುರಿತಂತೆ ಸಮಾಲೋಚನೆಯ ಸಭೆಯಲ್ಲಿ ನೀಡಿದ ಸುತ್ತೋಲೆಯ ಪ್ರಕಾರ ಈಗ ಇರುವ ಅಪ್ರೆಂಟಿಸ್‌ಶಿಪ್ ಸೌಕರ್ಯಗಳಲ್ಲಿ 3.2 ಲಕ್ಷ ಮಂದಿಗೆ ಮಾತ್ರ ತರಬೇತಿ ಸಾಧ್ಯ, ಹಾಗೂ ಸದ್ಯಕ್ಕೆ ನಿಜವಾಗಿ ತರಬೇತಿ ಪಡೆಯುತ್ತಿರುವವರ ಸಂಖ್ಯೆ ಇನ್ನೂ ಕಡಿಮೆ, 2.15 ಲಕ್ಷ ಮಾತ್ರ. ಸ್ಟೈಪಂಡ್ ದರ ಬಹಳ ಕಡಿಮೆಯಿರುವುದು, ತರಬೇತಿಯ ನಂತರ ಉದ್ಯೋಗದ ಭರವಸೆಯಿರದೇ ಇರುವುದು ಮುಂತಾದವು ಇದಕ್ಕೆ ಕಾರಣ ಎಂದೂ ಈ ಸುತ್ತೋಲೆ ತಿಳಿಸುತ್ತದೆ. ತರಬೇತಿಗೆ ತಗೊಳ್ಳುವ ಅಪ್ರೆಂಟಿಸ್‌ಗಳ ಸಂಖ್ಯೆಯನ್ನು ಹೆಚ್ಚಿಸುವ, ತರಬೇತಿಯ ಗುಣಮಟ್ಟವನ್ನು ಹೆಚ್ಚಿಸುವ ಮತ್ತು ಅವರಿಗೆ ಸೂಕ್ತ ಉದ್ಯೋಗವಕಾಶಗಳನ್ನು ಕಲ್ಪಿಸುವ ಕುರಿತ ವಿಚಾರವನ್ನು ಚರ್ಚಿಸಿ, ಆಮೂಲಕ ತಿದ್ದುಪಡಿಗಳನ್ನು ಈ ಸಭೆಯಲ್ಲಿ ರೂಪಿಸಬೇಕಾಗಿತ್ತು.

ಚರ್ಚೆಗಳಲ್ಲಿ, ತರಬೇತಿಗೆ ಹೆಚ್ಚು ಅಪ್ರೆಂಟಿಸ್‌ಗಳನ್ನು ಸೇರಿಸಿಕೊಳ್ಳಬೇಕು ಎಂಬ ಬಗ್ಗೆ ಪ್ರತಿಯೊಬ್ಬರ ಒಪ್ಪಿಗೆಯಿತ್ತು. ಎಂದಿನಂತೆ ಸ್ಟೈಪಂಡಿನಲ್ಲಿ ಹೆಚ್ಚಳವನ್ನು ಯಾರು ತೆರಬೇಕು ಮತ್ತು ತರಬೇತಿ ಪಡೆದವರಿಗೆ ಉದ್ಯೋಗಾವಕಾಶ ನೀಡುವುದು ಹೇಗೆ ಎಂಬುದು ಭಿನ್ನಾಭಿಪ್ರಾಯಗಳಿದ್ದ ಪ್ರಶ್ನೆಗಳಾಗಿದ್ದವು. ಮಾಲಕರು ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಸಿದ್ಧರಿರಲಿಲ್ಲ. ಮಾಲಕರ ಪ್ರತಿನಿಧಿಗಳು ಈ ಇಡೀ ಪ್ರಶ್ನೆ 'ಇನ್ಸ್‌ಪೆಕ್ಟರ್ ರಾಜ್ಯಭಾರದ್ದು', ಕಾನೂನಿನಲ್ಲಿ ಉಲ್ಲಂಘನೆಗಳಿಗೆ ಶಿಕ್ಷೆಯ ಕಲಮುಗಳನ್ನು ಸೇರಿಸುವುದಷ್ಟೇ ಎಂಬಂತೆ ವಾದಿಸುತ್ತಿದ್ದರು. ಹಾಗಲ್ಲ ಎಂದು ಕಾರ್ಮಿಕ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಅವರಿಗೆ ತೋರಿಸಿ ಕೊಟ್ಟರು. ಈ ಕಾನೂನಿನ ಅಡಿಯಲ್ಲಿ ಕಳೆದ 50 ವರ್ಷಗಳಲ್ಲಿ ಮಾಲಕರ ವಿರುದ್ಧ ಬಹಳವೇನೂ ಕ್ರಮಗಳು ಕಂಡುಬಂದಿಲ್ಲ.



ಸ್ಟೈಪಂಡ್‌ಗಳನ್ನು ಹೆಚ್ಚಿಸಲು ತರಲುವ ಖರ್ಚನ್ನು ನಿಭಾಯಿಸಲು ಮಾಲಕರು ಸಿದ್ಧರಿಲ್ಲ. ಅಪ್ರೆಂಟಿಸ್‌ಗಳು ತರಬೇತಿ ಪಡೆದ ಸಂಸ್ಥೆಗಳಲ್ಲಿ ನೇರ ಭರ್ತಿಯಲ್ಲಿ ಅವರಿಗೆ ಮೀಸಲಾತಿಗೆ ಅವರು ಸಿದ್ಧವಿಲ್ಲ. ಅದೇ ವೇಳೆ ಅಪ್ರೆಂಟಿಸ್‌ಗಳನ್ನು ತಗೆದುಕೊಳ್ಳಲು ಪ್ರೋತ್ಸಾಹಗಳಿರಬೇಕು ಎಂಬುದು ಅವರ ಆಗ್ರಹವಾಗಿತ್ತು. ಗಮನಾರ್ಹ ಸಂಗತಿಯೆಂದರೆ(ಆಶ್ಚರ್ಯದ ಸಂಗತಿಯೇನಲ್ಲ) ಯುಪಿಎ-2 ಸರಕಾರ ನೇಮಿಸಿರುವ ಯೋಜನಾ ಆಯೋಗದ (ಬಡತನದ ರೇಖೆಯ 'ಖ್ಯಾತಿ'ಯ) ಉಪಾಧ್ಯಕ್ಷರು ಕೂಡ ಮಾಲಕರ ಬೆಂಬಲಕ್ಕೆ ನಿಂತಿದ್ದಾರೆ ! ತರಬೇತಿ ಪಡೆದ ಅಪ್ರೆಂಟಿಸ್‌ಗಳಿಗೆ ನೇಮಕದಲ್ಲಿ ಮೀಸಲಾತಿ, ಅವರ ಪ್ರಕಾರ, ಮಾಲಕರ ಹಕ್ಕುಗಳನ್ನು ಮೊಟಕುಗೊಳಿಸುತ್ತದಂತೆ! ಅಲ್ಲದೇ ಅಪ್ರೆಂಟಿಸ್‌ಗಳ ಸ್ಟೈಪಂಡ್ ಹೆಚ್ಚಳದ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಯುಪಿಎ-2 ಸರಕಾರ ಸಿದ್ಧವಿಲ್ಲ.

ಅಂದರೆ ಮುಂದಿನ ಹತ್ತು ವರ್ಷಗಳ ಕಾಲ ಪ್ರತಿ ವರ್ಷ 5 ಕೋಟಿ ಜನರಿಗೆ ತರಬೇತಿ ನೀಡುವ ಮಾತು ಕೇವಲ ಬೊಗಳೆಯೇ ?

ವಾಸ್ತವವಾಗಿ ಅಪ್ರೆಂಟಿಸ್‌ಗಳ ಹೆಸರಿನಲ್ಲಿ ದೊಡ್ಡ ಶೋಷಣೆ ನಡೆಯುತ್ತಿದೆ. ಅವರಲ್ಲಿ ಬಹಳಷ್ಟು ಮಂದಿಯನ್ನು ಅಪ್ರೆಂಟಿಸಸ್ ಕಾನೂನಿನ ಅಡಿಯಲ್ಲಿ ತಗೊಂಡಿರುವುದಿಲ್ಲ. ಅವರನ್ನು ಹಲವಾರು ವರ್ಷಗಳ ಕಾಲ ಸರಿಯಾಗಿ ಸಂಬಳ ಅಥವಾ ಇತರ ಸೌಲಭ್ಯಗಳನ್ನು ಕೊಡದೆಯೇ ಉತ್ಪಾದನೆಯಲ್ಲಿ ಪೂರ್ಣವಾಗಿ ತೊಡಗಿಸಿ ಶೋಷಿಸಲಾಗುತ್ತಿದೆ. ಕಾರ್ಮಿಕರ ಸಂಖ್ಯೆ ಮತ್ತು ತರಬೇತಿಗೆ ಲಭ್ಯವಿರುವ ಮೂಲಸೌಕರ್ಯಗಳಿಗೆ ಅನುಗುಣವಾಗಿ ಅಪ್ರೆಂಟಿಸ್‌ಗಳ ಸಂಖ್ಯೆಗೆ ಗರಿಷ್ಠ ಮಿತಿ ಇರಬೇಕು. ಒಂದು ಫ್ಯಾಕ್ಟರಿಯಲ್ಲಿ ಈ ಕಾನೂನಿನ ಅಡಿಯಲ್ಲಿ ಅಪ್ರೆಂಟಿಸ್‌ಗಳು ಎಂದು ದಾಖಲು ಮಾಡಿರದವರನ್ನೆಲ್ಲ ಅಲ್ಲಿಯ ಕಾರ್ಮಿಕರು ಎಂದು ಪರಿಗಣಿಸಬೇಕು ಎಂದು ಸಿಐಟಿಯು ಅಧ್ಯಕ್ಷರಾದ ಕಾಂ.ಎ.ಕೆ.ಪದ್ಮನಾಭನ್ ಈ ಸಮಾಲೋಚನಾ ಸಭೆಯಲ್ಲಿ ಹೇಳಿದರು. ಕಾರ್ಮಿಕ ಸಂಘಗಳು 'ಅಪ್ರೆಂಟಿಸಸ್ ಕಾನೂನು, 1961'ಕ್ಕೆ ತಿದ್ದುಪಡಿಗಳ ಪ್ರಶ್ನೆಯಲ್ಲಿ ಸಂಪೂರ್ಣ ಸಹಕಾರದ ಭರವಸೆ ನೀಡಿವೆ. ಆದರೆ, ಅವು ಎತ್ತಿರುವ ಮೂಲಭೂತ ಪ್ರಶ್ನೆಗಳು, ಅಂದರೆ ತರಬೇತಿಯ ಗುಣಮಟ್ಟ, ಉದ್ಯೋಗ ಸಾಧ್ಯತೆ, ತರಬೇತಿ ಪಡೆದ ಅಪ್ರೆಂಟಿಸ್‌ಗಳಿಗೆ ನೇಮಕಗಳಲ್ಲಿ ಮೀಸಲಾತಿ, ಕನಿಷ್ಟ ಕೂಲಿಗೆಳ ಮಟ್ಟದ ವರೆಗಾದರೂ ಸ್ಟೈಪಂಡ್ ಮೊತ್ತದ ಹೆಚ್ಚಳ ಇವನ್ನೆಲ್ಲ ತಕ್ಷಣ ಜಾರಿಗೆ ಎತ್ತಿಕೊಳ್ಳಲು ಯುಪಿಎ-2 ಸರಕಾರ ಸಿದ್ಧವಿದ್ದಂತಿಲ್ಲ.

ಡೀಸೆಲ್, ಅಡುಗೆ ಅನಿಲ ದರ ಏರಿಸಬೇಕೆಂದು ಅಹ್ಲುವಾಲಿಯಾ

22.50 ರೂ. ಬಡತನರೇಖೆಯ 'ಖ್ಯಾತಿ'ಯ ಯೋಜನಾ ಆಯೋಗದ ಉಪಾಧ್ಯಕ್ಷರಿಂದ ಇದೇ ವಾರ ಇನ್ನೊಂದು ಅಣಿಮುತ್ತು ಉದುರಿದೆ. ಡೀಸೆಲ್ ಮತ್ತು ಅಡುಗೆ ಅನಿಲ ಬೆಲೆಗಳನ್ನು ಏರಿಸಬೇಕು, ಚಿಲ್ಲರೆ ವ್ಯಾಪಾರ ಮತ್ತು ನಾಗರಿಕ ವಿಮಾನಯಾನ ವಲಯಗಳಲ್ಲಿ ವಿದೇಶಿ ನೇರ ಹೂಡಿಕೆಗಳ ನಿಯಮಗಳನ್ನು ಉದಾರಗೊಳಿಸಬೇಕು ಎಂದು ಸಲಹೆ ಮಾಡಿದ್ದಾರೆ. ಯುಪಿಎ-2 ಸರಕಾರದ ಹಣಕಾಸು ಇಲಾಖೆ ಪ್ರಧಾನ ಮಂತ್ರಿಗಳ ಅಡಿಯಲ್ಲಿ 'ಹೂಡಿಕೆದಾರರ ನಡುವಿರುವ ಅನಿಶ್ಚಿತತೆಯನ್ನು' ಬೇಗನೇ ಪರಿಹರಿಸುತ್ತದೆ ಎಂದೂ ಅವರು ಹೇಳಿದ್ದಾರೆ.

ಈ ನಡುವೆ ದೇಶದ 'ಚಾಲ್ತಿ ಖಾತೆ ಕೊರತೆ' ಮಾರ್ಚ್ 2012ರ ಕೊನೆಯಲ್ಲಿ ಎಲ್‌ಪಿಜಿ ನೀತಿಗಳ ಕಳೆದ ಎರಡು ದಶಕಗಳಲ್ಲೇ ಅತೀ ಹೆಚ್ಚು ಮಟ್ಟಕ್ಕೆ ಏರಿದೆ ಎಂಬ ಕಳವಳಕಾರಿ ಸುದ್ದಿ ಬಂದಿದೆ. ಅಂದರೆ ಭಾರತದಿಂದ ಹೊರಗೆ ಹೋಗುವ ಪಾವತಿಗಳು ಮತ್ತು ಒಳಕ್ಕೆ ಬರುವ ಪಾವತಿಗಳ ನಡುವಿನ ಅಂತರ ತಾರಕಕ್ಕೆ ಏರಿದೆ. ದೇಶ ತನ್ನ ಹಾಸಿಗೆ ಮೀರಿ ಕಾಲು ಚಾಚಿದೆ, ಇದನ್ನು ತಪ್ಪಿಸಬೇಕಾದರೆ, ಖರ್ಚುಗಳನ್ನು ಕಡಿಮೆ ಮಾಡಬೇಕು ಎಂಬ ಯುರೋಪಿನ ಜನಸಾಮಾನ್ಯರ ಆಕ್ರೋಶಕ್ಕೆ ಗುರಿಯಾಗಿರುವ ಅದೇ 'ಮಿತವ್ಯಯ'ದ ಮಾತು ಈಗ ಇನ್ನೂ ಜೋರಾಗಿ ಕೇಳಿ ಬರಲಾರಂಭಿಸಿದೆ.

ಈ ನಡುವೆ, ಹಣಕಾಸು ಮಂತ್ರಿಗಳೂ ಆಗಿರುವ ನಮ್ಮ ಪ್ರಧಾನ ಮಂತ್ರಿಗಳು ಯುರೋ ಬಿಕ್ಕಟ್ಟಿನಿಂದ ನಾವು ಹಲವಾರು ಪಾಟಗಳನ್ನು ಕಲಿಯಬೇಕಾಗಿದೆ ಎಂದಿದ್ದಾರೆ. ಅವರು ಇದನ್ನು ಹೇಳಿರುವುದು ದಕ್ಷಿಣ ಏಷ್ಯಾದ ದೇಶಗಳ ನಡುವೆ ಐಕ್ಯ ವೇದಿಕೆಯ ಅಗತ್ಯದ ಬಗ್ಗೆ ಹೇಳುತ್ತಾ. ಆರ್ಥಿಕ ವಿಷಯಗಳಲ್ಲಂತೂ ಅಂತಹ ಪಾಟ ಕಲಿಯುವ ಯೋಚನೆಯೇನೂ ಇದ್ದಂತಿಲ್ಲ ಎಂಬ ಸಂಕೇತ ಅವರ ಬಲಗೈ ಬಂಟರೆನಿಸಿರುವ ಯೋಜನಾ ಆಯೋಗದ ಉಪಾಧ್ಯಕ್ಷರ ಮಾತುಗಳಿಂದ ಸಿಗುತ್ತಿದೆ.

19 ಬುಡಕಟ್ಟು ಜನಗಳ ಹತ್ಯೆ: ಯುಪಿಎ ಮಂತ್ರಿಗಳಲ್ಲೇ ವೈರುಧ್ಯ

ಛತ್ತೀಸ್‌ಗಡ್‌ನ ಬಿಜಾಪುರ ಎಂಬಲ್ಲಿ ಕೇಂದ್ರೀಯ ಮೀಸಲು ಪೋಲಿಸ್ ಮತ್ತು ರಾಜ್ಯ ಪೋಲಿಸ್ ಪಡೆಗಳು ನಕ್ಸಲ್-ವಿರೋಧಿ ಕಾರ್ಯಾಚರಣೆಯ ಹೆಸರಿನಲ್ಲಿ ನಿಶ್ಶಸ್ತ್ರ ಬುಡಕಟ್ಟು ಜನಗಳ ಮೇಲೆ ಎರ್ರಾಬಿರ್ರಿ ಗೋಲಿಬಾರ್ ನಡೆಸಿ

ಮುಡ 14ಕ್ಕೆ

ಖ್ಯಾತ ಕೃಷಿ ವಿಜ್ಞಾನಿಯನ್ನು ಕೈಬಿಟ್ಟ ರಾಷ್ಟ್ರೀಯ ಸಲಹಾ ಮಂಡಳಿ

ಯುಪಿಎ-2 ಸರಕಾರಕ್ಕೆ 'ಆಮ್‌ಆದ್ಮಿ'-ಪರ ರೂಪ ತೊಡಿಸಲು ಯುಪಿಎ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ರಚಿಸಿದ 'ರಾಷ್ಟ್ರೀಯ ಸಲಹಾ ಮಂಡಳಿ'ಯನ್ನು ಪುನರ್ರಚಿಸಲಾಗಿದೆ. ಹೀಗೆ ಪುನರ್ರಚಿಸುವಾಗ ಖ್ಯಾತ ಆರ್ಥಿಕ ತಜ್ಞ ಡಾ. ಎಂ.ಎಸ್. ಸ್ವಾಮಿನಾಥನ್ ಅವರನ್ನು ಕೈಬಿಡಲಾಗಿದೆ. ಜೊತೆಗೆ ಸಾಮಾಜಿಕ ಕಾರ್ಯಕರ್ತರಾದ ಮಾಜಿ ಸರ್ಕಾರಿ ಅಧಿಕಾರಿ ಹರ್ಷ ಮಂದರ್ ಮತ್ತು ಅಧ್ಯಯನಕಾರ ಮಾಧವ ಗಾಡ್ಗೀಳ್ ಅವರನ್ನು ಕೂಡ ಕೈಬಿಡಲಾಗಿದೆ. ಇವರ ಬದಲಿಗೆ ಹಿಂದೆ ಯೋಜನಾ ಆಯೋಗದ ಸದಸ್ಯರಾಗಿದ್ದ ಮಿಹಿರ್ ಶಹಾ ಮತ್ತು ಭೋಪಾಲದ ಒಂದು ಎನ್‌ಜಿಒ ದ ಸಂಸ್ಥಾಪಕ ಆಶಿಷ್ ಮಂಡಲ್ ಅವರನ್ನು ಸೇರಿಸಿಕೊಳ್ಳಲಾಗಿದೆ.

ಡಾ.ಸ್ವಾಮಿನಾಥನ್ ನೇರವಾಗಿ ಸರಕಾರವನ್ನು ವಿಮರ್ಶೆಗೊಳಪಡಿಸದಿದ್ದರೂ, ಅವರು ಆಗಾಗ ನೀಡುತ್ತಿದ್ದ ಸಾರ್ವಜನಿಕ ಹೇಳಿಕೆಗಳು ಕೃಷಿ ಕ್ಷೇತ್ರದಲ್ಲಿ ಯುಪಿಎ-2 ಸರಕಾರದ ಆಮ್-ಆದ್ಮಿ ಪರ ಎನ್ನುವ ಗೋಸುಂಬೆತನಕ್ಕೆ ಕನ್ನಡಿ ಹಿಡಿಯುವಂತಿರುತ್ತಿದ್ದವು. ರಾಷ್ಟ್ರೀಯ ಸಲಹಾಮಂಡಳಿಯ ಇನ್ನೊಬ್ಬ ಸದಸ್ಯರಾಗಿದ್ದ, ಯುಪಿಎ-2 ಸರಕಾರದ ಗೋಸುಂಬೆ ನಿಲುವುಗಳನ್ನು ನೇರವಾಗಿಯೇ ಟೀಕಿಸುತ್ತಿದ್ದ ಪ್ರಖ್ಯಾತ ಅಧ್ಯಯನಕಾರ ಪ್ರೊ. ಜೀನ್ ಡ್ರೀಝ್‌ರವರು ಈ ಮೊದಲೇ ಆಹಾರ ಭದ್ರತಾ ಮಸೂದೆಗೆ ಈ ಮಂಡಳಿ ಕಳಿಸಿದ ಶಿಫಾರಸುಗಳ ಬಗ್ಗೆ ಆಕ್ರೋಶ ವ್ಯಕ್ತಪಡಿಸಿ ರಾಜಿನಾಮೆ ನೀಡಿ ಮಂಡಳಿಯಿಂದ ಹೊರ ನಡೆದಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ●

ಭಯೋತ್ಪಾದನೆಯ ಬಗ್ಗೆ...

ಪುಟ 7 ರಿಂದ

ಸರ್ವಾಧಿಕಾರಿ ಮುಸೋಲಿನಿಯನ್ನು ಭೇಟಿಯಾಗಲು ಇಟಲಿಗೇ ಹೋದರು. ಮಾರ್ಚ್ 19, 1931ರಂದು ಅವರಿಬ್ಬರ ಭೇಟಿ ನಡೆಯಿತು. ಮಾರ್ಚ್ 20ರ ಅವರ ವೈಯಕ್ತಿಕ ದಿನಚರಿ ಇಟಾಲಿಯನ್ ಫ್ಯಾಸಿಸಂ ತನ್ನ ಯುವಜನಕ್ಕೆ(ಗಲಭೆಕೋರರಿಗೆ ಎಂದು ಓದಿಕೊಳ್ಳಿ) ತರಬೇತಿ ಕೊಡುತ್ತಿದ್ದ ರೀತಿಯ ಬಗ್ಗೆ ಆಕರ್ಷಣೆ ಮತ್ತು ಮೆಚ್ಚುಗೆಯನ್ನು ದಾಖಲಿಸಿದೆ. ಭಾರತಕ್ಕೆ ಹಿಂದಿರುಗಿದ ಡಾ.ಮೂಂಜೆ 1935ರಲ್ಲಿ ನಾಶಿಕ್‌ನಲ್ಲಿ ಕೇಂದ್ರೀಯ ಹಿಂದೂ ಮಿಲಿಟರಿ ಶಿಕ್ಷಣ ಸೊಸೈಟಿ ಎಂಬುದನ್ನು ಸ್ಥಾಪಿಸಿದರು. ಇದು 1937ರಲ್ಲಿ ಸ್ಥಾಪಿಸಿದ ಭೊಸ್ಲಾಲ ಮಿಲಿಟರಿ ಸ್ಕೂಲ್‌ನ ಪೂರ್ವವರ್ತಿ ಸಂಸ್ಥೆ(ಈಗ ಅದಕ್ಕೆ ಹಿಂದುತ್ವ ಭಯೋತ್ಪಾದನೆಗೆ ತರಬೇತಿ ನೀಡುವ ಜವಾಬ್ದಾರಿ ವಹಿಸಲಾಗಿದೆ).

ಗೋಲ್ವಾಲ್ಕರ್ 1939ರಲ್ಲಿ, ಹಿಟ್ಲರ್ ನಾಝೀ ಫ್ಯಾಸಿಸಂನ ಅಡಿಯಲ್ಲಿ ಯೆಹೂದಿಗಳನ್ನು ಚೆನ್ನಾಗಿ ತೊಳೆಯುತ್ತಿದ್ದಾನೆ ಎಂದು ಸಂಭ್ರಮ ಪಡುತ್ತಾರೆ, ಅದು 'ಹಿಂದುಸ್ತಾನದಲ್ಲಿರುವ ನಮಗೆ ಕಲಿಯಲು ಒಂದು ಒಳ್ಳೆಯ ಪಾಠ, ಅದರಿಂದ ನಾವು ಲಾಭ ಪಡೆಯಬೇಕು' ಎನ್ನುತ್ತಾರೆ. ಇತ್ತೀಚೆಗೆ, ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದ ಮೇಲೆ ಆರೆಸ್ಸೆಸ್‌ನ ಕಬಂಧ ಬಾಹುಗಳಾದ ವಿಹೆಚ್‌ಪಿ ಮತ್ತು ಭಜರಂಗ ದಳ 'ಕರಸೇವಕ'ರಿಗೆ ನೀಡಿದ ತರಬೇತಿಯ ಬಗ್ಗೆ ಸಾರ್ವಜನಿಕವಾಗಿಯೇ ತಮ್ಮ ಬೆನ್ನು ತಟ್ಟಿಕೊಂಡಿದ್ದರು. ಉತ್ತರ ಪ್ರದೇಶದ ಬಿಜೆಪಿ ಮುಖ್ಯಮಂತ್ರಿ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡುವ ಕ್ರಿಯೆಯನ್ನು ವೇಗವಾಗಿ ಮತ್ತು ಯಾವುದೇ ನುರಿತ ಕಾಂಟ್ರಾಕ್ಟರನಿಗಿಂತಲೂ ಹೆಚ್ಚು ದಕ್ಷತೆಯಿಂದ ಈಡೇರಿಸಿದ ಬಗ್ಗೆ ತನಗೆ ಹೆಮ್ಮೆಯಿದೆ ಎಂದು ಸಾರ್ವಜನಿಕವಾಗಿಯೇ ಹೇಳಿಕೊಂಡರು.

ಸಮಾನ ಅಳತೆಗೋಲಿರಲಿ

'ಅಭಿನವ ಭಾರತ' ದಂತಹ ಬಲಪಂಥೀಯ ಹಿಂದುತ್ವ ಸಂಘಟನೆಗಳು ಬಾಂಬ್ ಸ್ಫೋಟಗಳಲ್ಲಿ ತೊಡಗಿರುವ ಅಂಶ ತನಿಖೆಗಳಲ್ಲಿ ಪ್ರಕಟಗೊಂಡಾಗ, 2008ರಲ್ಲಿ, ಆರೆಸ್ಸೆಸ್ ಮುಖ್ಯಸ್ಥ 'ಹಿಂದೂ ಭಯೋತ್ಪಾದನೆ' ಎಂಬ ಪದದ ಬಗ್ಗೆ ಆಕ್ಷೇಪ ವ್ಯಕ್ತ ಪಡಿಸುತ್ತಾ "ನೀವು ಒಂದಿಡೀ ಸಮುದಾಯವನ್ನು ಭಯೋತ್ಪಾದನೆಯ ಪರಿಕಲ್ಪನೆಯೊಂದಿಗೆ ಹೇಗೆ ತಳುಕು ಹಾಕುತ್ತೀರಾ?" ಎಂದು ಪ್ರಶ್ನಿಸಿದರು. ಮುಂದುವರೆದು, "ಇಂತಹ ಪದಗಳ ಸೃಷ್ಟಿ ಸಂಘಕ್ಕೆ ಅಪಖ್ಯಾತಿ ತರುವ ಸಂಚು. ಇದು ಹಿಂದುತ್ವ ಶಕ್ತಿಗಳನ್ನು ಸೋಲಿಸುವ ಮತ್ತು ಅವಕ್ಕೆ ಅಪಖ್ಯಾತಿ ತರುವ ಒಂದು ರಾಜಕೀಯ ಸಂಚು" ಎಂದರು. ಬಹಳ ಜಾಣತನದಿಂದ 'ಹಿಂದುತ್ವ' ಮತ್ತು 'ಹಿಂದೂ' ಎಂಬುದು ಸಮಾನಾರ್ಥಕ ಪದಗಳು ಎಂಬಂತೆ ಬಳಸಲಾಗುತ್ತಿದೆ. ನಾವು ಹೇಳುತ್ತಿರುವುದು ಹಿಂದುತ್ವ ಭಯೋತ್ಪಾದನೆಯ ಬಗ್ಗೆ, ಹಿಂದೂ ಭಯೋತ್ಪಾದನೆಯ ಬಗೆಗಲ್ಲ. ನಿಜ, ಯಾವುದೇ ಧಾರ್ಮಿಕ ಸಮುದಾಯವನ್ನು ಇಡಿಯಾಗಿ, ಆ ಧರ್ಮಕ್ಕೆ ಸೇರಿದ ವ್ಯಕ್ತಿಗಳ ಭಯೋತ್ಪಾದನೆಗೆ ಹೊಣೆಯಾಗಿಸಲು ಸಾಧ್ಯವಿಲ್ಲ ಎಂಬುದು ಬಹಳ ಸ್ಪಷ್ಟ. ಆದರೆ ಈ ಅಳತೆಗೋಲು ಎಲ್ಲ ಧರ್ಮಗಳಿಗೂ ಸಮಾನವಾಗಿ ಅನ್ವಯವಾಗಬೇಕು ತಾನೇ? ಉಹೂಂ, ಆರೆಸ್ಸೆಸ್ ಪ್ರಕಾರ ಇಲ್ಲ. ಅದು ಸತತವಾಗಿ 'ಇಸ್ಲಾಮಿಕ್ ಭಯೋತ್ಪಾದನೆಯನ್ನು ಉಕ್ಕಿನ ಹಸ್ತದಿಂದ ಹತ್ತಿಕ್ಕಬೇಕು' ಎಂದು ಕರೆ ನೀಡುತ್ತಾ ಕೋಮು ಧ್ರುವೀಕರಣವನ್ನು ಉದ್ದೀಪನಗೊಳಿಸಲು ಪ್ರಯತ್ನಿಸುತ್ತಲೇ ಇದೆ. ಇದು ಕೇವಲ ಇಬ್ಬಂದಿತನದ ಅಭಿವ್ಯಕ್ತಿಯಷ್ಟೇ ಅಲ್ಲ. ಇದು ಭಾರತದ ಆಧುನಿಕ ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಗಣತಂತ್ರವನ್ನು ಉನ್ಮತ್ತ ಧಾರ್ಮಿಕ ಅಸಹಿಷ್ಣುತೆಯ ಮೇಲೆ ನಿಂತಿರುವ 'ಹಿಂದೂರಾಷ್ಟ್ರ'ದ ಆರೆಸ್ಸೆಸ್ ಆವೃತ್ತಿಯಾಗಿ ಪರಿವರ್ತಿಸುವ ಸೈದ್ಧಾಂತಿಕ ಬೇರಿನ ಪ್ರತಿಫಲನ.

ಭಯೋತ್ಪಾದನೆಗೆ ಧರ್ಮವೆಂಬುದಿಲ್ಲ ಎಂದು ನಾವು ಈ ಅಂಕಣದಲ್ಲಿ ಹೇಳುತ್ತಾ ಬಂದಿದ್ದೇವೆ, ಹೇಳುತ್ತಲೇ ಇರುತ್ತೇವೆ. ಭಯೋತ್ಪಾದನೆ ಎಂಬುದು ರಾಷ್ಟ್ರ-ವಿರೋಧಿ ಅಷ್ಟೇ, ಆದ್ದರಿಂದ ಆ ಬಗ್ಗೆ ಎಳ್ಳಷ್ಟೂ ಸಹನೆ ತೋರಬಾರದು; ಅಲ್ಲದೆ, ಎಲ್ಲ ಸ್ವರೂಪಗಳ ಭಯೋತ್ಪಾದನೆ ಪರಸ್ಪರ ಪೋಷಿಸಿ, ಬಲಗೊಳಿಸುವಂತವು. ನಮ್ಮ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನೇ ನಾಶಪಡಿಸುವಂತವು.

ಆಧುನಿಕ ಭಾರತದ ಜಾತ್ಯಾತೀತ ಬುನಾದಿಯನ್ನು ಕಾಯ್ದುಕೊಳ್ಳಬೇಕಾದರೆ ಮತ್ತು ಅದನ್ನು ಬಲಪಡಿಸಬೇಕಾದರೆ ರಾಜಕೀಯ ಗುರಿಗಳ ಈಡೇರಿಕೆಗಾಗಿ ಭಯೋತ್ಪಾದನೆಯನ್ನು ಬಳಸುವ ದುಷ್ಟ ಸೈದ್ಧಾಂತಿಕ ವಿಧಾನಗಳನ್ನು ನಿರ್ಣಾಯಕವಾಗಿ ಸೋಲಿಸಬೇಕಾಗಿದೆ.

ಮಾಲೇಗಾಂವ್ ಸ್ಫೋಟಗಳ ಬಗ್ಗೆ ಸದ್ಯ ನಡೆಯುತ್ತಿರುವ ತನಿಖೆಗಳಲ್ಲಿ ನಾಡಿನ ಕಾನೂನನ್ನು ದೃಢವಾಗಿ ಎತ್ತಿ ಹಿಡಿಯಬೇಕು ಮತ್ತು ಭಯೋತ್ಪಾದಕ ಅಪರಾಧಗಳನ್ನು ಎಸಗುವವರನ್ನು ಶಿಕ್ಷಿಸಬೇಕು. ■

ಯುಪಿಎ ದರ್ಬಾರ್.....

ಪುಟ 13 ರಿಂದ

19 ಮಂದಿಯ ಸಾವು ಸಂಭವಿಸಿರುವ ಘಟನೆಗೆ ದೇಶಾದ್ಯಂತ ಖಂಡನೆ ವ್ಯಕ್ತವಾಗಿದೆ. ಇವರನ್ನು ಗುಂಡಿಟ್ಟು ಕೊಲ್ಲಲಾಗಿದೆ ಅಥವಾ ಅಮಾನುಷವಾಗಿ ಕೊಡಲಿಗಳಿಂದ ಏಟು ನೀಡಿ ಸಾಯಿಸಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಛತ್ತೀಸ್‌ಗಡದ ಬಿಜೆಪಿ ಸರಕಾರ ಮಾತ್ರವೇ ಅಲ್ಲ, ಯುಪಿಎ-2 ಸರಕಾರದ ಗೃಹ ಮಂತ್ರಾಲಯ ಕೂಡ ಈ ಕಾರ್ಯಾಚರಣೆಯನ್ನು ಸಮರ್ಥಿಸಿಕೊಂಡಿದೆ.

ಈ 19 ಮಂದಿಯಲ್ಲಿ ಎರಡು ಶಾಲಾಮಕ್ಕಳು ಮತ್ತು ಒಬ್ಬ ಯುವತಿಯೂ ಸೇರಿದ್ದಾರೆ ಎಂದು ವರದಿಯಾಗಿದೆ. ಮೊದಲು ಇದನ್ನು ನಿರಾಕರಿಸಿ ಛತ್ತೀಸ್‌ಗಡದ ಬಿಜೆಪಿ ಸರಕಾರದ ಬೆಂಬಲಕ್ಕೆ ನಿಂತ ಯುಪಿಎ-2 ಗೃಹಮಂತ್ರಿಗಳು ತಮ್ಮದೇ ಸಹಯೋಗಿಗಳಾದ ಬುಡಕಟ್ಟು ವ್ಯವಹಾರಗಳ ಮಂತ್ರಿಗಳು ಮತ್ತು ಕೃಷಿ ರಾಜ್ಯಮಂತ್ರಿಗಳೂ ಈ ಘಟನೆಯನ್ನು ಖಂಡಿಸಿದ ನಂತರ ಅಮಾಯಕ ಯುವಜನರ ಸಾವು ಸಂಭವಿಸಿದ್ದರೆ 'ಸಾರಿ' ಎಂದಿದ್ದಾರೆ; ಹಾಗೆ ಹೇಳುವಾಗಲೂ ಈ ಕಾರ್ಯಾಚರಣೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಸತ್ತವರು ನಕ್ಸಲ್‌ವಾದಿಗಳಾಗಿದ್ದರೆ, ಅವರೇಕೆ ನಿಶ್ಶಸ್ತ್ರರಾಗಿದ್ದರು, ನಿಶ್ಶಸ್ತ್ರರ ಮೇಲೆ ಗೋಲಿಬಾರು ಮಾಡಬಾರದು ಎಂದು ಇಂತಹ ಕಾರ್ಯಾಚರಣೆಗಳಲ್ಲಿನ ಮುಖ್ಯ ನೀತಿಯಲ್ಲವೆ ಎಂಬ ತಮ್ಮದೇ ಸಂಪುಟದ ಬುಡಕಟ್ಟು ವ್ಯವಹಾರಗಳ ಮಂತ್ರಿಗಳ ಪ್ರಶ್ನೆಗೆ ಉತ್ತರಿಸುವ ಗೋಜಿಗೆ ಯುಪಿಎ-2 ಗೃಹಮಂತ್ರಿಗಳು ಹೋಗಿಲ್ಲ. ಆದರೂ ಕೇಂದ್ರೀಯ ಗೃಹಮಂತ್ರಿಗಳೂ ಸೇರಿದಂತೆ ಗೃಹ ಇಲಾಖೆಗೆ ರಾಜ್ಯ ಸರಕಾರದಿಂದ ತಪ್ಪು ಮಾಹಿತಿ ಹೋಗಿರುವುದರಿಂದ ಹೀಗಾಗಿರಬಹುದು ಎಂದು ಬುಡಕಟ್ಟು ವ್ಯವಹಾರಗಳ ಮಂತ್ರಿಗಳು ಅವರನ್ನು ಸಮರ್ಥಿಸಿಕೊಳ್ಳುವ ಪ್ರಯತ್ನವನ್ನೂ ನಡೆಸಿದ್ದಾರೆ. ಭದ್ರತಾ ಪಡೆಗಳು ಮತ್ತು ಮಾವೋವಾದಿಗಳ ನಡುವಿನ ಘರ್ಷಣೆಯಲ್ಲಿ ಬುಡಕಟ್ಟು ಜನಗಳ ಬದುಕು ನಲುಗಿ ಹೋಗುತ್ತಿದೆಯೆಂದು ಒಪ್ಪಿಕೊಂಡಿರುವ ಅವರು ಅರಣ್ಯ ಹಕ್ಕುಗಳ ಕಾಯಿದೆಯನ್ನು ಪಾಲಿಸದೆ ಇಂತಹ ನಕ್ಸಲ್-ವಿರೋಧಿ ಕಾರ್ಯಾಚರಣೆಗಳು ಸಫಲವಾಗುವುದಿಲ್ಲ ಎಂದೂ ಒಪ್ಪಿಕೊಳ್ಳಬೇಕಾಗಿ ಬಂದಿದೆ; ಈ ಮಂತ್ರಿಗಳು ಪರೋಕ್ಷವಾಗಿ ಆದರೂ ಈ ಕಾನೂನಿನ ಪಾಲನೆಯಾಗುತ್ತಿಲ್ಲ, ವಿಶೇಷವಾಗಿ ಖಾಸಗಿ ಗಣಿಗಾರಿಕೆಗೆ ಅನುಮತಿ ಕೊಡುವ ಮೊದಲು, ಎಂಬುದನ್ನೂ ಒಪ್ಪಿಕೊಂಡಿದ್ದಾರೆ.

ಈ ಘಟನೆಯ ನ್ಯಾಯಾಂಗ ತನಿಖೆಯಾಗದೆ ಸತ್ಯ ಹೊರಬರಲಾರದು, ಈ ನಡುವೆ ಕೊಲ್ಲಲ್ಪಟ್ಟ ಮತ್ತು ಗಾಯಗೊಂಡ ಬುಡಕಟ್ಟು ಜನಗಳ ಕುಟುಂಬಗಳಿಗೆ ತಕ್ಷಣವೇ ನೆರವು ಮತ್ತು ಪರಿಹಾರವನ್ನು ಕೊಡಬೇಕು ಎಂದು ಸಿಪಿಐ(ಎಂ) ಪಾಲಿಟಬ್ಯುರೊ ಆಗ್ರಹಿಸಿದೆ. ☆

ಈ ಧಗಾಕೋರರು, ಲೂಟಿಕೋರರು ಇನ್ನೂ...

ಪುಟ 11 ರಿಂದ

ಸಮಾವೇಶಗಳಲ್ಲಿ ಮೆರೆಯುತ್ತಿದ್ದರು. ರಾಜ್ಯ ಲೋಕಾಯುಕ್ತರ ಮಧ್ಯಂತರ ವರದಿ, ಹಾಗೂ ಅಂತಿಮ ವರದಿಗಳು ಎರಡೂ ರಾಜ್ಯದಲ್ಲಿ ಪ್ರಕೃತಿಯ ಮೇಲಿನ ಘೋರ ಅತ್ಯಾಚಾರವನ್ನು, ಪ್ರಾಕೃತಿಕ ಸಂಪತ್ತಿನ ನಿರ್ದಯ ಲೂಟಿಯನ್ನು ರೆಡ್ಡಿ ಬಳಗವೇ, ಸರ್ಕಾರದ ಸರ್ವ ಕೃಪಾ ಪೋಷಣೆಯೊಂದಿಗೆ ನಡೆಸುತ್ತಿರುವುದಾಗಿ ಸಾರಿದ ಮೇಲೂ ಬಿಜೆಪಿ ನಾಯಕ ಗಡಣ ಈ ನಾಯಕರ ಭಂಡ ಸಮರ್ಥನೆಯನ್ನು ಈ ಲಪಂಗರ ಕೀರ್ತನೆಯನ್ನು ನಿಲ್ಲಿಸಲಿಲ್ಲ. ಆರೆಸ್ಸೆಸ್ ಸಂಘಟನೆಯು ಬಿಜೆಪಿ ಪಕ್ಷದ ತಲೆಯ ಮೇಲೆ ಪ್ರತಿಷ್ಠಾಪಿದ ಬಿಜೆಪಿಯ ಅಖಿಲ ಭಾರತ ಅಧ್ಯಕ್ಷ ಗಡ್ಕರಿಯವರು ಮೊನ್ನೆ ಮೊನ್ನೆ ತಾನೆ ಬಳ್ಳಾರಿಗೆ ಬಂದು ರೆಡ್ಡಿ ಸಹೋದರರು ಕೊಟ್ಟ ಕಪ್ಪ ಕಾಣಿಕೆ ಕೋಟಿ ಕೋಟಿ ರೂಪಾಯಿಗಳ ಬೆಲೆಯ ಕಾರು, ಚಿನ್ನದ ಕತ್ತಿ ಎಲ್ಲವನ್ನು ಎತ್ತಿಕೊಂಡು ರೆಡ್ಡಿ ಸಹೋದರರರನ್ನು ಹಾಡಿ ಹೊಗಳಿ ಹೋದದ್ದು ಜನರ ಮನಸ್ಸಿನಲ್ಲಿ ಇನ್ನೂ ಹಸಿಯಾಗೇ ಇದೆ.

ರೆಡ್ಡಿ ಬಳಗವನ್ನು ಸಿಬಿಐ ಕುತ್ತಿಗೆ ಪಟ್ಟಿ ಹಿಡಿದು ಎತ್ತಿಕೊಂಡು ಹೋಗುವುದು ಖಾತ್ರಿಯಾಗುತ್ತ ಬಂದಂತೆ ಮೆಲ್ಲಗೆ ಅವರನ್ನು ಸಚಿವ ಸಂಪುಟದಿಂದ ಕೈ ಬಿಡಲಾಯಿತು. ಆದರೆ ಇಷ್ಟಾದರೂ ರೆಡ್ಡಿ ಸಹೋದರರರ ಮೇಲೆ ರೆಡ್ಡಿ ಗ್ಯಾಂಗಿನ ಮೇಲೆ ಯಾವ ಶಿಸ್ತು ಕ್ರಮವನ್ನೂ ಬಿಜೆಪಿ ಪಕ್ಷ ಕೈಗೊಳ್ಳಲಿಲ್ಲ. ಯಾರನ್ನೂ ಪಕ್ಷದಿಂದ ಉಚ್ಚಾಟಿಸಲಿಲ್ಲ. ಕನಿಷ್ಟ ಅಮಾನತ್ತು ಕೂಡ ಮಾಡಲಿಲ್ಲ. ವಿಚಾರಣೆಯ ಮಾತಂತೂ ಇಲ್ಲವೇ ಇಲ್ಲ. ಅಂದರೆ ಅವರೆಲ್ಲ ಬಿಜೆಪಿ ಪಕ್ಷದ ಕಣ್ಮಣಿ ಸದಸ್ಯರಾಗೇ, ಮುಖಂಡರಾಗೇ ಅವರೆಲ್ಲಾ ಮುಂದುವರಿದರು.

ಶ್ರೀರಾಮುಲು ಬಿಜೆಪಿ ಪಕ್ಷಕ್ಕೆ ರಾಜಿನಾಮೆ ಕೊಟ್ಟಿದ್ದು, ಶಾಸಕತ್ವ ಬಿಟ್ಟುಕೊಟ್ಟು ಮತ್ತೆ ಗೆದ್ದು ಬಂದಿದ್ದು ಬಿಟ್ಟರೆ ಜನಾರ್ಧನ ರೆಡ್ಡಿಯಾಗಲೀ, ಬೇರೆ ಯಾರೇ ಆಗಲಿ ಬಿಜೆಪಿ ಪಕ್ಷಕ್ಕೆ ರಾಜಿನಾಮೆ ಕೊಟ್ಟ ಬಗ್ಗೆಯಾಗಲೀ, ಅವರನ್ನು ಉಚ್ಚಾಟಿಸಿದ ಬಗ್ಗೆಯಾಗಲೀ ಯಾವ ಪ್ರಕಟಣೆಯನ್ನು ಯಾರೂ ನೋಡಿಲ್ಲ. ಕೇಳಿಲ್ಲ. ಅಂದರೆ ಏನರ್ಥ. ಅವರೆಲ್ಲ ಈಗಲೂ ಬಿಜೆಪಿ ಮುಖಂಡರು, ಶಾಸಕರು ಹೌದು ತಾನೆ.

ಜನಾರ್ಧನ ರೆಡ್ಡಿಯ 'ಜಾಮೀನಿಗಾಗಿ ಲಂಚ' ಹಗರಣವು ರೆಡ್ಡಿ ಗ್ಯಾಂಗಿನ ಯೋಗ್ಯತೆಯನ್ನು ಮಾತ್ರವೇ ತಿಳಿಸಿ ಕೊಡುತ್ತಿಲ್ಲ. ಅದು ಆಪರೇಷನ್ ಕಮಲವೆಂಬ ಅನೈತಿಕ ವ್ಯವಹಾರದಲ್ಲಿ ರೆಡ್ಡಿ ಬಳಗದ ಮೂಲಕ ಬಿಜೆಪಿ ಪಕ್ಷ ನಡೆಸಿದ 'ಅಮೇಧ್ಯ' ಹಂಚಿಕೆ ವ್ಯವಹಾರಗಳು ಯಾವ ಸ್ವರೂಪದಲ್ಲಿ ನಡೆದಿವೆ ಎಂಬುದಕ್ಕೂ ಒಂದು ಸಾಕ್ಷಿಯಾಗಿದೆ. ■

ಜನಶಕ್ತಿ
ಕನ್ನಡ ವಾರಪತ್ರಿಕೆ

'ದೇವ ಕಣ'ದ ಶೋಧನೆಯಲ್ಲಿ...

ಪುಟ 16 ರಿಂದ

ಹೆಸರು. 1924ರಲ್ಲಿ ಸತ್ಯೇಂದ್ರನಾಥ ಬೋಸ್ ಇದನ್ನು ಪ್ರತಿಪಾದಿಸಿ ಅದನ್ನು ಐನ್‌ಸ್ಟೀನ್‌ಗೆ ಕಳುಹಿಸಿಕೊಟ್ಟಿದ್ದರು. ಆದ್ದರಿಂದ ಅವರ ಹೆಸರನ್ನೇ ಈ ಉಪಕಣಕ್ಕೆ ಇಡಲಾಗಿದೆ. ಮಹಾಸ್ಫೋಟ ಜರುಗಿದ ಕ್ಷಣಾರ್ಧದಲ್ಲಿ ವಿಶ್ವದಲ್ಲಿರುವ ದ್ರವ್ಯ ತನ್ನ ದ್ರವ್ಯರಾಶಿಯನ್ನು ಹೇಗೆ ಗಳಿಸಿಕೊಂಡಿತು ಎಂಬ ಸಿದ್ಧಾಂತವನ್ನು ಬ್ರಿಟನ್ ವಿಜ್ಞಾನಿ ಪೀಟರ್ ಹಿಗ್ಸ್ ಮಂಡಿಸಿದ್ದರು. ಅದರಿಂದಲೇ 'ಬೋಸಾನ್ ಹಿಗ್ಸ್' ಸಿದ್ಧಾಂತ ಪ್ರಚುರಗೊಂಡಿತು. ಈ ಸಿದ್ಧಾಂತದ ಪ್ರಕಾರ ಮಹಾಸ್ಫೋಟಗೊಂಡಾಗ ಹಿಗ್ಸ್ ಎಂದು ಕರೆಯಲಾಗುವ ಅಗೋಚರವಾದ, ಇಡೀ ಜಗತ್ತನ್ನು ವ್ಯಾಪಿಸಿರುವ ಕ್ಷೇತ್ರವಿತ್ತು. ಮಹಾಸ್ಫೋಟ ಜರುಗಿದಾಗ ಕೆಲವು ಕಣಗಳು – ಬೆಳಕಿನಲ್ಲಿರುವ ಫೋಟಾನ್‌ಗಳ ತರಹದ ಕಣಗಳು ? ಈ ಕ್ಷೇತ್ರದೊಂದಿಗೆ ಯಾವುದೇ ಸಂವಹನವಿಲ್ಲದೆ ಆಗಾಗಿ ದ್ರವ್ಯರಾಶಿಯೂ ಇಲ್ಲದೆ ಚಲಿಸತೊಡಗಿದವು. ಆದರೆ ಇನ್ನು ಕೆಲವು ಕಣಗಳು ಹಿಗ್ಸ್ ಕ್ಷೇತ್ರದ ಆಕರ್ಷಣೆಗೆ ಸಿಲುಕಿ (ರಾಗಿ ಗಂಜಿಯೊಳಗೆ ಚಮಚ ಅದ್ದಿದಾಗ ಅದಕ್ಕೆ ಗಂಜಿ ಅಂಟಿಕೊಳ್ಳುವಂತೆ) ದ್ರವ್ಯರಾಶಿ ಪಡಕೊಂಡವು. ಹೀಗೆ ದ್ರವ್ಯರಾಶಿ ಪಡಕೊಳ್ಳುವ ಕಣಗಳಿಗೆ 'ಹಿಗ್ಸ್ ಬೋಸಾನ್' ಎಂದು ಹೆಸರು. ಇವುಗಳನ್ನು 'ದೇವ ಕಣ' ಎಂದೂ ಕರೆಯಲಾಗುತ್ತದೆ. 'ಹಿಗ್ಸ್ ಬೋಸಾನ್' ಕಣಗಳು ತಮಗೆ ಡಿಕ್ಕಿ ಹೊಡೆಯುವ ಪರಮಾಣುವಿನ ಇತರೆಲ್ಲ ಉಪಕಣಗಳಿಗೆ ದ್ರವ್ಯರಾಶಿಯನ್ನು ನೀಡುತ್ತವೆ. ಈ ಕಣಗಳೊಂದಿಗೆ ಹೆಚ್ಚೆಚ್ಚು ಡಿಕ್ಕಿ ಹೊಡೆದಂತೆಲ್ಲ ಇತರೆ ಉಪ ಕಣಗಳು ಹೆಚ್ಚೆಚ್ಚು ದ್ರವ್ಯರಾಶಿ ಗಳಿಸಿಕೊಳ್ಳುತ್ತ ಹೋಗುತ್ತವೆ. ಹಿಗ್ಸ್–ಬೋಸಾನ್ ಕಣಗಳ ಸಂಪರ್ಕಕ್ಕೆ ಬರದೆ ಡಿಕ್ಕಿ ಹೊಡೆಸಿಕೊಳ್ಳದ ಕಣಗಳು ದ್ರವ್ಯರಾಶಿ ಗಳಿಸಿಕೊಳ್ಳದೇ ಹಗುರಾಗುತ್ತ ಹೋಗುತ್ತವೆ.


ಹಿಗ್ಸ್ ಕ್ಷೇತ್ರದ ಮಹತ್ವ:

ನಿಸರ್ಗದಲ್ಲಿ ಹೆಚ್ಚಿನ ತೂಕದ ಕಣಗಳು ಕರಗುತ್ತಾ ಹಗುರಾಗುತ್ತಾ, ಇನ್ನು ಮುಂದೆ ಕರಗದ ಒಂದು ಸುಭದ್ರ ಕಣದ ಸ್ಥಿತಿಗೆ ಬರುತ್ತವೆ. ಎಲ್ಲೆಡೆ ವ್ಯಾಪಿಸಿರುವ ಹಿಗ್ಸ್ ಕ್ಷೇತ್ರದ ಪರಿಣಾಮದಿಂದಾಗಿ ಶಕ್ತಿ ಪಡಕೊಂಡು ಉಪಕಣಗಳಾದ 'ಕ್ವಾರ್ಕ್' ನಂತವುಗಳಿಂದ ಪ್ರೋಟಾನ್‌ಗಳು ಮತ್ತು ನ್ಯೂಟ್ರಾನ್‌ಗಳು ರೂಪುಗೊಳ್ಳುತ್ತವೆ. ಪ್ರೋಟಾನ್ ಮತ್ತು ನ್ಯೂಟ್ರಾನ್‌ಗಳ ರಚನೆಯಲ್ಲಿ ಕ್ವಾರ್ಕ್ ತೂಕದ ಪಾಲು ಕೇವಲ ಶೇ. 1.0ಷ್ಟೇ. ಇನ್ನುಳಿದ ತೂಕವೆಲ್ಲ ಕ್ವಾರ್ಕ್‌ಗಳನ್ನು ಒಟ್ಟಿಗೆ ಹಿಡಿದಿಟ್ಟಿರುವ ಶಕ್ತಿಯದೇ.

ಹೀಗೆ ಹಿಗ್ಸ್ ಕ್ಷೇತ್ರವಿಲ್ಲದೇ ಕ್ವಾರ್ಕ್‌ಗಳಿಗೆ ದ್ರವ್ಯ (ತೂಕ) ಇರುತ್ತಿರಲಿಲ್ಲ, ಹಾಗೇ ನ್ಯೂಟ್ರಾನ್‌ಗಳು ಮತ್ತು ಪ್ರೋಟಾನ್‌ಗಳು ಕೂಡ ದ್ರವ್ಯರಾಶಿ ಹೊಂದಲು ಸಾಧ್ಯವಾಗುತ್ತಿರಲಿಲ್ಲ. ಅಂತಿಮವಾಗಿ ಜಗತ್ತಿನಲ್ಲಿ ಪ್ರೋಟಾನ್‌ಗಳೇ ಇರುತ್ತಿರಲಿಲ್ಲ. ನಮಗೆ ತಿಳಿದಿರುವ ಜಗತ್ತು, ಗೆಲಾಕ್ಸಿಗಳು, ಸೂಪರ್‌ನೋವಾ, ಗ್ರಹಗಳು ಮತ್ತು ನಮ್ಮನ್ನೊಳಗೊಂಡಂತೆ ಸಕಲ ಜೀವಿಗಳು ದ್ರವ್ಯರಾಶಿಯಿಲ್ಲದೆ ಅಸ್ತಿತ್ವದಲ್ಲಿರುವ ಸಾಧ್ಯವೇ ಇರುತ್ತಿರಲಿಲ್ಲ! ಹೀಗಾಗಿ ಜಗತ್ತನ್ನೆಲ್ಲ ಸರ್ವಾಂತರ್ಯಾಮಿಯಂತೆ ಮಹಾಸ್ಫೋಟ ಸಮಯದಲ್ಲಿ ಆವರಿಸಿಕೊಂಡಿದ್ದ ಹಿಗ್ಸ್ ಕ್ಷೇತ್ರಕ್ಕೆ ಥ್ಯಾಂಕ್ಸ್ ಹೇಳಬೇಕು.

ಭೂಗರ್ಭ ಪ್ರಯೋಗಾಲಯದಲ್ಲಿ ಪರಮಾಣು ಕಣಗಳ ಡಿಕ್ಕಿ

ಭೂಮಿಯಿಂದ ಸುಮಾರು 330 ಅಡಿ ಆಳದಲ್ಲಿ ನಿರ್ಮಿಸಿರುವ 27 ಮೈಲು ಉದ್ದದ ಸುರಂಗ ಮಾರ್ಗದಲ್ಲಿ ಮೊದಲ ಪ್ರೋಟಾನ್ (ಪರಮಾಣುವಿನ ಕೇಂದ್ರದಲ್ಲಿರುವ ಸಣ್ಣಕಣ) ಕಣಗಳ ರಾಶಿಯನ್ನು ಉಡಾಯಿಸುವುದರೊಂದಿಗೆ ವಿಶ್ವದ ಅತಿ ದುಬಾರಿ ವೆಚ್ಚದ ಮತ್ತು



ಮಹತ್ವಾಕಾಂಕ್ಷಿ ಪರೀಕ್ಷೆಯು ಶುಭಾರಂಭಗೊಂಡಿತು. ಪ್ರೋಟಾನ್ ಪುಂಜವನ್ನು ಪ್ರದಕ್ಷಿಣಾಕಾರದಲ್ಲಿ ಮತ್ತು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಹರಿಯಬಿಟ್ಟಾಗ ಈ ಪುಂಜವು ಬಹುತೇಕ ಬೆಳಕಿನ ವೇಗಕ್ಕೆ ಸರಿಸಮನಾದ ವೇಗದಲ್ಲಿ ಚಲಿಸುವಂತೆ ಮಹಾ ಡಿಕ್ಕಿಕಾರಕವನ್ನು ಸುರಂಗ ಮಾರ್ಗೋಪಾದಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ಎಲ್‌ಹೆಚ್‌ಸಿ ಯಂತ್ರದಲ್ಲಿ ಪ್ರೋಟಾನ್‌ಗಳು ಬೆಳಕಿನ ವೇಗದಲ್ಲಿ ಚಲಿಸಿ ಒಂದು ಸೆಕೆಂಡ್‌ಗೆ 11 ಸಾವಿರ ಪ್ರದಕ್ಷಿಣೆ ಹಾಕುತ್ತವೆ. ಇದರಿಂದಾಗಿ ಪ್ರೋಟಾನ್ ಪುಂಜದಲ್ಲಿನ ಕಣಗಳು ಒಂದಕ್ಕೊಂದು ಡಿಕ್ಕಿ ಹೊಡೆದಾಗ ಸೂರ್ಯನ ತಾಪಮಾನಕ್ಕಿಂತ ಒಂದು ಲಕ್ಷ ಪಟ್ಟು ಹೆಚ್ಚಿನ ಉಷ್ಣಾಂಶ ಹೊರಹೊಮ್ಮುತ್ತದೆ. ಈ ಉಷ್ಣಾಂಶ ಶಕ್ತಿ ಒಂದು ದ್ರವ್ಯವಾಗಿ ಮಾರ್ಪಟ್ಟು ಹೊಸ ಕಣಗಳು ಹುಟ್ಟುತ್ತವೆ. ಐನ್‌ಸ್ಟೀನ್‌ರವರ ಪ್ರಸಿದ್ಧ ಪ್ರಮೇಯ e=mc2 ಸೂತ್ರ ಇಲ್ಲಿ ಅನ್ವಯ. ಅದರಂತೆ ದ್ರವ್ಯವನ್ನು ಶಕ್ತಿಯನ್ನಾಗಿ ಅಥವಾ ಶಕ್ತಿಯನ್ನು ದ್ರವ್ಯವಾಗಿ ಮಾರ್ಪಡಿಸಬಹುದು. ಇಂಥಹ ವಾತಾವರಣದಲ್ಲಿ ಪ್ರೋಟಾನ್ ಕಣಗಳು ಮತ್ತು ಅದರಿಂದ ವಿಭಜನೆಗೊಂಡ ಕಣಗಳ ಸ್ವಭಾವವನ್ನು ಅಧ್ಯಯನ ಮಾಡಲಾಗುತ್ತದೆ. ವಿಶ್ವವು 'ಮಹಾ ಸ್ಫೋಟ' ದಿಂದ ರೂಪುಗೊಂಡ ಬಗೆಯ ವಾತಾವರಣವನ್ನು ಇದು ಹೋಲುತ್ತದೆ. ಈ ಮಹಾ ಪರೀಕ್ಷೆಯಲ್ಲಿ ಭಾರತದ ವಿಜ್ಞಾನಿಗಳೂ ಸೇರಿದಂತೆ ಜಗತ್ತಿನ ಆಯ್ದ ಅತ್ಯುತ್ತಮ 5,000 ವಿಜ್ಞಾನಿಗಳು ಕಾರ್ಯನಿರತರಾಗಿದ್ದು ಅತ್ಯಾಧುನಿಕ ತಂತ್ರಜ್ಞಾನ ಮತ್ತು ಪ್ರಯೋಗಶಾಲೆಯ ನಿರ್ಮಾಣಕ್ಕಾಗಿ ಯೂರೋಪಿಯನ್ ಪರಮಾಣು ಸಂಶೋಧನಾ ಸಂಸ್ಥೆ (ಸಿಇಆರ್‌ಎನ್) ಸುಮಾರು ರೂ. 55,000 ಕೋಟಿಗಿಂತಲೂ ಹೆಚ್ಚು ವ್ಯಯ ಮಾಡಿದೆ.

ವಿಶ್ವದ ಸೃಷ್ಟಿಯ ಶೋಧ ಮತ್ತು ಬಿಗ್‌ಬ್ಯಾಂಗ್ (ಮಹಾ ಸ್ಫೋಟ):

ಈ ವಿಶ್ವ ಅದೇಗೆ ರೂಪು ತಳೆಯಿತೆಂಬುದರ ಕುರಿತಂತೆ ಆದಿ ಕಾಲದಿಂದಲೂ ಚರ್ಚೆಗಳೂ ನಡೆಯುತ್ತಲೇ ಬಂದಿವೆ. ಇದಕ್ಕೆ ಉತ್ತರವಾಗಿ ದೈವವಾದಿಗಳು ಬ್ರಹ್ಮ, ಬೈಬಲ್, ಇತ್ಯಾದಿಗಳತ್ತ ಬೊಟ್ಟು ತೋರಿದರೆ, ವಿಜ್ಞಾನದ ಪರೀಕ್ಷೆಗಳು ಮತ್ತು ಅದರ ಭೌತಿಕ ನಿಯಮಗಳು ಇವೆಲ್ಲ ಕಲ್ಪಿತ ನಂಬಿಕೆಗಳನ್ನು ನುಚ್ಚುನೂರು ಮಾಡುತ್ತಾ ಬಂದಿವೆ.

ನಮ್ಮ ವಿಶ್ವ, ಕಾಲ ಮತ್ತು ವ್ಯಾಪ್ತಿ ಎರಡರಲ್ಲೂ ಅಪರಿಮಿತ. ಇಲ್ಲಿ ಬದಲಾವಣೆಯೊಂದೇ ಸ್ಥಿರವಾಗಿರುವುದು. ಒಂದಾನೊಂದು ಕಾಲದಲ್ಲಿ ಬಹುತೇಕ ಶೂನ್ಯದಿಂದ ಈ ವಿಶ್ವ ಮೂಡಿ ಬಂದಿದ್ದು, ಹೆಚ್ಚಿನ ಉಷ್ಣಾಂಶದಿಂದ ಹಲವು ಸಣ್ಣ ಉಂಡೆಗಳಾಗಿ ಸಿಡಿದು, ಈ ಉಂಡೆಗಳು ಹಲವು ಗೆಲಾಕ್ಸಿಗಳಾಗಿ, ನಕ್ಷತ್ರಗಳಾಗಿ, ಗ್ರಹಗಳಾಗಿ, ಭೂಮಿಯಂಥಹ ಗ್ರಹದಲ್ಲಿ ಜೀವಿಗಳು ರೂಪುಗೊಂಡು, ... ಹೀಗೆ ಸಹಸ್ರ ಸಹಸ್ರ ಕೋಟಿ ಕೋಟಿ ವರುಷಗಳಿಂದ ಮಾರ್ಪಾಡಾಗುತ್ತಾ ಬಂದಿದೆ, ಅದರ ಗಾತ್ರ ಹಿಗ್ಗುತ್ತಾ ವಿಸ್ತರಿಸುತ್ತಾ ಸಾಗುತ್ತಿದೆಯೆಂದು ಇಂದು ವಿಜ್ಞಾನಿಗಳು ನಂಬುತ್ತಾರೆ. 1370 ಕೋಟಿ ವರ್ಷಗಳ ಹಿಂದೆ ಜಗತ್ತು ಮಹಾಶೂನ್ಯದಿಂದ ಸ್ಫೋಟಗೊಂಡಿತು. ಆ ಸ್ಫೋಟದಿಂದ ಉದ್ಭವಿಸಿದ ಹಿಗ್ಸ್ ಬೋಸನ್ ಎಂಬ ಕಣಗಳು ಪರಮಾಣುಗಳಿಗೆ ತೂಕ ತುಂಬಿದವು. ಇದರಿಂದ ತಾರೆಗಳು, ನಕ್ಷತ್ರಗಳು, ಗ್ರಹಗಳು ಹುಟ್ಟಿಕೊಂಡವು. ಇದನ್ನು 'ಮಹಾ ಸ್ಫೋಟ' ಸಿದ್ಧಾಂತೆ (ಬಿಗ್‌ಬ್ಯಾಂಗ್ ಥಿಯರಿ) ಎಂದು ಕರೆಯಲಾಗುತ್ತಿದ್ದು, ಹಲವು ಪರೀಕ್ಷೆಗಳು ಮತ್ತು ಪುರಾವೆಗಳ ಬಲದಿಂದಾಗಿ ಬಹುತೇಕ ವಿಜ್ಞಾನಿಗಳು ಈ ಸಿದ್ಧಾಂತವನ್ನು ಒಪ್ಪುತ್ತಾರೆ.

1980ರಲ್ಲಿ ಭೌತವಿಜ್ಞಾನ ಕ್ಷೇತ್ರದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ವಿಜ್ಞಾನಿ ಜೇಮ್ಸ್ ವಾಟ್ಸನ್ ಕ್ರೋನಿನ್ ಹೇಳುವಂತೆ "ನಾವು ಇದುವರೆಗೂ ವಿಶ್ವದ ಕೇವಲ ಶೇ. 4.0 ಭಾಗವನ್ನಷ್ಟೇ ಬಲ್ಲೆವು. ಆದರೆ ಎಲ್ಲೆಡೆ ಹರಡಿರುವ ಮತ್ತು ಈ ವಿಶ್ವವನ್ನು ಹಿಡಿದಿಟ್ಟು ಅದರ ವಿಸ್ತರಣೆಯ ಚಲನೆಗೆ ಕಾರಣವಾಗಿರುವ ಇನ್ನೂ ಶೇ. 96 ರಷ್ಟು ಭಾಗವನ್ನು ಅರಿಯಬೇಕಿದೆ."

ಪ್ರಸ್ತುತ ನಡೆಸುತ್ತಿರುವ ದೈತ್ಯ ಡಿಕ್ಕಿಕಾರಕ ಪರೀಕ್ಷೆಯನ್ನು ಮಾನವ ಇತಿಹಾಸದಲ್ಲೇ ಮಹತ್ತರ ಮೈಲುಗಲ್ಲೆಂದು ಬಣ್ಣಿಸಿರುವ ಬ್ರಿಟನ್ನಿನ ಪ್ರಸಿದ್ಧ ಖಗೋಳ ವಿಜ್ಞಾನಿ ಮಾರ್ಟಿನ ರೀಸ್ "ಅಸಂಖ್ಯಾತ ಸಂಖ್ಯೆಯ ವಿಶ್ವಗಳಿದ್ದು ಪ್ರತಿಯೊಂದು ಕೂಡ ವಿವಿಧ ರೀತಿಯ ಸ್ವರೂಪ, ವಾತಾವರಣ, ಗುಣಲಕ್ಷಣಗಳನ್ನು ಹೊಂದಿವೆ. ನಾವು ಬದುಕಲು ಸೂಕ್ತವಿರುವ ಗುಣಲಕ್ಷಣ ಮತ್ತು ವಾತಾವರಣ ಭೂಮಿಯಲ್ಲಿರುವುದರಿಂದ ನಾವಿಲ್ಲಿ ಬದುಕುತ್ತಿದ್ದೇವೆ. ಸಹಸ್ರ ಸಹಸ್ರ ಕೋಟಿ ಕೋಟಿ ವರುಷಗಳ ಹಿಂದೆ ಉರಿದು ಹೋದ ನಕ್ಷತ್ರಗಳ ಬೂದಿಯಿಂದ ನಾವು ನಿರ್ಮಿತವಾಗಿದ್ದೇವೆ" ಎನ್ನುತ್ತಾರೆ.

ಹಲವು ರಹಸ್ಯಗಳಿಗೆ ಉತ್ತರದ ನಿರೀಕ್ಷೆ:

ಜೀವವಿರುವ ಮತ್ತು ನಿರ್ಜೀವವಾದ ಎಲ್ಲ ವಸ್ತುಗಳು ಮೂಲ ವಸ್ತುಗಳಿಂದ ಆಗಿವೆ. ಆದರೆ ಈ ಮೂಲವಸ್ತುಗಳ ಒಳಗೇನಿದೆ? ಕಣಗಳು ಹೇಗೆ ದ್ರವ್ಯರಾಶಿಯನ್ನು ಗಳಿಸಿಕೊಳ್ಳುತ್ತವೆ? ಇದಕ್ಕೆ ಹಿಗ್ಸ್ ಬೋಸಾನ್‌ಗಳು ಕಾರಣವೆಂದು ಹೇಳಲಾಗುತ್ತದೆ. ಇವುಗಳನ್ನು 'ದೇವ ಕಣ' ಎಂದು ಸ್ಟೀಫನ್ ಹಾಕಿಂಗ್ ಹೇಳುತ್ತಾರೆ. ಇವುಗಳ ಕುರಿತು ಇನ್ನಷ್ಟು ಮಾಹಿತಿಯನ್ನು ಪಡೆಯಬಹುದೇ? ಮಹಾಸ್ಫೋಟದ ನಂತರ ನಿರ್ದ್ರವ್ಯ (ಆಂಟಿ ಮ್ಯಾಟರ್) ಎಲ್ಲಿ ಹೋಯಿತು? ಇತ್ಯಾದಿಯಂಥಹ ಹತ್ತಲವು ರಹಸ್ಯ ಪ್ರಶ್ನೆಗಳಿಗೆ ಉತ್ತರ ಪಡೆಯುವ ಕೌತುಕ ವಿಜ್ಞಾನಿಗಳದು.

ಇಂಥಹದೊಂದು ಮಹಾಪರೀಕ್ಷೆಯಿಂದ ತಕ್ಷಣದಲ್ಲೇ ಫಲಿತಾಂಶಗಳು ಲಭಿಸುತ್ತವೆಂದುಕೊಳ್ಳದಿದ್ದರೂ ನಮ್ಮ ವಿಶ್ವವನ್ನು ಅರಿತುಕೊಳ್ಳುವ ಶೋಧನಾ ಮಾರ್ಗದಲ್ಲಿ ಇದೀಗ ಲಭ್ಯವಿರುವ ಫಲಿತಾಂಶ ಒಂದು ಮಹತ್ತರ ಹೆಜ್ಜೆಯೇ ಸರಿ. ಇದಕ್ಕಾಗಿ ನಮ್ಮ ವಿಜ್ಞಾನಿಗಳನ್ನು ಅಭಿನಂದಿಸೋಣ.



Everybody loves a good Drought
ಪಿ.ಸಾಯಿನಾಥ್‌ರವರ ಒಂದು ಅನನ್ಯ ಕೃತಿ. ಅದನ್ನು **'ಬರ ಅಂದ್ರೆ ಎಲ್ಲರಿಗೂ ಇಷ್ಟ'** ಆಗಿ ಕನ್ನಡಕ್ಕೆ ತಂದಿದ್ದಾರೆ ಜಿ.ಎನ್.ಮೋಹನ್. ಜುಲೈ 01, 2012 – ಕನ್ನಡ ಪತ್ರಿಕೋದ್ಯಮ ದಿನದಂದು ಈ ಕೃತಿಯು ಬಿಡುಗಡೆಗೊಂಡಿದೆ. ಸಮಾರಂಭದ ವರದಿ, ಇತರ ಸ್ವಾರಸ್ಯಗಳನ್ನು ನಿರೀಕ್ಷಿಸಿ....

JANASHAKTHI KANNADA VARA PATRIKE JUL 15, 2012 Price : Rs. 5/- RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2010-12 Posted at MBC Bangalore GPO

'ದೇವ ಕಣ'ದ ಶೋಧನೆಯಲ್ಲಿ ವಿಜ್ಞಾನಿಗಳ ಯಶಸ್ಸು

ನಿಸರ್ಗವನ್ನು ಅರ್ಥ ಮಾಡಿಕೊಳ್ಳುವತ್ತ ಮಹತ್ತರ ಹೆಜ್ಜೆ




ದೇವ ಕಣದ ಶೋಧನೆಯಲ್ಲಿ ಜಿನೀವಾದಲ್ಲಿ ವಿಜ್ಞಾನಿಗಳು ಆರಂಭಿಸಿದ ದೈತ್ಯ ಡಿಕ್ಕಿಕಾರಕ (ಲೈಟ್ ಹ್ಯಾಡ್ರನ್ ಕೊಲೈಡರ್) ಪ್ರಯೋಗ ಒಂದು ಮಹತ್ತರ ಘಟ್ಟ ತಲುಪಿದೆಯೆಂದೇ ಹೇಳಬಹುದು. ಪ್ರಯೋಗದ ಆರಂಭಿಕ ದಿನಗಳಲ್ಲಿ ಕೆಲವು ಆಸ್ತಿಕ ಶಿರೋಮಣಿಗಳು ಮತ್ತು ಪತ್ರಿಕೆಗಳಂತೂ ವಿಜ್ಞಾನಿಗಳ ಪ್ರಯೋಗದಿಂದ ಪ್ರಳಯವೋ, ತ್ಸುನಾಮಿ-ತರಹದ ಕಂಪನದಂಥಹ ಕೇಡು ಜರುಗಲಿದೆಯೆಂದು ಅನಗತ್ಯ ಭಯ ವ್ಯಕ್ತಪಡಿಸಿದ್ದರು!

ಸಿ ಇ ಆರ್ ಎನ್ (ಯೂರೋಪ್ ನ್ಯೂಕ್ಲಿಯಾರ್ ಸಂಶೋಧನಾ ಸಂಸ್ಥೆ) ಸಂಸ್ಥೆಯ ವಿಜ್ಞಾನಿಗಳು ತಾವು ನಡೆಸುತ್ತಿರುವ ಸಣ್ಣಾತಿಸಣ್ಣ ಕಣಗಳ ಕುರಿತ ಪ್ರಾಥಮಿಕ ಮಾಹಿತಿಯನ್ನು ಅತೀವ ಸಂತಸದಿಂದ ಹಂಚಿಕೊಂಡರು. ಸಂಸ್ಥೆಯ ಪ್ರಧಾನ ನಿರ್ದೇಶಕರಾದ ರಾಲ್ಫ್ ಹ್ಯೂರ್ "ಇದೀಗ ನಾವು ಬೋಸಾನ್ ಅಥವಾ ಅದೇ ತರಹದ ಕಣದ ಇರವನ್ನು ಖಚಿತಪಡಿಸಿಕೊಂಡಿದ್ದೇವೆ, ಇನ್ನು ಈ ಬೋಸನ್ ಕಣದ ಸ್ವರೂಪವನ್ನು ತಿಳಿದುಕೊಳ್ಳಬೇಕಿದೆ. ಇದರಿಂದ ನಮ್ಮ ನಿಸರ್ಗವನ್ನು ಅರ್ಥಮಾಡಿಕೊಳ್ಳುವ ನಿಟ್ಟಿನಲ್ಲಿ ನಾವು ಮಹತ್ತರ ಹೆಜ್ಜೆ ಇಟ್ಟಿದ್ದೇವೆ" ಎಂದು ಎಚ್ಚರಿಕೆಯಿಂದ ನುಡಿದರು. ನಾವು 125 ಗಿಗಾ ಎಲೆಕ್ಟ್ರಾನ್ ವೋಲ್ಟ್ ದ್ರವ್ಯರಾಶಿಯ (ಅಂದರೆ ಪ್ರೋಟಾನ್ ತೂಕಕ್ಕಿಂತ 133 ಪಟ್ಟು ಹೆಚ್ಚು) ಒಂದು ಹೊಸ ಕಣವನ್ನು 5 ಸಿಗ್ಮಾ ಮಟ್ಟದಲ್ಲಿ (ಅಂದರೆ ಶೇ. 99.9999 ಖಚಿತ) ಗುರುತಿಸಲು ಸಾಧ್ಯವಾಗಿದೆ ಎಂದರು.



ವೈಜ್ಞಾನಿಕ ಪರಿಭಾಷೆಯಲ್ಲಿ ಈ ಉಪಕಣವನ್ನು ಹಿಗ್ಸ್-ಬೋಸಾನ್ ಕಣವೆಂದು ಕರೆಯಲಾಗುತ್ತದೆ. ಇದುವರೆಗೂ ಇದನ್ನು ಪ್ರಮೇಯಗಳಲ್ಲಷ್ಟೇ ನಿರೂಪಿಸಲಾಗುತ್ತಿತ್ತು. ಇದರ ಇರುವು ಸುಲಭವಾಗಿ ನಮಗೆ ದಕ್ಕದಿದ್ದ ಕಾರಣ ಅದನ್ನು 'ದೇವಕಣ' ಎಂದು ಕರೆದರು. (ಆದರೆ ದೇವರ ಪರಿಕಲ್ಪನೆಗೂ ಈ ಕಣಕ್ಕೂ ಏನೇನೂ ಸಂಬಂಧ ಕಲ್ಪಿಸಬೇಕಿಲ್ಲ!). ಇದರ ಅಸ್ತಿತ್ವದ ಕುರಿತು ಪ್ರಯೋಗದ ಮೂಲಕ ಇದೀಗಷ್ಟೇ ಶೋಧನೆ ಮಾಡಲಾಗಿದೆ. ಇದರಿಂದ ವಸ್ತುಗಳು ಏಕೆ ದ್ರವ್ಯರಾಶಿ (ಇಂಗ್ಲೀಷಿನಲ್ಲಿ ಮಾಸ್) ಗಳಿಸುತ್ತವೆ ಎಂಬುದನ್ನು ತಿಳಿಯಲು ಸಾಧ್ಯವಾಗುತ್ತದೆ. ದ್ರವ್ಯರಾಶಿಯೊಂದಿಗೆ ಗುರುತ್ವಾಕರ್ಷಣ ಶಕ್ತಿಯ ಅಂಶವನ್ನು ಒಗ್ಗೂಡಿಸಿದಾಗ ಆ ಪದಾರ್ಥದ ತೂಕ ಸಿಗುತ್ತದೆ. ಈ ಶೋಧನೆ ನ್ಯೂಟನ್ ಗುರುತ್ವಾಕರ್ಷಣ ಶಕ್ತಿ ಎಂಬ ವಿಚಾರವನ್ನು ಶೋಧಿಸಿದಷ್ಟೇ ಮಹತ್ತರವಾದದ್ದು. 'ಗುರುತ್ವಾಕರ್ಷಣ ಶಕ್ತಿ' ಎಂಬುದು ನ್ಯೂಟನ್ ಕಂಡುಹಿಡಿಯುವ ಮೊದಲೂ ಇತ್ತು. ಆದರೆ ನ್ಯೂಟನ್ ಅದನ್ನು ಕಂಡುಹಿಡಿದ ಮೇಲೆ ಜಗತ್ತಿನ ಕುರಿತ ನಮ್ಮ ತಿಳುವಳಿಕೆಯಲ್ಲಿ ದೊಡ್ಡ ಮೈಲಿಗಲ್ಲು. ಹಾಗೆಯೇ ಚಾರ್ಲ್ಸ್ ಡಾರ್ವಿನ್ ಜೀವಿಗಳ ಉಗಮವನ್ನು ವಿವರಿಸಲು ಜೀವ ವಿಕಾಸ ಸಿದ್ಧಾಂತವನ್ನು ರೂಪಿಸಿದ್ದು ನಮ್ಮ ಚಿಂತನೆಯನ್ನೇ ಬದಲಿಸಿತು. ಇದೀಗ ಹಿಗ್ಸ್-ಬೊಸಾನ್ ಉಪಕಣದ ಆವಿಷ್ಕಾರವೂ ಅದೇ ರೀತಿಯದಾಗಿದ್ದು ಈ ಜ್ಞಾನವನ್ನು ನಾವು ಹಲವು ಶೋಧನೆಗಳಲ್ಲಿ ಬಳಸಿಕೊಳ್ಳಬಹುದು.



ಕಣ ಭೌತಶಾಸ್ತ್ರ (ಪಾರ್ಟಿಕಲ್ ಫಿಸಿಕ್ಸ್) ಮತ್ತು ಮೂಲಕಣಗಳ ಶೋಧ:

ವಿಜ್ಞಾನಿಗಳನ್ನು ಕಾಡುತ್ತಿರುವ ಮೂಲಭೂತ ಸಮಸ್ಯೆಯಾದ ಸೃಷ್ಟಿರಹಸ್ಯವನ್ನು ಅರಿಯುವಲ್ಲಿ ಕಣಭೌತ ವಿಜ್ಞಾನ ನೆರವಾಗುತ್ತಿದೆ. ನಮ್ಮ ಜಗತ್ತು ಇದುವರೆಗೂ ನಮಗೆ ಲಭ್ಯವಿರುವ 109 ಪರಮಾಣುಗಳಿಂದ ರಚಿತವಾಗಿದೆ. ಪ್ರತಿ ಪರಮಾಣುವಿನ ಕೇಂದ್ರದಲ್ಲಿ ಪ್ರೋಟಾನು ಮತ್ತು ನ್ಯೂಟ್ರಾನ್‌ಗಳಿದ್ದು ಅವುಗಳ ಸುತ್ತಲೂ ಎಲೆಕ್ಟ್ರಾನ್‌ಗಳು ಸುತ್ತು ಹಾಕುತ್ತಿರುತ್ತವೆ. ಪರಮಾಣುಗಳಲ್ಲಿ ಜಲಜನಕ ಪರಮಾಣುವೇ ಸಣ್ಣದು. ಅದರಲ್ಲಿರುವ ಒಂದೇ ಒಂದು ಪ್ರೋಟಾನ್ ಸುತ್ತಲೂ ಒಂದು ಎಲೆಕ್ಟ್ರಾನ್ ಪ್ರದಕ್ಷಿಣೆ ಹಾಕುತ್ತಿರುತ್ತದೆ. ಇಂತಹ ಪ್ರೋಟಾನ್‌ನ್ನು ಮತ್ತಷ್ಟು ವಿಭಜಿಸಿ ಉಪಕಣಗಳಾಗಿ ವಿಭಜಿಸ ಬಹುದು. ಉಪಕಣಗಳಾಗಿ ವಿಭಜಿಸಲು ಸಾಧ್ಯವಾಗದೆಂದು ಭಾವಿಸಲಾಗಿರುವ ವಸ್ತು ಘಟಕವೇ ಮೂಲಕಣ; ಸ್ವತಂತ್ರವಾಗಿ ಉಳಿಯಬಲ್ಲ ಹಾಗೂ ಶಕ್ತಿಯುಳ್ಳ ವಸ್ತುವಿನ ಸರಳ ರೂಪ. ಇನ್ನೂ ಹೆಚ್ಚು ಸಣ್ಣ ಘಟಕಗಳಾಗಿ ಒಡೆಯಲಾಗದ ಕಣ. ಇವುಗಳನ್ನು ಲೆಪ್ಟಾನ್ ಮತ್ತು ಹೇಡ್ರಾನ್ ಹಾಗೂ ಗೇಜ್ ಬೋಸಾನ್‌ಗಳೆಂದು ವಿಂಗಡಿಸಲಾಗುತ್ತದೆ. ಗೇಜ್ ಬೋಸಾನ್ ಕಣಗಳಲ್ಲಿ ನಾಲ್ಕು ಮಾದರಿಗಳಿವೆ: ಪೋಟಾನ್, ಗ್ಲೂಆನ್, ವೆಕ್ಟರ್ ಬೋಸಾನ್ ಮತ್ತು ಗ್ರಾವಿಟಾನ್. ಬಿಗ್‌ಬ್ಯಾಂಗ್ ಪರಿಕಲ್ಪನೆಯಲ್ಲಿ ಹೇಡ್ರಾನ್‌ಗಳ ಸೃಷ್ಟಿಯಲ್ಲಿ "ಕ್ವಾರ್ಕ್‌ಗಳದ್ದೇ ಪ್ರಧಾನಪಾತ್ರ



ಕಣ ಭೌತಶಾಸ್ತ್ರದ 'ಸ್ಟ್ಯಾಂಡರ್ಡ್ ಮಾಡೆಲ್' ಸಿದ್ಧಾಂತ

ನಂತರದಲ್ಲಿ ಕಣ ಭೌತಶಾಸ್ತ್ರದ 'ಸ್ಟ್ಯಾಂಡರ್ಡ್ ಮಾಡೆಲ್' ಸಿದ್ಧಾಂತವು ವಿಶ್ವ ಸೃಷ್ಟಿ ರಹಸ್ಯದ ವಿವರಣೆ ನೀಡುತ್ತಿದೆ. ಈ ಸಿದ್ಧಾಂತವು ನಿಸರ್ಗದ ಕುರಿತ ವಿವರಣೆ ನೀಡುವ ನಾಲ್ಕು ಮೂಲಭೂತ ಶಕ್ತಿಗಳಲ್ಲಿ ಮೂರನ್ನು ತನ್ನಲ್ಲಿ ಅಳವಡಿಸಿಕೊಂಡಿದೆ: ಬಲಶಾಲಿ ಮತ್ತು ದುರ್ಬಲ ಪರಮಾಣು ಶಕ್ತಿಗಳು, ಹಾಗೂ ಎಲೆಕ್ಟ್ರೋ-ಮ್ಯಾಗ್ನೆಟಿಕ್ ಶಕ್ತಿ. ನಾಲ್ಕನೆಯದಾದ ಗುರುತ್ವಾಕರ್ಷಣ ಶಕ್ತಿಯನ್ನು ಈ ಸಿದ್ಧಾಂತದೊಳಗೆ ಅಳವಡಿಸಲು ಸಾಧ್ಯವಾಗದ್ದರಿಂದ ಈ ಸಿದ್ಧಾಂತ ಪೂರ್ಣವಾಗಿಲ್ಲ. ಭೌತಶಾಸ್ತ್ರದ 'ಸ್ಟ್ಯಾಂಡರ್ಡ್ ಮಾಡೆಲ್' ಸಿದ್ಧಾಂತವು ಹಲವಾರು ವಿವರಣೆಗಳನ್ನು ನೀಡಿದ್ದರೂ ಕೆಲವು ಪ್ರಶ್ನೆಗಳನ್ನು ವಿವರಿಸಲಾಗಿಲ್ಲ. ಅಂತಹ ಪ್ರಮುಖ ಪ್ರಶ್ನೆ: ಕಣಗಳೇಕೆ ದ್ರವ್ಯರಾಶಿಯನ್ನು ಹೊಂದುತ್ತವೆ? ಇದಕ್ಕೆ ಉತ್ತರವಾಗಿ ಪೀಟರ್ ಹಿಗ್ಸ್ ಎಂಬ ವಿಜ್ಞಾನಿ ಹಿಗ್ಸ್ ಎಂಬ ಕ್ಷೇತ್ರದ ವಿವರಣೆ ನೀಡಿದ. ಈ ಸಿದ್ಧಾಂತದ ಪರಿಕಲ್ಪನೆ ತಿಳಿಸುವಂತೆ ಮೇಲೆ ತಿಳಿಸಿದ ನಾಲ್ಕು ಮೂಲಭೂತ ಶಕ್ತಿಗಳಿಂದ ನಿರ್ದೇಶಿಸಲ್ಪಡುವ ಒಟ್ಟಾರೆ 12 ಕಣಗಳ ಪೈಕಿ ಈಗಾಗಲೇ 11 ಕಣಗಳನ್ನು ಶೋಧಿಸಲಾಗಿದ್ದು, 'ಹಿಗ್ಸ್'ನ್ನು ಇದುವರೆಗೂ ಶೋಧನೆ ಮಾಡಲಾಗಿರಲಿಲ್ಲ. ಈ ಸಿದ್ಧಾಂತ, ಪರಮಾಣುವಿನಲ್ಲಿ 'ಹಿಗ್ಸ್ ಬೋಸಾನ್' ಎಂಬ ಉಪಕಣಗಳಿವೆಯೆಂದು ತಿಳಿಸಿತ್ತೇ ಹೊರತು ಅದು ಗ್ರಹಿಕೆಗೆ ಸಿಕ್ಕಿರಲಿಲ್ಲ.

ವಿಶ್ವ ಅಪರಿಮಿತವಾಗಿರುವುದರಿಂದ 'ಸ್ಟ್ಯಾಂಡರ್ಡ್ ಮಾಡೆಲ್' ಸಿದ್ಧಾಂತವು ಅದರ ಒಂದು ಭಾಗವನ್ನಷ್ಟೇ ವಿವರಿಸುತ್ತದೆ. ನಮಗೆ ಅಗೋಚರವಿರುವ ಭಾಗವನ್ನು ವಿಜ್ಞಾನಿಗಳು ಕತ್ತಲೆಯ ಭಾಗ ಎನ್ನುತ್ತಾರೆ. ಉದಾಹರಣೆಗೆ ಗೆಲಾಕ್ಸಿಗಳು ನಮಗೆ ತಿಳಿದಿರುವ ಶಕ್ತಿಗಳ ವೇಗಕ್ಕಿಂತ ಹೆಚ್ಚು ವೇಗದಲ್ಲಿ ಒಂದಕ್ಕೊಂದು ದೂರ ಸರಿಯುತ್ತಿವೆ. ಇದನ್ನು ಕತ್ತಲೆಯ ಶಕ್ತಿ ಎನ್ನುತ್ತಾರೆ. ಈ ಕತ್ತಲೆಯ ಭಾಗವೇ ಶೇ. 96 ರಷ್ಟಿದೆ. ಇದರಾಚೆ ಹಲವು ಪರ್ಯಾಯ ವಿಶ್ವಗಳಿರಬಹುದು. ಹೀಗಾಗಿ 'ಸ್ಟ್ಯಾಂಡರ್ಡ್ ಮಾಡೆಲ್' ಸಿದ್ಧಾಂತವು ಜಗತ್ತನ್ನು ಸಮರ್ಥವಾಗಿ ವಿವರಿಸುವ ಸಿದ್ಧಾಂತವೆಂದು ಒಪ್ಪುವುದು ಅಥವಾ ನಿರಾಕರಿಸುವುದಕ್ಕೂ ಈ ಪ್ರಯೋಗ ಬಳಕೆಯಾಗಿದೆ.

ದೇವಕಣ - 'ಹಿಗ್ಸ್ ಬೋಸಾನ್':

ಪರಮಾಣುವಿನಲ್ಲಿ ಕಂಡು ಬರುವ ಒಂದು ರೀತಿಯ ಉಪ-ಕಣಕ್ಕೆ 'ಬೋಸಾನ್' ಎಂದು

ಮುಟ 15 ಕ್ಕೆ

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH